ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಬುಧವಾರ, ಸೆಪ್ಟೆಂಬರ್ 06, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 115 RNI : 27369/75

janathavani@mac.com
www.janathavani.com
08192 254736 91642 99999

## ಶಿಕ್ಷಣಕ್ಕೆ ಮೂಲಭೂತ ಸೌಲಭ್ಯ: ಎಸ್ಸೆಸ್ಸೆಂ

### ಉಡುಪಿ, ಮಂಗಳೂರು ಹಿಂದೆ ಹಾಕಿ ಜಿಲ್ಲೆ ಮುಂಚೂಣಿಗೆ ಬರಲಿ ಎಂದ ಸಚಿವರು

ದಾವಣಗೆರೆ, ಸೆ. 5 - ಜಿಲ್ಲೆಯಲ್ಲಿ ಶಿಕ್ಷಣಕ್ಕೆ ಅಗತ್ಯವಿರುವ ಮೂಲಭೂತ ಸೌಲಭ್ಯ ಕಲ್ಪಿಸುವುದಾಗಿ ಹೇಳಿರುವ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಿಕ್ಷಣದಲ್ಲಿ ಜಿಲ್ಲೆಯನ್ನು ಮುಂಚೂಣಿ ಹಂತಕ್ಕೆ ತರಲು ಶಿಕ್ಷಕರು ಶ್ರಮಿಸಬೇಕು ಎಂದು ಕರೆ ನೀಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಶಿಕ್ಷಕರ ದಿನಾಚರಣೆ, ಜಿಲ್ಲಾ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿ ಪುರಸ್ಕಾರ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

2001ರಲ್ಲಿ ಜಿಲ್ಲೆ ಶಿಕ್ಷಣದಲ್ಲಿ ರಾಜ್ಯದಲ್ಲೇ ಮೂರನೇ ಸ್ಥಾನದಲ್ಲಿತ್ತು. ಈಗ ಹಿಂದೆ ಹೋಗಿದೆ. ಮತ್ತೆ ಮುಂಚೂಣಿಗೆ ತರುವುದು ಶಿಕ್ಷಕರ ಕೈಯ್ಯಲ್ಲಿದೆ ಎಂದು ಹೇಳಿದರು.

ಶಿಕ್ಷಣದಲ್ಲಿ ಭ್ರಷ್ಟಾಚಾರ ಇರಬಾರದು. ಆದರೆ, ಹಿಂದಿನ ಸರ್ಕಾರದಲ್ಲಿ ಶಿಕ್ಷಣ ವಲಯವನ್ನು ಹಾಳು ಮಾಡಲಾಗಿದೆ. ಮತ್ತೆ ಭ್ರಷ್ಟಾಚಾರಕ್ಕೆ ಅವಕಾಶ ನೀಡುವುದಿಲ್ಲ ಎಂದೂ ಸಚಿವರು ಹೇಳಿದರು.



**ಪ್ರಶಸ್ತಿ ಕಾಯಕದಿಂದ ಪಡೆಯಿರಿ, ಹಣದಿಂದ ಖರೀದಿಸಬೇಡಿ**

ಉತ್ತಮ ಶಿಕ್ಷಕರ ಪ್ರಶಸ್ತಿ ಪಡೆಯಲು ಪ್ರಭಾವ ಬೀರುವ ಸಲುವಾಗಿ ಶಿಕ್ಷಕರು ನನಗೆ ಕರೆ ಮಾಡಿದಾಗ ನೋವಾಗುತ್ತದೆ. ಪ್ರಶಸ್ತಿಗಳು ಕಾಯಕದಿಂದ ಬರಬೇಕೇ ಹೊರತು, ಪ್ರಭಾವ ಇಲ್ಲವೇ ಹಣದಿಂದ ಖರೀದಿಸಬಾರದು ಎಂದು ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

ಪ್ರಶಸ್ತಿಗೆ ಆಯ್ಕೆ ಮಾಡುವಾಗಲೂ ಈ ಬಗ್ಗೆ ಗಮನಿಸಬೇಕು. ಕಾಯಕ ಮಾಡಿದವರನ್ನು ಮೂಲೆಗುಂಪು ಮಾಡದೇ, ಅರ್ಹರಿಗೆ ಪ್ರಶಸ್ತಿ ಕೊಡಬೇಕು ಎಂದರು.

ಶಾಲಾ ಕೊಠಡಿ, ಸ್ಮಾರ್ಟ್ ಕ್ಲಾಸ್ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಉಡುಪಿ ಹಾಗೂ ಮಂಗಳೂರು ಜಿಲ್ಲೆಗಳನ್ನೂ ಹಿಂದೆ ಹಾಕಿ ದಾವಣಗೆರೆ ಶಿಕ್ಷಣದಲ್ಲಿ ಮುಂದೆ ಬರಬೇಕು ಎಂದು ಕರೆ ನೀಡಿದರು.

ಶಿಕ್ಷಕರ ಸಂಘಕ್ಕೆ ನಿವೇಶನ, ಪಿಎಸ್‌ಟಿ ಹಾಗೂ ಜಿಪಿಟಿ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಶಿಕ್ಷಣ ಸಚಿವರು ಹಾಗೂ ಮುಖ್ಯಮಂತ್ರಿಗಳ ಜೊತೆ ಚರ್ಚಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಆನಗೋಡಿನ ಸರ್ಕಾರಿ (4ನೇ ಪುಟಕ್ಕೆ)

## ನಮ್ಮ ದೇಶ ಭಾರತ

### ಇಂಡಿಯಾ ಬಿಟ್ಟು ಭಾರತ ಬಳಸಿದ ಕೇಂದ್ರ

ನವದೆಹಲಿ, ಸೆ. 5 – ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜಿ20 ಔತಣ ಕೂಟಕ್ಕೆ ನೀಡಿದ ಆಹ್ವಾನ ಪತ್ರಿಕೆಯಲ್ಲಿ ಪ್ರೆಸಿಡೆಂಟ್ ಆಫ್ ಭಾರತ (ಭಾರತದ ರಾಷ್ಟ್ರಪತಿ) ಎಂದು ತಿಳಿಸಲಾಗಿದೆ. ಇದರಿಂದಾಗಿ ದೇಶದಲ್ಲಿ ವ್ಯಾಪಕ ಚರ್ಚೆ ಆರಂಭವಾಗಿದೆ.

ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಆಹ್ವಾನ ಪತ್ರಿಕೆಯನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಶನಿವಾರ ಭಾರತ ಮಂಟಪಂನಲ್ಲಿ ನಡೆಯಲಿರುವ ಔತಣ ಕೂಟಕ್ಕೆ ಈ ಆಹ್ವಾನ ನೀಡಲಾಗಿದೆ.

ಭಾರತ ಎಂಬ ಪದ ಬಳಸಿರುವುದನ್ನು ಪ್ರಸ್ತಾಪಿಸಿರುವ ಪ್ರಧಾನ್, ರಾಷ್ಟ್ರಗೀತೆಯ ಮೊದಲ ಸಾಲನ್ನು ಉಲ್ಲೇಖಿಸಿ, ಅದರಲ್ಲಿಯೂ ಭಾರತ ಎಂಬ ಪದ ಇರುವುದರ ಬಗ್ಗೆ ಗಮನ ಸೆಳೆದಿದ್ದಾರೆ.

**ಜಿ20 ಆಹ್ವಾನ ಪತ್ರಿಕೆ ಬಗ್ಗೆ ವಿಪಕ್ಷಗಳ ಆಕ್ಷೇಪ, ಬಿಜೆಪಿ ಸಮರ್ಥನೆ**

ಸಾಮಾಜಿಕ ಜಾಲತಾಣಗಳಲ್ಲಿ ಈ ಆಹ್ವಾನ ಪತ್ರಿಕೆ ಯನ್ನು ವ್ಯಾಪಕವಾಗಿ ಹಂಚಿಕೊಳ್ಳ ಲಾಗಿದೆ. ಆಹ್ವಾನ ಪತ್ರಿಕೆಯಲ್ಲಿ ಭಾರತ ಎಂಬ ಪದ ಬಳಸಿರುವುದಕ್ಕೆ ಆಕ್ಷೇಪಿಸಿರುವ ಪ್ರತಿಪಕ್ಷಗಳು, ಐ.ಎನ್.ಡಿ.ಐ.ಎ. ಮೈತ್ರಿಕೂಟಕ್ಕೆ ಹೆದರಿ ಬಿಜೆಪಿ ಸರ್ಕಾರ ಭಾರತ ಬಳ ಸುತ್ತಿದೆ ಎಂದು ಆರೋಪಿಸಿವೆ. ಆದರೆ, ಭಾರತ ಎಂಬ ಪದವೂ ಸಂವಿಧಾನದ ಭಾಗವಾಗಿದೆ. ಇದರ ಬಳಕೆಯಲ್ಲಿ ತಪ್ಪೇನೂ ಇಲ್ಲ ಎಂದು ಬಿಜೆಪಿ ಸಮರ್ಥಿಸಿಕೊಂಡಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಇತಿಹಾಸ ತಿರುಚುವುದನ್ನು ಹಾಗೂ ಭಾರತ ಒಡೆಯುವುದನ್ನು ಮುಂದುವರೆಸಿರ ಬಹುದು. ಆದರೆ, ನಾವು ಹಿಂಜರಿಯುವುದಿಲ್ಲ ಎಂದಿದ್ದಾರೆ.

ಇಂಡಿಯಾ ಎಂದರೆ ಭಾರತ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಆದರೆ, ಪ್ರಪಂಚ ನಮ್ಮನ್ನು ಇಂಡಿಯಾ ಎಂದೇ ಗುರುತಿಸುತ್ತದೆ. ಭಾರತ ಎಂಬುದಷ್ಟೇ ಬಳಸಬೇಕು ಎಂಬ ಪರಿಸ್ಥಿತಿ ಹಠಾತ್ತನೆ ಬಂದಿದೆಯೇ? ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರಶ್ನಿಸಿದ್ದಾರೆ. ಐ.ಎನ್.ಡಿ.ಐ.ಎ. ಎಂಬುದು ಪ್ರತಿಪಕ್ಷಗಳ ಒಗ್ಗಟ್ಟನ್ನು ತೋರಿಸುತ್ತಿದೆ. ಇದಕ್ಕೆ ಹೆದರಿ ಬಿಜೆಪಿ ಭಾರತ ಎಂಬ ಪದ ಬಳಕೆಗೆ (2ನೇ ಪುಟಕ್ಕೆ)

### ಯಾವುದಾದರೂ ಹೇಳಿ ಎಂದಿದ್ದ ಸುಪ್ರೀಂ ಕೋರ್ಟ್

ನವದೆಹಲಿ, ಸೆ.5 – ಕೇಂದ್ರ ಸರ್ಕಾರ ಎಲ್ಲ ಸಂದರ್ಭಗಳಲ್ಲಿ ಭಾರತ ಎಂಬ ಪದವನ್ನೇ ಬಳಸಬೇಕು ಎಂದು ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು 2016ರಲ್ಲಿ ತಳ್ಳಿ ಹಾಕಿದ್ದ ಸುಪ್ರೀಂ ಕೋರ್ಟ್, ನಾಗರಿಕರು ಇಂಡಿಯಾ ಇಲ್ಲವೇ ಭಾರತ ಎಂಬುದರಲ್ಲಿ ಯಾವ ಪದವನ್ನು ಬೇಕಾದರೂ ಬಳಸಬಹುದು ಎಂದು ಹೇಳಿತ್ತು. ಜಿ20 ಆಹ್ವಾನ ಪತ್ರಿಕೆಯಲ್ಲಿ 'ಪ್ರೆಸಿಡೆಂಟ್ ಆಫ್ ಭಾರತ' ಎಂದು ಹೇಳಿರುವುದು ಚರ್ಚೆಗೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಟಿಪ್ಪಣಿ ಗಮನ ಸೆಳೆದಿದೆ. ಮಹಾರಾಷ್ಟ್ರದ ನಿರಂಜನ್ ಭಟ್ವಾಲ್ ಎಂಬುವವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ, ಎಲ್ಲೆಡೆ ಭಾರತ ಎಂಬ ಪದವನ್ನೇ ಬಳಸಬೇಕು ಎಂದು ಕೋರಿದ್ದರು. ಈ ಅರ್ಜಿ ವಿರೋಧಿಸಿದ್ದ ಕೇಂದ್ರ ಗೃಹ ಸಚಿವಾಲಯ, ಸಂವಿಧಾನ ರಚನಾ ಸಭೆಯಲ್ಲಿ ದೇಶದ ಹೆಸರಿನ ಬಗ್ಗೆ (2ನೇ ಪುಟಕ್ಕೆ)

### ಬದಲಾವಣೆ ಅಗತ್ಯವಿಲ್ಲ ಸಿಎಂ ಸಿದ್ದರಾಮಯ್ಯ

ಬೆಂಗಳೂರು, ಸೆ. 5- ಇಂಡಿಯಾ ಎಂಬುದು ದೇಶ ಒಪ್ಪಿದ ಪದವಾಗಿದೆ. ಅದನ್ನು ಭಾರತ ಎಂದು ಬದಲಿಸುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇಂಡಿಯಾ ಎಂಬ ಪದವನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ ಮತ್ತು ಅದನ್ನು 'ಇಂಡಿಯನ್ ಕಾನ್‌ಸ್ಟಿಟ್ಯೂಷನ್' ಎಂದು ಕರೆಯಲಾಗುತ್ತದೆ ಎಂದು ಹೇಳಿದರು. ಜಿ20 ಔತಣಕೂಟದ ಆಹ್ವಾನ ಪತ್ರಿಕೆಯಲ್ಲಿ 'ಪ್ರೆಸಿಡೆಂಟ್ ಆಫ್ ಭಾರತ' ಎಂದು ಬರೆಯಲಾಗಿದೆ. ಇಂಡಿಯಾ ಬದಲು ಭಾರತ ಎಂದು ಬಳಸಿರುವುದಕ್ಕೆ ಪ್ರತಿಪಕ್ಷಗಳು ಆಕ್ಷೇಪಿಸಿವೆ.

ಈ ಆಹ್ವಾನ ಪತ್ರಿಕೆ ವೈರಲ್ ಆದ (2ನೇ ಪುಟಕ್ಕೆ)

## ಹಿಟ್ಲರ್ ಜೊತೆ ಸ್ಟಾಲಿನ್ ಹೋಲಿಕೆ ಮಾಡಿದ ಬಿಜೆಪಿ

ನವದೆಹಲಿ, ಸೆ. 5- ಸನಾತನ ಧರ್ಮ ನಿರ್ಮೂಲನೆ ಮಾಡಬೇಕು ಎಂಬ ಹೇಳಿಕೆ ನೀಡಿರುವ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಅವರನ್ನು ಬಿಜೆಪಿ ಹಿಟ್ಲರ್‌ಗೆ ಹೋಲಿಸಿದೆ.

ಉದಯನಿಧಿ ಸ್ಟಾಲಿನ್ ದ್ವೇಷ ಭಾಷಣ ಮಾಡಿ, ಭಾರತದ ಶೇ.80ರಷ್ಟು ಜನರ ಹತ್ಯಾಕಾಂಡಕ್ಕೆ ಕರೆ ನೀಡಿದ್ದಾರೆ. ಕಾಂಗ್ರೆಸ್ ಹಾಗೂ ಐ.ಎನ್.ಡಿ.ಐ.ಎ. ಒಕ್ಕೂಟ ಸ್ಟಾಲಿನ್ ಹೇಳಿಕೆಗಳಿಗೆ ಬೆಂಬಲಿಸುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

ಯಹೂದಿಗಳನ್ನು ಹಿಟ್ಲರ್ ಕಾಣುತ್ತಿದ್ದ ರೀತಿಗೂ, ಸನಾತನ ಧರ್ಮವನ್ನು ಉದಯನಿಧಿ ಸ್ಟಾಲಿನ್ ಬಣ್ಣಿಸಿರುವುದಕ್ಕೂ ಹೋಲಿಕೆ ಇದೆ. ಹಿಟ್ಲರ್ ರೀತಿಯಲ್ಲೇ ಸ್ಟಾಲಿನ್ ಸಹ ಹೇಳಿಕೆ ನೀಡುತ್ತಿದ್ದಾರೆ. ಹಿಟ್ಲರ್ ಯುರೋಪಿನ 60 ಲಕ್ಷ ಜನರ ಹತ್ಯೆ ಮಾಡಿದ್ದ. ಸೋವಿಯತ್‌ನ 50 ಲಕ್ಷ ಬಂಧಿತರ ಹತ್ಯೆ ಮಾಡಿದ್ದ ಎಂದು ಬಿಜೆಪಿ ಹೇಳಿದೆ.

## ಪ್ರಧಾನಿ ವಿದೇಶ ಪ್ರವಾಸದ ವಿವರದಲ್ಲೂ 'ಭಾರತ'

ನವದೆಹಲಿ, ಸೆ. 5 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇಂಡೋನೇಷಿಯಾಗೆ ತೆರಳುವ ಅಧಿಕೃತ ಮಾಹಿತಿಯನ್ನು ಬಿಜೆಪಿ ವಕ್ತಾರ ಸಂಬಿತ್ ಪಾತ್ರ ಹಂಚಿಕೊಂಡಿದ್ದು, ಇದರಲ್ಲಿ 'ಪ್ರೈಮ್ ಮಿನಿಸ್ಟರ್ ಆಫ್ ಭಾರತ್' (ಭಾರತದ ಪ್ರಧಾನ ಮಂತ್ರಿ) ಎಂದು ತಿಳಿಸಲಾಗಿದೆ.

ಪ್ರಧಾನಿ ಮೋದಿ ಅವರು 20ನೇ ಏಷಿಯಾನ್ ಶೃಂಗಸಭೆಯಲ್ಲಿ ಹಾಗೂ 18ನೇ ಪೂರ್ವ ಏಷಿಯಾ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಇಂಡೋನೇಷಿಯಾಗೆ ತೆರಳುತ್ತಿದ್ದಾರೆ.

ಸೆಪ್ಟೆಂಬರ್ 9ರಂದು ನಡೆಯಲಿರುವ ಜಿ20 ಸಭೆಯ ಔತಣ ಕೂಟದ ಆಹ್ವಾನ ಪತ್ರಿಕೆಯಲ್ಲಿ ರಾಷ್ಟ್ರಪತಿಯವರನ್ನು 'ಪ್ರೆಸಿಡೆಂಟ್ ಆಫ್ ಭಾರತ್' ಎಂದು ಸಂಬೋಧಿಸಲಾಗಿತ್ತು. ಇದು ದೇಶಾದ್ಯಂತ ತೀವ್ರ ಚರ್ಚೆಗೆ ಕಾರಣವಾಗಿತ್ತು. ಸಾಂಪ್ರದಾಯಿಕವಾಗಿ ಇಂಗ್ಲಿಷ್ ಆಹ್ವಾನ ಪತ್ರಿಕೆಯಲ್ಲಿ ಭಾರತಕ್ಕೆ 'ಇಂಡಿಯಾ' ಎಂಬ ಪದವೇ ಬಳಕೆಯಾಗುತ್ತದೆ.

ರಾಷ್ಟ್ರಪತಿ ಹಾಗೂ ಪ್ರಧಾನ ಮಂತ್ರಿಯವರಿಬ್ಬರ ಆಹ್ವಾನ ಪತ್ರಿಕೆಯಲ್ಲಿ (3ನೇ ಪುಟಕ್ಕೆ)

## ಭದ್ರಾ ನೀರು ಸ್ಥಗಿತವಾದರೆ ಹೋರಾಟ

### ಭಾರತೀಯ ರೈತ ಒಕ್ಕೂಟದ ಸಭೆಯಲ್ಲಿ ನಿರ್ಧಾರ




ದಾವಣಗೆರೆ, ಸೆ. 5- ರಾಜ್ಯ ಸರ್ಕಾರ ಈ ಹಿಂದೆ ತೀರ್ಮಾನಿಸಿದಂತೆ 100 ದಿನಗಳವರೆಗೆ ನಿರಂತರ ಭದ್ರಾ ನಾಲೆಗಳಿಗೆ ನೀರು ಹರಿಸಬೇಕು. ಒತ್ತಡಕ್ಕೆ ಮಣಿದು ನೀರು ಸ್ಥಗಿತಗೊಳಿಸಿದರೆ ಸಂಘಟಿತ ಹೋರಾಟ ನಡೆಸಲು ಮಂಗಳವಾರ ನಡೆದ ಭಾರತೀಯ ರೈತ ಒಕ್ಕೂಟದ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಯಿತು.

ಸಭೆಯಲ್ಲಿ ಹರಿಹರ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ದಾವಣಗೆರೆ ಭಾಗದವರೇ ನಿಜವಾದ ಭದ್ರಾ ಅಚ್ಚುಕಟ್ಟು ರೈತರು. ಭದ್ರಾವತಿ ಭಾಗದಲ್ಲಿ ಅಕ್ರಮ ಪಂಪ್‌ಸೆಟ್ ಅಳವಡಿಸಿಕೊಂಡು ಅಡಿಕೆ ತೋಟ ಮಾಡಿದ್ದಾರೆ. ಆದರೆ ಸರ್ಕಾರ ತೋಟದವರ ಒತ್ತಡಕ್ಕ ಮಣಿದು ಸಭೆ ಕರೆದಿದೆ. ಈ ಸಭೆಗೆ ನನ್ನನ್ನೂ ಆಹ್ವಾನಿಸಲಾಗಿತ್ತು. ಆದರೆ ನಾನು ಹೋಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕಳೆದ ಬಾರಿ ವರ್ಷ ಪೂರ್ತಿ ಮಳೆ ಬಂದು ಜಲಾಶಯ ಭರ್ತಿಯಾಗಿತ್ತು. ಈ ಬಾರಿ ಆಗಲೇ ನೀರು ಖಾಲಿ ಆಗಿದೆ ಎನ್ನುತ್ತಾರೆ. ಹಾಗಾದರೆ ನೀರು ಎಲ್ಲಿಹೋಯಿತು? ಎಂದು ಪ್ರಶ್ನಿಸಿದ ಅವರು, ಈ ಬಾರಿಯೂ ಮಳೆ ಬಂದೇ ಬರುತ್ತದೆ. ಆದ್ದರಿಂದ ಮೊದಲು ತೆಗೆದುಕೊಂಡ ನಿರ್ಧಾರದಂತೆ 100 (2ನೇ ಪುಟಕ್ಕೆ)

### ರಸ್ತೆ ತಡೆ ನಡೆಸಿ ಪ್ರತಿಭಟನೆ, ಸರ್ಕಾರಕ್ಕೆ ಮನವಿ

**ನೂರು ದಿನ ನಿರಂತರ ನೀರು ಹರಿಸುವುದು ಸೇರಿದಂತೆ, ಹಲವು ಬೇಡಿಕೆಗಳ ಈಡೇರಿಕೆಗಾಗಿ ಭಾರತೀಯ ರೈತ ಒಕ್ಕೂಟದಿಂದ ಉಪ ವಿಭಾಗಾಧಿಕಾರಿ ಕಚೇರಿ ಮುಂಭಾಗ ಕೆಲ ಹೊತ್ತು ರಸ್ತೆ ತಡೆ ನಡೆಸಿ, ನಂತರ ಉಪ ವಿಭಾಗಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.**

### ಮನೆಗೊಬ್ಬರಂತೆ ಹೋರಾಟಕ್ಕೆ ಮುಂದಾಗಲು ಕರೆ

ದಾವಣಗೆರೆ, ಸೆ. 5- ಈಗಾಗಲೇ ಆದೇಶಿಸಿದಂತೆ ನೀರು ಹರಿಸದೆ, ಆದೇಶ ಮಾರ್ಪಾಡು ಮಾಡಿ ನೀರು ಸ್ಥಗಿತಗೊಳಿಸಿದರೆ ಪ್ರತಿ ಮನೆಗೂ ಒಬ್ಬೊಬ್ಬರಂತೆ ಅಹೋರಾತ್ರಿ ಧರಣಿಗೆ ಸಿದ್ಧರಾಗಬೇಕು ಎಂದು ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಶಾಮನೂರು ಹೆಚ್.ಆರ್. ಲಿಂಗರಾಜು ಕರೆ ನೀಡಿದ್ದಾರೆ.

ಭಾರತೀಯ ರೈತ ಒಕ್ಕೂಟದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈಗಾಗಲೇ ನೀರು ಹರಿಸಲು ಪ್ರಾರಂಭಿಸಿ 25 ದಿನಗಳಾಗಿವೆ. ಇನ್ನು 75 ದಿನ ನೀರು ಹರಿಸಲು 23 ಟಿಎಂಸಿ ನೀರು ಬೇಕು. ಜಲಾಶಯದಲ್ಲಿ (2ನೇ ಪುಟಕ್ಕೆ)

### ಇಂದಿನ ಸಭೆ ಮುಂದೂಡಲು ಎಸ್ಸೆಸ್ಸೆಂ ಪತ್ರ

ದಾವಣಗೆರೆ, ಸೆ. 5- ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ಬುಧವಾರ ಕರೆಯಲಾಗಿರುವ ನೀರಾವರಿ ಸಲಹಾ ಸಮಿತಿ ಸಭೆಯನ್ನು ಮುಂದೂಡುವಂತೆ ಒತ್ತಾಯಿಸಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪತ್ರ ಬರೆದಿದ್ದಾರೆ.

ದಾವಣಗೆರೆ ಭಾಗದಲ್ಲಿ ಈಗಾಗಲೇ ಬಹುತೇಕ ರೈತರು ಭತ್ತದ ನಾಟಿ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ನೀರಿನ ಪ್ರಮಾಣ ಪರಿಶೀಲಿಸಿ (2ನೇ ಪುಟಕ್ಕೆ)

## ಎಸ್ಸೆಸ್ಸೆಲ್ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಮೂರು ಬಾರಿ ಪರೀಕ್ಷೆಗೆ ಅವಕಾಶ

ಬೆಂಗಳೂರು, ಸೆ. 5 - ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ವರ್ಷಕ್ಕೆ ಮೂರು ಬಾರಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧುಬಂಗಾರಪ್ಪ ತಿಳಿಸಿದ್ದಾರೆ.

ವೃತ್ತಿ ಶಿಕ್ಷಣ ಪ್ರವೇಶಿಸುವ ಘಟ್ಟದಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾಗಿ ಬದುಕಿನಲ್ಲಿ ವೈಫಲ್ಯ ಎದುರಿಸುವುದನ್ನು ತಪ್ಪಿಸಲು ಎರಡು ಪರೀಕ್ಷೆಗಳ ಬದಲು ಮೂರು ಪೂರಕ ಪರೀಕ್ಷೆ ಬರೆಯಲು ಅವಕಾಶ ಸಿಗಲಿದೆ.

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾದರೆ ಮುಂದಿನ ತರಗತಿಗಳಿಗೆ ಪ್ರವೇಶಿಸಲು ಅವಕಾಶವಾಗುವಂತೆ ಈ ಕ್ರಮಕ್ಕೆ ಮುಂದಾಗಿದೆ ಎಂದು ಹೇಳಿದರು.

ಅನುತ್ತೀರ್ಣರಾದವರಿಗೆ ಶಿಕ್ಷಣ ಇಲಾಖೆ ಇದುವರೆಗೆ ಎರಡು ಪರೀಕ್ಷೆ ನಡೆಸುತ್ತಿತ್ತು, ಶೈಕ್ಷಣಿಕ ಪ್ರಗತಿ, ಅರ್ಥಪೂರ್ಣ ಕಲಿಕೆ, ಜ್ಞಾನ ಹೆಚ್ಚಿಸುವ ದೃಷ್ಟಿಯಿಂದ ಈ ತೀರ್ಮಾನ ಕೈಗೊಂಡಿದ್ದೇವೆ. ಈ ಪರೀಕ್ಷೆಗಳ ವೇಳಾಪಟ್ಟಿಯನ್ನು ಇಲಾಖೆ ಬಿಡುಗಡೆ ಮಾಡಲಿದೆ ಎಂದು ಹೇಳಿದರು.

ಹೊಸ ನಿಯಮಾವಳಿ ಪ್ರಕಾರ ವಿದ್ಯಾರ್ಥಿಗಳು ಕೆಲ ವಿಷಯಗಳಲ್ಲಿ ಅನುತ್ತೀರ್ಣರಾದರೂ ಮುಂದಿನ



ತರಗತಿಗಳಿಗೆ ಹೋಗಲು ಅವಕಾಶ ಮಾಡಿಕೊಡಲಾಗುವುದು. ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಪಡೆದ ಅಂಕಗಳನ್ನು ತೇರ್ಗಡೆಗೆ ಅಗತ್ಯವಿರುವ ಒಟ್ಟು ಕನಿಷ್ಠ ಅಂಕಗಳೆಂದು ಪರಿಗಣಸಲಾಗುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿದ್ಯೆ ಕಲಿಸುವುದಷ್ಟೇ ಶಿಕ್ಷಣದ ಉದ್ದೇಶ ಅಲ್ಲ, ಮಕ್ಕಳನ್ನು ವಿಶ್ವಮಾನವರನ್ನಾಗಿ ರೂಪಿಸುವುದೂ ಶಿಕ್ಷಣದ ಗುರಿ ಎಂದರು.

ರೈತರು, ಸೈನಿಕರು, ಶಿಕ್ಷಕರು ಆದರ್ಶ ಸಮಾಜದ ಆಧಾರ ಸ್ತಂಭಗಳು, ಇವರು ಸಮಾಜದ, ದೇಶದ ಭವಿಷ್ಯ ರೂಪಿಸುವ ಕಾಯಕ ಜೀವಿಗಳು. ಡಿಗ್ರಿ ಪಡೆದು, ಡಾಕ್ಟರೇಟ್ ಪಡೆದರೂ ಅವರಲ್ಲಿ ವೈಜ್ಞಾನಿಕ ಮನೋಭಾವ, ವೈಚಾರಿಕತೆ ಬೆಳೆಯದಿದ್ದರೆ, ತಲೆಯೊಳಗೆ ಮೌಢ್ಯ ತುಂಬಿಕೊಂಡಿದ್ದರೆ ಅವರನ್ನು ಸುಶಿಕ್ಷಿತರು ಎಂದು ಕರೆಯಲು ಸಾಧ್ಯವಿಲ್ಲ, ಡಿಗ್ರಿ ಪಡೆದವರೇ ಹೆಚ್ಚು ಜಾತಿವಾದಿಗಳಾದರೆ, (4ನೇ ಪುಟಕ್ಕೆ)

## ವಿದ್ಯಾರ್ಥಿಗಳನ್ನು ಸುಂದರ ಮೂರ್ತಿ ಮಾಡುವ ಶಕ್ತಿ ಶಿಕ್ಷಕರಿಗಿದೆ

ಹರಿಹರ, ಸೆ. 5 - ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಹಾಗೂ ಪ್ರತಿಭೆಯನ್ನು ಹೊರ ತೆಗೆದು ಸಮಾಜದ ಸುಂದರ ಮೂರ್ತಿಯನ್ನಾಗಿಸುವ ಶಕ್ತಿ ಇರುವುದು ಶಿಕ್ಷಕರಿಗೆ ಮಾತ್ರ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ಗುರು ಭವನದಲ್ಲಿ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಡೆದ ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಒಳಿತಿಗಾಗಿ ರೈತರು, ಯೋಧರು ಸೇವೆ ಸಲ್ಲಿಸುತ್ತಾರೆ. ಶಿಕ್ಷಕರ ಸೇವೆಯೂ ಇವರ ಸಾಲಿಗೆ ಸೇರುತ್ತದೆ. ಮಕ್ಕಳಿಗೆ ಶಿಕ್ಷಣ ಕೊಡುವುದರ ಜೊತೆಗೆ ಅವರನ್ನು ಸುಸಂಸ್ಕೃತ ವ್ಯಕ್ತಿಯನ್ನಾಗಿಸಿ, ಗುರುಭಕ್ತಿ ಹಾಗೂ ರಾಷ್ಟ್ರದ ಬಗ್ಗೆ ಅಭಿಮಾನ ಮೂಡಿಸುವ ಕಾಯಕ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ಸಮಾಜದಲ್ಲಿ ಶಿಕ್ಷಕರಿಗೆ ಮತ್ತು ವೈದ್ಯರಿಗೆ



ನಿವೃತ್ತಿ ಎಂಬ ಪದವನ್ನು ಬಳಸಬಾರದು. ಸಮಾಜಕ್ಕೆ ಶಿಕ್ಷಕರು ಕೊಟ್ಟಿರುವ ಸೇವೆ ಹಾಗೂ ವೈದ್ಯರು ನೀಡಿದ ಸೇವೆಗೆ ಕೊನೆ ಇಲ್ಲ ಎಂದರು.

ಸದಾಶಿವ ಸೊರಟೂರು ಮಲೇಬೆನ್ನೂರು ಮಾತನಾಡಿ, ಸಾಕಷ್ಟು ಶಿಕ್ಷಕರು ಒತ್ತಡದಲ್ಲಿ ಕರ್ತವ್ಯ ನಿರ್ವಹಣೆ ಮಾಡುವುದರಿಂದ ಬಿ.ಪಿ. ಹಾಗೂ ಸಕ್ಕರೆ ಕಾಯಿಲೆಗಳಿಂದ ನರಳುತ್ತಿದ್ದಾರೆ. ಶೇ. 97 ರಷ್ಟು ಶಿಕ್ಷಕರು ಮಕ್ಕಳ ಭವಿಷ್ಯವನ್ನು ರೂಪಿಸುವ

**ಹರಿಹರ: ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ಬಿ.ಪಿ. ಹರೀಶ್**


ಕೆಲಸ ಮಾಡುತ್ತಾರೆ. ಕೆಲವೇ ಶಿಕ್ಷಕರ ಅಸಂಬದ್ಧ ವರ್ತನೆಯಿಂದ ಎಲ್ಲರಿಗೂ ಕೆಟ್ಟ ಹೆಸರು ಬರುತ್ತಿದೆ. ಶಿಕ್ಷಕರ ಸಂಘದ ಮುಖಂಡರು ಇದನ್ನು ಸರಿಪಡಿಸಬೇಕು ಎಂದರು.

ಬಿಇಓ ಎಂ. ಹನುಮಂತಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಪ್ಪ ದೊಗ್ಗಳ್ಳಿ ಹಾಗೂ ಕಾರ್ಯದರ್ಶಿ ಶರಣ್ ಕುಮಾರ್ ಹೆಗಡೆ ಸೇರಿದಂತೆ ಸಂಘದವರು ಶಿಕ್ಷಕರ ಸಮಸ್ಯೆಗಳ ಬಗ್ಗೆ ಶಾಸಕರಿಗೆ ಮನವಿ ಪತ್ರ ನೀಡಿದರು.

ಬೆಳಗ್ಗೆ ಶ್ರೀ ಹರಿಹರೇಶ್ವರ ದೇವಾಲಯದ ಮುಂಭಾಗದಿಂದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರದ ಭವ್ಯವಾದ ಮೆರವಣಿಗೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ನಿಂಬಕ್ಕ ಚಂದಪೂರ್, ತಾಪಂ ಇಓ ಎನ್. ರವಿ, ಕ್ಷೇತ್ರ ಸಮನ್ವಯ ಅಧಿಕಾರಿ ಹೆಚ್. ಕೃಷ್ಣಪ್ಪ, ನೋಡಲ್ ಅಧಿಕಾರಿ ಎಸ್.ಮಂಜುನಾಥ್, ವಿಶ್ವನಾಥ್, ರಾಜ್ಯ ಪ್ರೌಢಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಕೆ. ಭೂಮೇಶ್, ಗೌರವ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಪ್ಪ ದೊಗ್ಗಳ್ಳಿ, ಕಾರ್ಯದರ್ಶಿ ಶರಣ್ ಕುಮಾರ್ ಹೆಗಡೆ, ಶಿಕ್ಷಕರಾದ ಬಿ.ಬಿ. ರೇವಣ ನಾಯ್ಕ್, ಬಸವರಾಜಯ್ಯ, ಗದಿಗೆಪ್ಪ ಹಳೆಮನಿ, ಪದ್ದಪ್ಪ, ಉಮೇಶ್, ದಂಡಿ ತಿಪ್ಪೇಸ್ವಾಮಿ, ತಿಪ್ಪೇಶ್ ಬಲ್ಲೂರು, ಕೆ.ಕೆ. ರಫೀಕ್ ಅಹ್ಮದ್, ಇಲಿಯಾಸ್‌ಅಹ್ಮದ್, ಧನ್ಯಕುಮಾರ್, ಚೆನ್ನಕೇಶವ, ಅಶ್ರಫಿ ಅಲಿ, ಮಂಜಪ್ಪ ಬಿದರಿ, ತಿಪ್ಪಣ್ಣ ರಾಜ್, ಸಿದ್ದಲಿಂಗಪ್ಪ, (2ನೇ ಪುಟಕ್ಕೆ)

SHREEDA SAREES
DATE: 6th & 7th Sep 2023
TIMING 11:00am to 8:00pm

Present an Exclusive Collection of Tradition heritage saree's
* Kanchivaram
* Chiffon * Kalamkari
* Banaras * Organza
ROTARY CLUB
Opposite Seethamma Girl High School
Pravasi Mandira Road, P.J Extension, Davangere.

# ವಿದ್ಯಾರ್ಥಿಗಳು ಮಾನವೀಯ ಮೌಲ್ಯ ಅಳಡಿಸಿಕೊಳ್ಳಲು ಹಿತ ನುಡಿ



ಹರಪನಹಳ್ಳಿಯ ಉಜ್ಜಯಿನಿ ಜಗದ್ಗುರು ಮರುಳಾರಾಧ್ಯ ಪದವಿ ಪೂರ್ವ ಮಹಾವಿದ್ಯಾಲಯದ ಕಾರ್ಯಕ್ರಮದಲ್ಲಿ ಎಂ.ಎಂ.ಜೆ. ಹರ್ಷವರ್ಧನ

ಹರಪನಹಳ್ಳಿ, ಸೆ. 5- ವಿದ್ಯಾರ್ಥಿಗಳು ಜೀವನ ದಲ್ಲಿ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳಿ ಎಂದು ಉಜ್ಜಯಿನಿ ಜ್ಞಾನ ಗುರುಪೀಠದ ಕಾರ್ಯ ದರ್ಶಿ ಎಂ.ಎಂ.ಜೆ. ಹರ್ಷವರ್ಧನ ಹೇಳಿದರು.

ಪಟ್ಟಣದ ಶ್ರೀ ಉಜ್ಜಯಿನಿ ಜಗದ್ಗುರು ಮರುಳಾರಾಧ್ಯ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಸಂಘ, ರಾಷ್ಟ್ರೀಯ ಸೇವಾ ಯೋಜನಾ ಘಟಕ, ಕ್ರೀಡಾ ಚಟುವಟಿಕೆಗಳ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಮತ್ತು ಶಿಕ್ಷಕರ ದಿನಾಚರಣೆ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನೈತಿಕ ಮೌಲ್ಯವು ವಿದ್ಯಾರ್ಥಿಗಳ ಜೀವನದ ರೂಪು ರೇಷೆಯನ್ನೇ ಬದಲಾಯಿಸುತ್ತವೆ. ಹೀಗಾಗಿಯೇ ಮೌಲ್ಯ ರಹಿತ ಶಿಕ್ಷಣಕ್ಕೆ ಯಾವುದೇ ಅರ್ಥವಿರುವುದಿಲ್ಲ. ಮೌಲ್ಯವರ್ಧನೆ ಎಂದರೆ ಮಕ್ಕಳಲ್ಲಿ ನೈತಿಕ ಸದ್ಗುಣಗಳಾದ ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆ, ಸಹನೆ, ಅನುಕಂಪ, ಸತ್ಯ, ನ್ಯಾಯ, ಸಚ್ಚಾರಿತ್ರ್ಯ, ಅಹಿಂಸೆ, ಸಹಕಾರ, ಸಹೋದರತ್ವ, ಸಹಿಷ್ಣುತಾಭಾವ ಸೇರಿದಂತೆ ಇತರೆ ಗುಣಗಳನ್ನು ಬೆಳೆಸುವುದಾಗಿದೆ ಎಂದರು.

ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಮಾತನಾಡಿ, ಹದಿಹರೆಯದ ವಯಸ್ಸಿನಲ್ಲಿ ವಿದ್ಯಾರ್ಥಿಗಳು ಏಕಾಗ್ರತೆಯಿಂದ ಅಭ್ಯಾಸ ಮಾಡಿ ಗುರಿ ತಲುಪುವ ಕೆಲಸ ಮಾಡಬೇಕು. ಶಿಕ್ಷಣದ ಜೊತೆಯಲ್ಲಿ ಉತ್ತಮ ಸಂಸ್ಕಾರ ಕಲಿಯಬೇಕು. ರೈತ ದೇಶದ ಬೆನ್ನೆಲುಬು. ಆ ರೈತನ ಮಕ್ಕಳಿಗೆ ಹೆಣ್ಣು ಸಿಗುವ ಕಾಲ ದೂರವಿದ್ದು, ರೈತನ ಹಾಗೂ ರೈತರ ಮಕ್ಕಳಿಗೆ ಹೆಣ್ಣು ಕೊಡಬೇಕು ಎಂದು ಅವರು ಹೇಳಿದರು.

ಉಜ್ಜಯಿನಿ ಜ್ಞಾನ ಗುರುಪೀಠದ ನಿರ್ದೇಶಕ ಉಚ್ಚಂಗಿದುರ್ಗದ ಬಿ. ಶಿವಕುಮಾರಸ್ವಾಮಿ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಸಿಗುವಂತಹ ಅವಕಾಶಗಳನ್ನು ಸಂಪೂರ್ಣವಾಗಿ ಸದ್ಬಳಕೆ ಮಾಡಿಕೊಂಡರೆ, ತನ್ನ ಗುರಿ ಸಾಧನೆಯ ಹಾದಿ ಸುಗಮವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಹರಿಹರದ ಎಸ್‌ಜೆವಿಪಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಎಂ.ಜೆ.ಎಫ್. ಪ್ರೊ. ಬಿ.ಬಿ. ನಂದ್ಯಾಲ್ ವಿಶೇಷ ಉಪನ್ಯಾಸ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಹೆಚ್. ಮಲ್ಲಿಕಾರ್ಜುನ, ನಿವೃತ್ತ ಕನ್ನಡ ಉಪನ್ಯಾಸಕ ಎಂಪಿಎಂ ಶಾಂತವೀರಯ್ಯ, ಉಪನ್ಯಾಸಕರಾದ ಸೋಮರೆಡ್ಡಿ, ಚನ್ನಬಸಪ್ಪ, ಎಸ್. ಕೊಟ್ರೇಶ್, ಚಿಕ್ಕಪ್ರಸಾದ್, ಕೆ. ಅಶೋಕ, ಬೀರನಾಯ್ಕ, ಚನ್ನಬಸಪ್ಪ, ಶೈಲಜಾ, ಹೇಮಾ, ಕಾಲೇಜಿನ ವ್ಯವಸ್ಥಾಪಕರು ಎಂ.ಜಿ. ರುದ್ರಯ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಭದ್ರಾ ಸ್ಥಗಿತವಾದರೆ ಹೋರಾಟ




**(1ನೇ ಪುಟದಿಂದ)** ದಿನ ನೀರು ಹರಿಸಲೇಬೇಕು. ಈ ಬಗ್ಗೆ ನಾನೂ ಸಹ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಬಳಿ ಚರ್ಚಿಸುತ್ತೇನೆ. ರೈತರೂ ಸಹ ಸಚಿವರ ಮೇಲೆ ಒತ್ತಡ ಹೇರಬೇಕು ಎಂದು ಹೇಳಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಬೆಳವನೂರು ನಾಗೇಶ್ವರರಾವ್ ನಿಗದಿಯಂತೆ ನೀರು ಹರಿಸಬೇಕು ಎಂದು ಒತ್ತಾಯಿಸಿದರು. ದಾವಣಗೆರೆ ಭಾಗದ ರೈತರ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಲೇ ಇದೆ. ಕಾಡಾ ಎಂದೋ ದಾವಣಗೆರೆಗೆ ಸ್ಥಳಾಂತರವಾಗಬೇಕಿತ್ತು, ಆಗಿಲ್ಲ. ಇನ್ನಾದರೂ ಆಗಲಿ. ನೂರು ದಿನ ನೀರು ಹರಿಸುವವರೆಗೆ ಪಕ್ಷಾತೀತವಾಗಿ ಹೋರಾಡೋಣ ಎಂದು ಕರೆ ನೀಡಿದರು.

ಕೊಂಡಜ್ಜಿ ಶಾನುಭೋಗರ ನಾಗರಾಜರಾವ್ ಮಾತನಾಡುತ್ತಾ, ಜಿಲ್ಲೆಯ ಶಾಸಕರು ಪಕ್ಷಾತೀತವಾಗಿ ರೈತರ ಬೆಂಬಲಕ್ಕೆ ನಿಲ್ಲಬೇಕು. ಉಸ್ತುವಾರಿ ಸಚಿವರು ರೈತರ ಹಿತ ಕಾಪಾಡಲು ಕ್ರಮಕ್ಕೆ ಮುಂದಾಗಬೇಕು. ರೈತರು ಬೆಳೆಯದಿದ್ದರೆ ಎಲ್ಲಾ ವ್ಯವಹಾರಗಳು ನಷ್ಟವಾಗುತ್ತವೆ. ಆದ್ದರಿಂದ ಎಲ್ಲಾ ಸಂಘ-ಸಂಸ್ಥೆಗಳು ರೈತರ ಬೆಂಬಲಕ್ಕೆ ನಿಲ್ಲಬೇಕು ಎಂದು ಹೇಳಿದರು. ಬಂಗಾರಪ್ಪನವರ ಪುತ್ರನನ್ನು ಕಾಡಾ ಅಧ್ಯಕ್ಷರನ್ನಾಗಿ ಮಾಡುವ ಅಗತ್ಯ ಇತ್ತೇ? ಇದು ಶಿವಮೊಗ್ಗ ಭಾಗದವರ ಕುತಂತ್ರ ಎಂದು ತರಾಟೆಗೆ ತೆಗೆದುಕೊಂಡರು.

ರೈತ ಮುಖಂಡ ಕೋಳೇನಹಳ್ಳಿ ಬಿ.ಎಂ ಸತೀಶ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಆಹಾರ ಬೆಳೆ ಬೆಳೆಯಲು ಭದ್ರಾ ಜಲಾಶಯ ನಿರ್ಮಾಣ ಮಾಡಲಾಗಿದೆ. ಆದರೆ ಭತ್ತದ ಬೆಳೆಗಿಂತ ಅಡಿಕೆ ಬೆಳೆಗೆ ನೀರು ಬೇಕು ಎಂದು ಒತ್ತಾಯಿಸುವುದು ಸರಿಯಲ್ಲ. ಸರ್ಕಾರ ತರಾತುರಿಯಲ್ಲಿ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ನವರನ್ನು ತಾತ್ಕಾಲಿಕ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಸಭೆ ಕರೆದಿರುವುದು ಭತ್ತದ ಬೆಳೆಗಾರರಿಗೆ ಮರಣ ಶಾಸನವಾಗಿದೆ ಎಂದು ಹೇಳಿದರು.

ಪಾಲಿಕೆ ಮಾಜಿ ಮೇಯರ್ ಹೆಚ್.ಎನ್. ಗುರುನಾಥ್, ರೈತ ಮುಖಂಡರಾದ ಬಲ್ಲೂರು ರವಿಕುಮಾರ್, ಕಲ್ಲಪ್ಪ, ಕುಂದುವಾಡದ ಮಹೇಶ್, ಜಿಮ್ಮಿ ಹನುಮಂತಪ್ಪ ಮಾತನಾಡಿದರು.

ಗೋಪನಾಳ ಕರಿಬಸಪ್ಪ, ಕುಂದುವಾಡದ ಗಣೇಶಪ್ಪ, ಕಕ್ಕರಗೊಳ್ಳ ಕಲ್ಲಿಂಗಪ್ಪ, ಬಾತಿ ವೀರೇಶ್ ದೊಗ್ಗಳ್ಳಿ, ಶಿರಮನಹಳ್ಳಿ ಎ.ಎಂ. ಮಂಜುನಾಥ, ಕಕ್ಕರಗೊಳ್ಳ ಸಿದ್ದಲಿಂಗಪ್ಪ, ಕಲ್ಪನಳ್ಳಿ ರೇವಣಸಿದ್ದಪ್ಪ, ಹೊಸಕುಂದವಾಡ ಪುನೀತ್, ಹಳೇಕುಂದುವಾಡ ಹನುಮಂತಪ್ಪ ಮುಂತಾದವರು ಉಪಸ್ಥಿತರಿದ್ದರು.

## ಹೋರಾಟಕ್ಕೆ ಮುಂದಾಗಲು ಕರೆ

**(1ನೇ ಪುಟದಿಂದ)** ಕುಡಿಯುವ ನೀರಿಗೆ 7 ಟಿಎಂಸಿ ನೀರು ಮೀಸಲಿಟ್ಟರೂ 33 ಟಿಎಂಸಿ ನೀರಿನ ಸಂಗ್ರಹ ಇದೆ. ಆದ್ದರಿಂದ ಸರ್ಕಾರ ರೈತರೊಂದಿಗೆ ಹುಡುಗಾಟಿಕೆ ಮಾಡಬಾರದು ಎಂದು ಎಚ್ಚರಿಸಿದರು.

ತುಂಗಾದಿಂದ ಭದ್ರ ಜಲಾಶಯಕ್ಕೆ ನೀರು ಲಿಫ್ಟ್ ಮಾಡಿದರೆ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿದಂತಾಗುತ್ತದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಹಿಂದಿನ ಎಲ್ಲಾ ವರ್ಷಗಳಲ್ಲೂ ಆಗಸ್ಟ್ ತಿಂಗಳಲ್ಲಿ ಮಳೆ ಬಂದಿದೆ. ನವೆಂಬರ್ ತಿಂಗಳವರೆಗೂ ಮಳೆ ಬಂದಿದೆ.

ಈ ಹಿನ್ನೆಲೆಯಲ್ಲಿ ನಿಗದಿ ಪಡಿಸಿದಂತೆ ನೂರು ದಿನ ನೀರು ಹರಿಸಬೇಕು. ಇಲ್ಲದಿದ್ದರೆ ರೈತರು ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗು ತ್ತದೆ. ಇದಕ್ಕೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

## ಸಭೆ ಮುಂದೂಡಲು ಎಸ್ಸೆಸ್ಸೆಂ ಪತ್ರ

**(1ನೇಪುಟದಿಂದ)** ಸೂಕ್ತ ತೀರ್ಮಾನ ಕೈಗೊಳ್ಳಲು ಕಷ್ಟವಾಗಿರುವುದರಿಂದ ಹಾಗೂ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತೆ ಕ್ರಮ ವಹಿಸಲು ಸಭೆಯನ್ನು ಮುಂದೂಡಿ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಸಭೆಯ ದಿನಾಂಕ ನಿಗದಿ ಮಾಡುವಂತೆ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಅವರೂ ಸಹ ಪತ್ರ ಬರೆದು ಸಭೆ ಮುಂದೂಡಿಕೆಗೆ ಮನವಿ ಮಾಡಿದ್ದಾರೆ.

# ಎಲೆಬೇತೂರಿನಲ್ಲಿ ಗ್ರಾಮೀಣ ಕೃಷಿ ಸಹಕಾರ ಸಂಘದ ವಾರ್ಷಿಕ ಮಹಾಸಭೆ



ದಾವಣಗೆರೆ, ಸೆ. 5- ಎಲೆಬೇತೂರು ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ 2022- 23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಓಂ ಶಾಂತಿ ಭವನದಲ್ಲಿ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ವಿ.ಎಸ್. ರಾಜಶೇಖರಪ್ಪ ಮಾತನಾಡಿ, ಸದಸ್ಯರು ಸಂಘದಲ್ಲಿ ಹೆಚ್ಚಿನದಾಗಿ ಠೇವಣೆ ಇಟ್ಟರೆ, ಹೆಚ್ಚಿನ ಸಾಲ ಕೊಡಬಹುದು, ಅಲ್ಲದೇ ಎಲ್ಲ ಸದಸ್ಯರ ಸಹಕಾರದಿಂದ ಸಂಘ ಅಭಿವೃದ್ದಿಯತ್ತ ಸಾಗುತ್ತಿದೆ ಎಂದು ತಿಳಿಸಿದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಎನ್. ಕವಿತಾ ವಾರ್ಷಿಕ ವರದಿ ಮಂಡಿಸಿದರು. ಕುಮಾರ್ ವಿಶ್ವಾಸ್ ಪ್ರಾರ್ಥಿಸಿದರು, ಬಿ.ಎಸ್. ಗಿರೀಶ್ ಸ್ವಾಗತಿಸಿದರು.

# ನಿರಂತರ ಕಲಿಕೆ, ಕಾದಂಬರಿ, ಬರವಣಿಗೆ ಹವ್ಯಾಸ ರೂಢಿಸಿಕೊಳ್ಳಿ



ಜಗಳೂರಿನ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ

ಜಗಳೂರು, ಸೆ. 5 - ರಾಜಕಾರಣಿಗಳು ಹಾಗೂ ಸರ್ಕಾರಿ ನೌಕರರು ಆಂಗ್ಲ ಭಾಷೆ ವ್ಯಾಮೋಹ ತೊರೆದು, ಸರ್ಕಾರಿ ಕನ್ನಡ ಶಾಲೆಗಳಿಗೆ ಮಕ್ಕಳನ್ನು ಸೇರಿಸಿದಾಗ ಮಾತ್ರ ಸರ್ಕಾರಿ ಶಾಲೆಗಳ ಉಳಿವು ಸಾಧ್ಯ ಎಂದು ಸಾಹಿತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕುಂ.ವೀರಭದ್ರಪ್ಪ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಡಾ.ರಾಧಾಕೃಷ್ಣನ್ ಅವರ 135 ನೇ ಜನ್ಮ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿಕ್ಷಕರಿಗೆ ಡಾ.ಬಿ.ಆರ್. ಅಂಬೇಡ್ಕರ್, ಡಾ.ಸರ್ವಪಲ್ಲಿ ರಾಧಾಕೃಷ್ಣನ್, ಅಬ್ದುಲ್ ಕಲಾಂ ಅವರಂತಹ ಮಹನೀಯರು ಆದರ್ಶವಾಗ ಬೇಕಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ನೈತಿಕತೆ ಬೆಳೆಸಬೇಕು. ತಾವುಗಳು ನಿರಂತರ ಕಲಿಕೆ, ಕಥೆ, ಕಾದಂಬರಿ, ಬರವಣಿಗೆ ಹವ್ಯಾಸ ರೂಢಿಸಿಕೊಳ್ಳಬೇಕು ಹೇಳಿದರು.

ಸರ್ಕಾರಿ ಶಾಲಾ ಕಟ್ಟಡಗಳನ್ನು ಗುತ್ತಿಗೆದಾರರು ಕಳಪೆ ಮಾಡುತ್ತಿದ್ದಾರೆ. ಇದನ್ನು ಪ್ರಶ್ನಿಸಿದ ಶಿಕ್ಷಕರ ಮೇಲೆ ಹಲ್ಲೆ ನಡೆಸುತ್ತಿದ್ದಾರೆ. ಅಲ್ಲದೇ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕ್ರಮೇಣ ಕ್ಷೀಣವಾಗುತ್ತಿರುವುದು ಅಪಾಯಕಾರಿ ಬೆಳವಣಿಗೆ. ಕೂಡಲೇ ಸರ್ಕಾರ ಜಾಗೃತವಾಗಬೇಕು ಎಂದರು.

ನಾನು ಶಿಕ್ಷಕ ವೃತ್ತಿಗೆ ಸೇರ್ಪಡೆಗೊಂಡು ರಸ್ತೆ, ಶೌಚಾಲಯ, ಮೂಲ ಸೌಕರ್ಯಗಳಿಲ್ಲದ ಕುಗ್ರಾಮದಲ್ಲಿ ಶೋಷಿತ ಸಮುದಾಯದ ಮಕ್ಕಳಿಗೆ ಬೋಧನೆ ಮಾಡಿದ ಪರಿಣಾಮ ಹಲವು ಜನ ಶಿಷ್ಯಂದಿರು ವಿವಿಧ ಸರ್ಕಾರಿ ನೌಕರಿಗಳನ್ನು ಅಲಂಕರಿಸಿದ್ದಾರೆ. ಅಲ್ಲದೇ ಹಲವು ಕಾದಂಬರಿ ರಚಿಸಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಡಿಗೇರಿಸಿಕೊಂಡಿರುವ ನಿಮ್ಮ ಪ್ರತಿನಿಧಿಯಾಗಿ ನಾನೊಬ್ಬ ಹಳ್ಳಿಯ ಶಿಕ್ಷಕ ಎಂಬುದು ಹೆಮ್ಮೆ ತಂದಿದೆ. ದೇಶದಲ್ಲಿ ಶಿಕ್ಷಕರೇ ನಿಜವಾದ ಬುದ್ದಿವಂತರು. ಸಮಾಜದಲ್ಲಿ ಶಿಕ್ಷಕರಿಗೆ ಗೌರವ ಸ್ಥಾನಮಾನಗಳಿವೆ ಎಂದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ನಾನು ಪ್ರಾಥಮಿಕ ಶಾಲೆ ಗುರುವಿನಿಂದ ಕಲಿತ ಪರಿಣಾಮ ನನ್ನ ಮಕ್ಕಳನ್ನು ಉನ್ನತ ವ್ಯಾಸಂಗ ಮಾಡಿಸಿ, ಇಂದು ಶಾಸಕನಾಗಿ ಆಯ್ಕೆಯಾಗಿ ರುವೆ. ಶಿಕ್ಷಕರು ಮಕ್ಕಳಿಗೆ ಬಿತ್ತುವ ಎರಡು ಅಕ್ಷರದ ಬೀಜ ಭವಿಷ್ಯದಲ್ಲಿ ಫಲ ಕೊಡುತ್ತದೆ. ಅದರಿಂದಾಗುವ ತೃಪ್ತಿ ಬೇರೊಂದಿಲ್ಲ ಎಂದರು.

ಸಮಾಜದಲ್ಲಿ ಮಕ್ಕಳನ್ನು ಸುಂದರ ಮೂರ್ತಿಗಳನ್ನಾಗಿಸುವ ಶಿಕ್ಷಕರೇ ನಿಜವಾದ ಶಿಲ್ಪಿಗಳು.

ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಅನಾವರಣಗೊಳಿಸುವುದು ಶಿಕ್ಷಕರು.ಕ್ಷೇತ್ರದಲ್ಲಿ ಶಿಕ್ಷಕರು ತಮ್ಮ ಕರ್ತವ್ಯ ಮರೆತರೆ ಸಮಾಜಕ್ಕೆ ದ್ರೋಹ ಎಸಗಿದಂತೆ. ತಮ್ಮ ಪ್ರಾಮಾಣಿಕ ಸೇವೆಗೆ ನನ್ನ ಸಹಕಾರವಿದೆ. ನಾನೊಬ್ಬ ಶಾಸಕನಲ್ಲ ಜನ ಸೇವಕ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬಿಇಓ ಹಾಲಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಎಸ್. ಟಿ. ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ, ತಹಶೀಲ್ದಾರ್ ಡಾ. ಅರುಣಕುಮಾರ್ ಕಾರಗಿ, ತಾ.ಪಂ. ಇಓ ಚಂದ್ರಶೇಖರ್, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ನಾಗರಾಜ್, ಕಾರ್ಯದರ್ಶಿ ತಿಪ್ಪೇಸ್ವಾಮಿ, ಮಾಜಿ ಅಧ್ಯಕ್ಷ ಚಂದ್ರಪ್ಪ, ಸರ್ಕಾರಿ ಪ್ರಾಥಮಿಕ ಶಾಲಾ ತಾಲ್ಲೂಕು ಅಧ್ಯಕ್ಷ ಹನುಮಂತೇಶ್, ಕಾರ್ಯದರ್ಶಿ ಅಂಜಿನಾಯ್ಕ, ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್, ಪ.ಪಂ. ಸದಸ್ಯರಾದ ನಿರ್ಮಲಕುಮಾರಿ, ಲಲಿತಮ್ಮ, ಮಂಜಮ್ಮ, ರಮೇಶ್ ರೆಡ್ಡಿ, ಲುಕ್ಮಾನ್ ಖಾನ್, ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ, ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಮಹೇಶ್ವರಪ್ಪ, ಪ.ಪಂ. ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಬಿ.ಆರ್.ಸಿ. ಹಾಲಪ್ಪ, ಸೇರಿದಂತೆ ಇತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಕುರಿ, ಮೇಕೆ, ಕೋಳಿ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಹಾಗೂ ನಾಳೆ 7 ಮತ್ತು 8 ರಂದು ಕೋಳಿ ಸಾಕಾಣಿಕೆ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : ದೂ. 08192-233787.

# ನಮ್ಮ ದೇಶ ಭಾರತ

**(1ನೇ ಪುಟದಿಂದ)** ಮುಂದಾಗಿದೆ. ಫ್ಯಾಸಿಸ್ಟ್ ಬಿಜೆಪಿಯನ್ನು ಉಳಿದ ಎಲ್ಲ ಪಕ್ಷಗಳು ಒಂದಾಗಿ ಪದಚ್ಯುತಗೊಳಿಸಬೇಕಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟ್ಯಾಲಿನ್ ಕರೆ ನೀಡಿದ್ದಾರೆ.

ಪ್ರತಿಪಕ್ಷಗಳ ಒಕ್ಕೂಟ ತನ್ನ ಹೆಸರನ್ನು ಐ.ಎನ್.ಡಿ.ಐ.ಎ.ದಿಂದ ಭಾರತ ಎಂದು ಬದಲಿಸಿಕೊಂಡರೆ, ಬಿಜೆಪಿ ಭಾರತ ಎಂಬ ಪದವನ್ನೂ ಬದಲಿಸಲಿದೆಯೇ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಪ್ರಶ್ನಿಸಿದ್ದಾರೆ.

ದೇಶದ ಹೆಸರು ಬದಲಿಸುವ ಹಕ್ಕು ಯಾರಿಗೂ ಇಲ್ಲ ಎಂದು ಎನ್.ಸಿ.ಪಿ. ಅಧ್ಯಕ್ಷ ಶರದ್ ಪವಾರ್ ಹೇಳಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ನಮ್ಮ ದೇಶದ ಹೆಸರೂ ಭಾರತ. ಹೀಗಿರುವಾಗ ಭಾರತದ ರಾಷ್ಟ್ರಪತಿ ಎಂದು ಕರೆಯುವುದರಲ್ಲಿ ಸಮಸ್ಯೆ ಏನಿದೆ? ಎಂದು ಕೇಳಿದ್ದಾರೆ.

ಪ್ರತಿಪಕ್ಷಗಳು ಎಲ್ಲವನ್ನೂ ವಕ್ರದೃಷ್ಟಿಯಿಂದ ನೋಡುತ್ತಿವೆ. ಕೆಲವೊಮ್ಮೆ ಅವರು ಸನಾತನ ಧರ್ಮ ನಿರ್ಮೂಲನೆಯ ಮಾತನಾಡುತ್ತಾರೆ. ಭಾರತಕ್ಕೆ ಭಾರತ ಎಂಬ ಪದ ಬಳಸದೇ ಇನ್ನೇನು ಬಳಸಬೇಕು ಎಂದೂ ಅವರು ಕೇಳಿದ್ದಾರೆ.

ಪ್ರತಿಪಕ್ಷಗಳಿಗೆ ಕೆಲವೊಮ್ಮೆ ವಂದೇ ಮಾತರಂ ಬಗ್ಗೆ ಆಕ್ಷೇಪ ಇದೆ. ಇನ್ನು ಕೆಲವೊಮ್ಮೆ ರಾಷ್ಟ್ರೀಯತೆ ಬಗ್ಗೆ ಆಕ್ಷೇಪ ಇರುತ್ತದೆ. ಭಾರತ ಎಂಬ ಪದ ಹೊಸದೇನೂ ಅಲ್ಲ. ಪುರಾತನ ಕಾಲದಿಂದಲೂ ಬಳಕೆಯಲ್ಲಿದೆ. ಭಾರತ ಮಾತೆ ಹಾಗೂ ವಂದೇ ಮಾತರಂ ನಮ್ಮ ರಕ್ತದಲ್ಲಿವೆ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ತರುಣ್ ಚುಘ್ ಹೇಳಿದ್ದಾರೆ.

ಭಾರತ ಎಂಬ ಪದವನ್ನು ಸಂವಿಧಾನದಲ್ಲೂ ಬಳಸಲಾಗಿದೆ. ಆದರೆ, ನೂತನ ಖಿಲ್ಜಿಗಳು ಹಾಗೂ ನೂತನ ಮುಘಲರು ಭಾರತ ಎಂಬ ಪದ ತೆಗೆದು ಹಾಕಲು ಬಯಸಿದ್ದಾರೆ ಎಂದವರು ಆರೋಪಿಸಿದ್ದಾರೆ.

ಭಾರತ ಒಕ್ಕೂಟ ಎಂಬ ಪದದ ಬಗ್ಗೆ ಸಂತೋಷ ಹಾಗೂ ಹೆಮ್ಮೆ ಇದೆ ಎಂದಿರುವ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ, ನಮ್ಮ ಸಂವಿಧಾನ ದಿಟ್ಟವಾಗಿ ಅಮೃತ ಕಾಲದೆಡೆಗೆ ಮುನ್ನಡೆಯುತ್ತಿದೆ ಎಂದಿದ್ದಾರೆ.

ಭಾರತ ಎಂಬ ಪದ ಬಳಕೆಗೆ ಯಾವುದೇ ಆಕ್ಷೇಪ ಇಲ್ಲ. ಆದರೆ, ಇಂಡಿಯಾ ಎಂಬ ಪದ ತನ್ನದೇ ಆದ ಮೌಲ್ಯ ಹೊಂದಿದೆ. ಅದನ್ನು ಸಂಪೂರ್ಣ ತೊಡೆದು ಹಾಕುವ ಮೂರ್ಖತನಕ್ಕೆ ಸರ್ಕಾರ ಮುಂದಾಗುವುದಿಲ್ಲ ಎಂದು ಆಶಿಸುವುದಾಗಿ ಕಾಂಗ್ರೆಸ್ ನಾಯಕ ಶಶಿ ಥರೂರ್ ಹೇಳಿದ್ದಾರೆ.

## ಯಾವುದಾದರೂ ಹೇಳಿ ಎಂದಿದ್ದ ಸುಪ್ರೀಂ

**(1ನೇ ಪುಟದಿಂದ)** ಚರ್ಚಿಸಲಾಗಿತ್ತು. ಸರ್ವಸಮ್ಮತಿಯಿಂದ ಸಂವಿಧಾನದ 1ನೇ ವಿಧಿಗೆ ಅಂಗೀಕಾರ ನೀಡಲಾಗಿತ್ತು ಎಂದು ತಿಳಿಸಿತ್ತು. ಈಗ ಹೆಸರಿನ ಬಗ್ಗೆ ಮರು ಪರಿಶೀಲಿಸುವ ಸಂದರ್ಭ ಬಂದಿಲ್ಲ ಎಂದು ಸಚಿವಾಲಯ ಹೇಳಿತ್ತು. ನಂತರ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ತಳ್ಳಿ ಹಾಕಿದ್ದ ನ್ಯಾಯಾಲಯ, ನೀವು ಭಾರತ ಎಂದಾದರೂ ಕರೆಯಿರಿ, ಇಂಡಿಯಾ ಎಂದಾದರೂ ಕರೆಯಿರಿ ಎಂದು ತಿಳಿಸಿತ್ತು. ಪೀಠದಲ್ಲಿ ಮುಖ್ಯ ನ್ಯಾಯಮೂರ್ತಿ ಟಿ. ಎಸ್. ಠಾಕೂರ್ ಹಾಗೂ ನ್ಯಾಯಮೂರ್ತಿ ಯು.ಯು. ಲಲಿತ್ ಅವರಿದ್ದರು. ಉಭಯರೂ ಈಗ ನಿವೃತ್ತರಾಗಿದ್ದಾರೆ.

ಸಾರ್ವಜನಿಕ ಹಿತಾಸಕ್ತಿ ಅರ್ಜಿ ಇರುವುದು ಬಡವರಿಗಾಗಿ. ಈ ರೀತಿಯ ಅರ್ಜಿ ದಾಖಲಿಸುವ ನಿಮಗೆ ಬೇರೆ ಏನೂ ಕೆಲಸ ಇಲ್ಲವೇ? ಎಂದೂ ನ್ಯಾಯಾಲಯ ಅರ್ಜಿದಾರರನ್ನು ತರಾಟೆಗೆ ತೆಗೆದುಕೊಂಡಿತ್ತು.

## ಬದಲಾವಣೆ ಅಗತ್ಯವಿಲ್ಲ ಸಿಎಂ ಸಿದ್ದರಾಮಯ್ಯ

**(1ನೇ ಪುಟದಿಂದ)** ನಂತರ ಭುಗಿಲೆದ್ದ ವಿವಾದದ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ನಮ್ಮ ಸಂವಿಧಾನದಲ್ಲಿ 'ಇಂಡಿಯಾ' ಎಂದು ತಿಳಿಸಲಾಗಿದೆ. 'ಇಂಡಿಯಾ' ಎಂಬುದು ನಮ್ಮ ದೇಶಕ್ಕೆ ಒಪ್ಪಿತ ಹೆಸರು ಎಂದರು.

## ಮಲೇಬೆನ್ನೂರು ಪಟ್ಟಣದ ಗುಳದಹಳ್ಳಿ ಈರಮ್ಮ ನಿಧನ



ಮಲೇಬೆನ್ನೂರು ಪಟ್ಟಣದ ವಾಸಿ, ಗ್ರಾ.ಪಂ ಮಾಜಿ ಸದಸ್ಯರಾದ ವರ್ತಕ ಗುಳದಹಳ್ಳಿ ಮಹೇಶ್ವರಯ್ಯ ಅವರ ಧರ್ಮಪತ್ನಿ

**ಶ್ರೀಮತಿ ಈರಮ್ಮ** (60 ವರ್ಷ)

ಇವರು, ದಿನಾಂಕ 05.09.2023ರ ಮಂಗಳವಾರ ಮಧ್ಯಾಹ್ನ 3.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 06.09.2023ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಮಲೇಬೆನ್ನೂರು ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು : ಗುಳದಹಳ್ಳಿ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು.**

## ಶಕ್ತಿ ಶಿಕ್ಷಕರಿಗಿದೆ

**(1ನೇ ಪುಟದಿಂದ)** ಅಂಗಡಿ ಮಲ್ಲಿಕಾರ್ಜುನ್ , ಶಿವಮೂರ್ತಿ, ಸುರೇಶ್ ಹಂಚಿನಗೌಡ್ರು, ರೂಪಾ ಇತರರು ಹಾಜರಿದ್ದರು. ಸುರೇಶ್ ಹಂಚಿನಗೌಡ್ರು ಮತ್ತು ರೂಪಾ ನಿರೂಪಿಸಿದರೆ, ಬಿ.ಬಿ. ರೇವಣ ನಾಯ್ಕ್ ಎಲ್ಲರಿಗೂ ವಂದಿಸಿದರು.

## ಟಿ. ಮಲ್ಲಪ್ಪ ನಿಧನ



ಶ್ರೀ ಟಿ. ಮಲ್ಲಪ್ಪನವರು (ನಿವೃತ್ತ ಶಿಕ್ಷಕರು, ಚಿತ್ರದುರ್ಗ.) ದಿನಾಂಕ : 05.09.2023ರ ಮಂಗಳವಾರ ಮಧ್ಯಾಹ್ನ 12.00 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 06.09.2023 ಬುಧವಾರ ಬೆಳಿಗ್ಗೆ 10.00 ಗಂಟೆಗೆ ದಾವಣಗೆರೆಯ ಶಾಮನೂರಿನ ರುದ್ರ ಭೂಮಿಯಲ್ಲಿ ನೆರವೇರಿಸಲಾಗುವುದು.

## ರಾಣೇಬೆನ್ನೂರು ಸಿದ್ಧಾರೂಢ ಮಠದಲ್ಲಿ ಪುರಾಣ ಪ್ರವಚನ



ಹೊಸನಗರ ಶ್ರೀ ಗುರು ಕಬೀರಾನಂದ ಸ್ವಾಮಿ ಸಿದ್ಧಾಶ್ರಮದ ಶ್ರೀ ಸಿದ್ಧಾರೂಢ ಮಠದಲ್ಲಿ ಶ್ರಾವಣ ಮಾಸದ ಅಂಗವಾಗಿ ಶ್ರೀ ಸಿದ್ಧಾರೂಢ ಚರಿತ್ರೆ ಪುರಾಣ ಪ್ರವಚನ ಕಾರ್ಯಕ್ರಮ ಈಗಾಗಲೇ ಆರಂಭವಾಗಿದ್ದು, ಇದೇ ದಿನಾಂಕ 14ರವರೆಗೆ ನಡೆಯಲಿದೆ.

## ಹೆದ್ದಾರಿ ಗುಂಡಿಗೆ ಅವೈಜ್ಞಾನಿಕವಾಗಿ ಮಣ್ಣು ಅಪಘಾತಗಳಿಂದ ಅನಾಹುತ : ಕ್ರಮಕ್ಕೆ ಒತ್ತಾಯ




ಹರಿಹರ, ಸೆ. 5- ನಗರದ ಹೊರವಲಯದ ಹರಪನಹಳ್ಳಿ ರಸ್ತೆ ಸಮೀಪ ಮಂದಾಪುರ ಹಳ್ಳದ ಬಳಿ ರಾಜ್ಯ ಹೆದ್ದಾರಿಯಲ್ಲಿರುವ ಗುಂಡಿಗಳನ್ನು ಅವೈಜ್ಞಾನಿಕವಾಗಿ ಮಣ್ಣಿನಿಂದ ಮುಚ್ಚಿಸಲಾಗಿದೆ. ಮಳೆಯಿಂದಾಗಿ ಇಲ್ಲಿ ಸಾಕಷ್ಟು ಜಾರಿಕೆ ಉಂಟಾಗಿ ದ್ವಿಚಕ್ರ ವಾಹನಗಳಲ್ಲಿ ಓಡಾಡುವ ಸಾರ್ವಜನಿಕರು ಬೀಳುತ್ತಿದ್ದಾರೆ. ನಿನ್ನೆಯಷ್ಟೇ ಸಾರಥಿ ಗ್ರಾಮದ ಗ್ರಂಥಪಾಲಕಿ ಸುಧಾ ಅವರು ಈ ರಸ್ತೆಯಲ್ಲಿ ದುರ್ಮರಣಕ್ಕೀಡಾಗಿರುತ್ತಾರೆ. ಲೋಕೋಪಯೋಗಿ ಇಲಾಖೆಯರು ಮಣ್ಣು ಹಾಕಿರುವುದು ಈ ರೀತಿಯ ಅಪಘಾತ ಸಂಭವಿಸಿ ಸಾವಿಗೆ ಕಾರಣವಾಗಿದೆ. ಇದಕ್ಕೆ ಅಧಿಕಾರಿಗಳ ಮೇಲೆ ಜಿಲ್ಲೆಯ ಹಿರಿಯ ಅಧಿಕಾರಿಗಳು ಶಿಸ್ತು ಕ್ರಮಗಳನ್ನು ಕೈಗೊಳ್ಳುವಂತೆ ಸಾರಥಿ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ನಗರದಲ್ಲಿ ಇಂದು ಉಚಿತ ನೇತ್ರ ತಪಾಸಣೆ, ಕನ್ನಡಕಗಳ ವಿತರಣೆ

ಶ್ರೀ ಅಕ್ಕಮಹಾದೇವಿ ಸಮಾಜ, ನೇತ್ರದಾನ ಪ್ರೇರಣಾ ಸಮಿತಿ ವತಿಯಿಂದ ಉಚಿತ ನೇತ್ರ ತಪಾಸಣೆ ಹಾಗೂ ಉಚಿತ ಕನ್ನಡಕಗಳ ವಿತರಣೆ ಕಾರ್ಯಕ್ರಮವು ಇಂದು ನಡೆಯಲಿದೆ. 40 ವರ್ಷ ಮೇಲ್ಪಟ್ಟವರಿಗೆ ಮಾತ್ರ ಉಚಿತ ಕನ್ನಡಕಗಳನ್ನು ಇದೇ ದಿನಾಂಕ 8 ರಂದು ನಡೆಯುವ ಕಾರ್ಯ ಕ್ರಮದಲ್ಲಿ ವಿತರಣೆ ಮಾಡಲಾಗುವುದು ಎಂದು ಸಮಾಜದ ಅಧ್ಯಕ್ಷ ಕೆ.ಕೆ. ಸುಶೀಲಮ್ಮ, ಕಾರ್ಯದರ್ಶಿ ಸುವರ್ಣ ದೊಗ್ಗಳ್ಳಿ ತಿಳಿಸಿದ್ದಾರೆ.

ಮಾಹಿತಿಗಾಗಿ ವಿಜಯ ಬಸವರಾಜ್ (9980199910), ನೀಲಗುಂದ ಜಯಮ್ಮ (962076 2682), ಮಂಜುಳ ಕಾಯಿ (918553139731) ಗೆ ಸಂಪರ್ಕಿಸಬಹುದು.

## ಇಂದು ಮಾಂಸ ಮಾರಾಟ ನಿಷೇಧ

ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಇಂದು ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ. ಮಾಂಸ ಮಾರಾಟ ಮಾಡಿದರೆ ಮಹಾನಗರ ಪಾಲಿಕೆ ಕಾಯ್ದೆ ಪ್ರಕಾರ ಕಾನೂನು ಕ್ರಮ ಜರುಗಿಸುವುದಾಗಿ ಪಾಲಿಕೆ ಆರೋಗ್ಯಾಧಿಕಾರಿ ಎಚ್ಚರಿಸಿದ್ದಾರೆ.

## ಅನಾಮಧೇಯ ಮಹಿಳೆಯ ಶವ ಪತ್ತೆ

ದಾವಣಗೆರೆ, ಸೆ. 5- ನಗರದ ಪಿಬಿ ರಸ್ತೆಯ ಖಾಲಿ ನಿವೇಶನದಲ್ಲಿ ಪಾಳು ಬಿದ್ದಿದ್ದ ತಾತ್ಕಾಲಿಕ ಶೆಡ್‌ನಲ್ಲಿ ಇತ್ತೀಚಿಗೆ 65-70 ವಯಸ್ಸಿನ ಅನಾಮಧೇಯ ಮಹಿಳೆಯ ಶವ ದೊರೆತಿದೆ.

ಮಹಿಳೆಯ ವಾರಸುದಾರರಿದ್ದಲ್ಲಿ ಎಸ್ಪಿ ಕಚೇರಿ (08192 253400), ದಾವಣಗೆರೆ ಉತ್ತರ ವೃತ್ತ ಕಚೇರಿ (08192 259337), ಗಾಂಧಿನಗರ ಪೊಲೀಸ್ ಠಾಣೆ ( 08192272011, 9480803247) ಯನ್ನು ಸಂಪರ್ಕಿಸಬಹುದು.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಐಪಿಎಸ್ ಅಧಿಕಾರಿಗಳ ವರ್ಗಾವಣೆ

## ನಂತರ ಎಂಟು ಅಧಿಕಾರಿಗಳು ಅಧಿಕಾರ ಸ್ವೀಕರಿಸದಂತೆ ತಡೆ



ಬೆಂಗಳೂರು, ಸೆ.5 - ಭಾರೀ ಬೇಡಿಕೆ ಇದ್ದ ಆಯಕಟ್ಟಿನ ಸ್ಥಳಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಡರಾತ್ರಿ 35 ಐಪಿಎಸ್ ಅಧಿಕಾರಿಗಳನ್ನು ವರ್ಗಾವರ್ಗಿಗೊಳಿಸಿ ಆದೇಶ ಹೊರಡಿಸಿದ್ದಾರೆ.

ಈ ಆದೇಶ ಹೊರಬಿದ್ದ 8 ಗಂಟೆಯೊಳಗೆ ಮತ್ತೆ 8 ಪ್ರಮುಖ ಸ್ಥಳಗಳಿಗೆ ನಿಯೋಜಿತಗೊಂಡ ಅಧಿಕಾರಿಗಳು ಅಧಿಕಾರ ಸ್ವೀಕರಿಸದಂತೆ ಮತ್ತೊಂದು ಆದೇಶವೂ ಹೊರಬಿದ್ದಿದೆ.

ಕಳೆದ ಮೂರು ತಿಂಗಳಿಂದ ಆಯ ಕಟ್ಟಿನ ಸ್ಥಾನ ಪಡೆಯಲು ಅಧಿಕಾರಿಗಳ ನಡುವೆ ಪೈಪೋಟಿ, ಮತ್ತೊಂದೆಡೆ ತಮ್ಮ ಸಹೋದ್ಯೋಗಿಗಳಿಂದ ಒತ್ತಡಕ್ಕೆ ಒಳಗಾಗಿದ್ದರು. ಪ್ರಭಾವಿ ಮುಖಂಡರು ಮತ್ತು ಸಚಿವರ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಅವರು ವರ್ಗಾವಣೆ ಮಾಡಿದ್ದರು.

ವರ್ಗಾವಣೆ ಆದೇಶ ಹೊರಬೀಳುತ್ತಿದ್ದಂತೆ ಕೆಲವು ಮುಖಂಡರು ಮತ್ತು ಸಚಿವರು, ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ತಮ್ಮ ಜಿಲ್ಲೆ ಹಾಗೂ ಪ್ರಮುಖ ಸ್ಥಳಗಳಿಗೆ ನಿಯೋಜಿತ ಅಧಿಕಾರಿಗಳ ಬಗ್ಗೆ ಅಪಸ್ವರ ಎತ್ತಿ, ಮತ್ತೆ ಕೆಲವು ಬದಲಾವಣೆಗೆ ಒತ್ತಾಯಿಸಿದರು.

ಈ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಅವರು, ಅಧಿಕಾರಿಗಳಾದ ಅಬ್ದುಲ್ ಅಹದ್, ಭೀಮಾಶಂಕರ ಗುಳೇದ್, ಬದರಿನಾಥ್, ನಿರಂಜನ್ ರಾಜ್ ಅರಸ್, ಅಕ್ಷಯ್ ಮಚ್ಚೇಂದ್ರ, ಶೇಖರ್ ತೆಕ್ಕಣ್ಣನವರ್, ಸೈಯ್ಯದ್ ಉಲ್ಲಾ, ಸಂಜೀವ್ ಪಾಟೀಲ್ ಅವರುಗಳನ್ನು ಡಿಜಿ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸದಂತೆ ಆದೇಶ ಹೊರಬಿದ್ದಿದೆ.

ಈ ಆದೇಶ ಬರುವುದಕ್ಕೂ ಮುನ್ನ ಆದೇಶ ಪಟ್ಟಿ ಇಂತಿದೆ.

ವರ್ಗಾವಣೆಗೊಂಡ ಅಧಿಕಾರಿಗಳ ವಿವರ ಅನುಪಮ್ ಅಗರ್ವಾಲ್ - ಮಂಗಳೂರು ನಗರ ಪೊಲೀಸ್ ಆಯುಕ್ತ, ಡಾ.ಎಸ್ ಡಿ ಶರಣಪ್ಪ- ಡಿಐಜಿಪಿ & ಡೈರೆಕ್ಟರ್, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು, ವರ್ತಿಕಾ ಕಟಿಯಾರ್ - ಎಸ್.ಪಿ, ರಾಜ್ಯ ಅಪರಾಧ ದಾಖಲೆಗಳ ಘಟಕ, ಕಾರ್ತಿಕ್ ರೆಡ್ಡಿ- ಡಿಸಿಪಿ, ಬೆಂಗಳೂರು ಸಂಚಾರ ದಕ್ಷಿಣ ವಿಭಾಗ, ಕೆ.ಸಂತೋಷ್ ಬಾಬು - ಡಿಸಿಪಿ, ಆಡಳಿತ ವಿಭಾಗ, ಬೆಂಗಳೂರು ನಗರ, ಯತೀಶ್ ಚಂದ್ರ ಜಿ.ಹೆಚ್- ಎಸ್.ಪಿ- ಆಂತರಿಕ ಭದ್ರತಾ ವಿಭಾಗ, ಡಾ.ಭೀಮಾ ಶಂಕರ ಗುಳೇದ್ - ಎಸ್‌ಪಿ, ಬೆಳಗಾವಿ, ನಿಕಂ ಪ್ರಕಾಶ್ ಅಮ್ರಿತ್- ಎಸ್ಪಿ, ವೈರ್‌ಲೆಸ್, ರಾಹುಲ್ ಕುಮಾರ್ ಶಹಾಪುರವಾಡ್- ಡಿಸಿಪಿ, ಬೆಂಗಳೂರು ದಕ್ಷಿಣ ವಿಭಾಗ,

ಡಿ.ದೇವರಾಜ್- ಡಿಸಿಪಿ ಬೆಂಗಳೂರು ಪೂರ್ವ ವಿಭಾಗ, ಅಬ್ದುಲ್ ಅಹದ್- ಡಿಸಿಪಿ ಬೆಂಗಳೂರು ಕೇಂದ್ರ ವಿಭಾಗ, ಎಸ್.ಗಿರೀಶ್- ಡಿಸಿಪಿ ಬೆಂಗಳೂರು ಪಶ್ಚಿಮ ವಿಭಾಗ, ಸಂಜೀವ್ ಎಂ. ಪಾಟೀಲ್- ಡಿಸಿಪಿ, ವೈಟ್ ಫೀಲ್ಡ್ ವಿಭಾಗ, ಕೆ.ಪರಶುರಾಮ್- ಎಸ್.ಪಿ. ಇಂಟಲಿಜೆನ್ಸ್, ಹೆಚ್.ಡಿ ಆನಂದ್ ಕುಮಾರ್- ಎಸ್.ಪಿ, ನಾಗರಿಕ ಹಕ್ಕುಗಳು ಮತ್ತು ಜಾರಿ ನಿರ್ದೇಶನಾಲಯ, ಡಾ.ಸುಮನ್ ಡಿ. ಪೆನ್ನೇಕರ್- ಎಐಜಿಪಿ, ಹೆಡ್ ಕ್ವಾರ್ಟರ್ಸ್-1, ಡೆಕಾ ಕಿಶೋರ್ ಬಾಬು- ಎಸ್ಪಿ ಮತ್ತು ಪ್ರಿನ್ಸಿಪಾಲ್, ಪೊಲೀಸ್ ತರಬೇತಿ ಕೇಂದ್ರ, ಕಲಬುರಗಿ, ಡಾ.ಕೋನಾ ವಂಶಿಕೃಷ್ಣ - ಡಿಸಿಪಿ, ಕಮಾಂಡ್ ಸೆಂಟರ್, ಬೆಂಗಳೂರು, ಲಕ್ಷ್ಮಣ್ ನಿಂಬರಗಿ- ಎಸ್ಪಿ, ರಾಜ್ಯ ಅಪರಾಧ ದಾಖಲೆಗಳ ಘಟಕ, ಡಾ.ಅರುಣ್.ಕೆ- ಎಸ್ಪಿ, ಉಡುಪಿ, ಮಹಮ್ಮದ್ ಸುಜೀತಾ. ಎಂ.ಎಸ್- ಎಸ್ಪಿ ಹಾಸನ, ಜಯಪ್ರಕಾಶ್- ಎಸ್ಪಿ ಇಂಟಲಿಜನ್ಸ್, ಶೇಖರ್.ಹೆಚ್. ತೆಕ್ಕನ್ನವರ್- ಡಿಸಿಪಿ, ಸಿಸಿಬಿ ಬೆಂಗಳೂರು, ಸಾರಾ ಫಾತೀಮಾ- ಡಿಸಿಪಿ, ಬೆಂಗಳೂರು ಸಂಚಾರ ಪಶ್ಚಿಮ ವಿಭಾಗ, ಸೋನಾವಾನೆ ರಿಷಿಕೇಶ್ ಭಗವಾನ್- ಎಸ್.ಪಿ ವಿಜಯಪುರ, ಲೋಕೇಶ್ ಭರಮಪ್ಪ ಜಗಲ್ಸರ್- ಎಸ್ಪಿ, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು. ಆರ್. ಶ್ರೀನಿವಾಸ್ ಗೌಡ- ಡಿಸಿಪಿ-2, ಸಿಸಿಬಿ ಬೆಂಗಳೂರು, ಪಿ.ಕೃಷ್ಣಕಾಂತ್- ಎಐಜಿಪಿ (ಆಡಳಿತ).

ಅಮರನಾಥ್ ರೆಡ್ಡಿ.ವೈ- ಎಸ್ಪಿ ಬಾಗಲಕೋಟೆ, ಹರಿರಾಮ್ ಶಂಕರ್- ಎಸ್ಪಿ, ಇಂಟೆಲಿಜೆನ್ಸ್, ಅದ್ದೂರು ಶ್ರೀನಿವಾಸುಲು- ಎಸ್ಪಿ ಕಲಬುರಗಿ, ಅನ್ಶು ಕುಮಾರ್ - ಎಸ್ಪಿ, ಕೋಸ್ಟಲ್ ಸೆಕ್ಯುರಿಟಿ ಪೊಲೀಸ್, ಉಡುಪಿ, ಕನ್ನಿಕಾ ಸಿಕ್ರಿವಾಲ್ - ಡಿಸಿಪಿ, ಕಾನೂನು ಸುವ್ಯವಸ್ಥೆ, ಕಲಬುರಗಿ, ಕುಶಾಲ್ ಚೌಕ್ಸಿ - ಜಂಟಿ ನಿರ್ದೇಶಕರು, ವಿಧಿ ವಿಜ್ಞಾನ ಪ್ರಯೋಗಾಲಯ ಬೆಂಗಳೂರು, ರವೀಂದ್ರ ಕಾಶಿನಾಥ್ ಗಡದಿ - ಎಸ್.ಪಿ ಇಂಟಲಿಜೆನ್ಸ್.

# ದೇಶದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಬಹುಮುಖ್ಯ

## ಹರಪನಹಳ್ಳಿ ತಾಲ್ಲೂಕಿನ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕರಾದ ಲತಾ ಮಲ್ಲಿಕಾರ್ಜುನ್



ಹರಪನಹಳ್ಳಿ, ಸೆ. 5- ದೇಶದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಬಹುಮುಖ್ಯವಾಗಿದೆ ಎಂದು ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ತರಳಬಾಳು ಸಮುದಾಯ ಭವನದಲ್ಲಿ ಶಿಕ್ಷಕರ ಸಂಘ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದಿನಿಂದಲೂ ಗುರುಗಳಿಗೆ ಉನ್ನತ ಸ್ಥಾನ ಕೊಡಲಾಗಿದೆ. ಜವಾಬ್ದಾರಿಯುತ ಸ್ಥಾನದಲ್ಲಿದ್ದೀರಿ. ಶ್ರದ್ಧೆಯಿಂದ ಬೋಧನೆ ಮಾಡಿ ಪಠ್ಯದ ಜೊತೆಗೆ ಪ್ರಾಪಂಚಿಕ ಜ್ಞಾನ ಹಾಗೂ ಮೌಲ್ಯಗಳನ್ನು ಮಕ್ಕಳಿಗೆ ಕಲಿಸಿ, ಶಿಕ್ಷಕರ ದಿನಾಚರಣೆ ಸಮಾಜದಲ್ಲಿ ಅವರು ವಹಿಸುವ ಪಾತ್ರವನ್ನು ಗುರುತಿಸುವತ್ತ ಮಹತ್ವದ ಹೆಜ್ಜೆಯಾಗಿದೆ ಎಂದ ಅವರು, ನೀವು ನೀಡಿದ ಮನವಿಯನ್ನು ಸರ್ಕಾರದ ಗಮನಕ್ಕೆ ತರುತ್ತೇನೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಯು. ಬಸವರಾಜಪ್ಪ ಮಾತನಾಡಿ, ತಾಲ್ಲೂಕಿನಲ್ಲಿ 958 ಶಿಕ್ಷಕರು, 245 ಅತಿಥಿ ಶಿಕ್ಷಕಕರು ಸೇರಿದಂತೆ 51850 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಶೈಕ್ಷಣಿಕವಾಗಿ ಸಾಕಷ್ಟು ಅಭಿವೃದ್ಧಿ ಆಗಿದೆ. ಈ ಬಾರಿ ಕೂಡ ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಫಲಿತಾಂಶಕ್ಕೆ ವಿಶೇಷ ಕಾರ್ಯ ಯೋಜನೆ ರೂಪಿಸಲಾಗಿದ್ದು, ಗುಣಮಟ್ಟದ ಶಿಕ್ಷಣ ನೀಡಲು ಕ್ರಮ ವಹಿಸಿದ್ದೇವೆ. ಪೋಷಕರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿ ಎಂದು ಶಿಕ್ಷಕರಿಗೆ ತಿಳಿಸಿದರು.

ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್ ಮಾತನಾಡಿ, ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಸವಿನೆನಪಿಗಾಗಿ ಶಿಕ್ಷಕರ ದಿನಾಚರಣೆ ಆಚರಿಸಲಾಗುತ್ತಿದ್ದು, ಹರಪನಹಳ್ಳಿ ಶಿಕ್ಷಣ ಕಾಶಿಯಾಗಿದೆ. ಶಿಕ್ಷಕರು ಜನರಿಗೆ ಮಾರ್ಗದರ್ಶಿ ಮತ್ತು ಸ್ಫೂರ್ತಿಯಾಗಿ ಕಾರ್ಯ ನಿರ್ವಹಿಸುವ ವ್ಯಕ್ತಿಯಾಗಿ ಕೆಲಸ ಮಾಡುತ್ತಾರೆ ಎಂದರು.

ಉಪ ವಿಭಾಗಾಧಿಕಾರಿ ಟಿ.ವಿ. ಪ್ರಕಾಶ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾದ ಹೆಚ್. ವಿಶಾಲಾಕ್ಷಮ್ಮ, ಇ.ಓ. ಕೆ.ಆರ್. ಪ್ರಕಾಶ್, ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಕೆ. ಷಣ್ಮುಖಪ್ಪ, ಬಿಆರ್‌ಸಿ ಹೊನ್ನತ್ತೆಪ್ಪ, ಇಸಿಓ ಗಿರಜ್ಜಿ ಮಂಜುನಾಥ, ಅಕ್ಷರ ದಾಸೋಹದ ಎ.ಡಿ. ಜಯರಾಜ್, ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷೆ ಜಿ. ಪದ್ಮಲತಾ, ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಎನ್.ಜಿ. ಮನೋಹರ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಎಸ್. ರಾಮಪ್ಪ, ಕಾರ್ಯದರ್ಶಿ ವೆಂಕಟೇಶ ಬಾಗಲಾರ್, ಸರ್ಕಾರಿ ನೌಕರರ ಒಕ್ಕೂಟದ ತಾಲ್ಲೂಕು ಅಧ್ಯಕ್ಷ ಎಂ. ಆಂಜನೇಯ, ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಕೆ. ಶಿವಾನಂದಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಸಹ ಕಾರ್ಯದರ್ಶಿ ಪಿ. ಗಣೇಶ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಕ್ಬೂಲ್ ಭಾಷಾ, ಎಂ.ಹೆಚ್. ಜನಾರ್ಧನ ರೆಡ್ಡಿ, ಶಿಕ್ಷಣಾಧಿಕಾರಿಗಳ ಸಂಘದ ತಾಲ್ಲೂಕು ಅಧ್ಯಕ್ಷ ಹೆಚ್.ಕೆ. ಚಂದ್ರಪ್ಪ, ಪ್ರೌಢಶಾಲಾ ದೈಹಿಕ ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಕೆ. ತಿರುಪತಿ, ಅರ್ಜುನ ಪರಸಪ್ಪ, ಸೊಪ್ಪಿನ ಹನುಮಂತಪ್ಪ, ಟಿ. ಹೊನ್ನಪ್ಪ, ಎಎಸ್‌ಎಂ ಗುರುಪ್ರಸಾದ್, ಪದ್ಮರಾಜ, ಮಂಜುನಾಥ ಪೂಜಾರ್, ಬಿ. ಕೊಟ್ರೇಶ, ಲತಾ ರಾಥೋಡ್ ಹಾಗು ಇತರರು ಪಾಲ್ಗೊಂಡಿದ್ದರು.

# ಸಾರಿಗೆ ಬಸ್ಸುಗಳಲ್ಲಿ ಕಂಡಕ್ಟರ್ ಕಡ್ಡಾಯವಾಗಿ ಇರಲಿ: ಸುಭಾನ್‌ಸಾಬ್

ದಾವಣಗೆರೆ, ಸೆ.5- ಪ್ರಯಾಣಿಕರ ಹಿತದೃಷ್ಟಿಯಿಂದ ಸರ್ಕಾರಿ ಸಾರಿಗೆ ಬಸ್ಸುಗಳಲ್ಲಿ ಕಂಡಕ್ಟರ್‌ಗಳನ್ನು ಕಡ್ಡಾಯವಾಗಿ ನೇಮಿಸುವಂತೆ ಹೆಲ್ಪ್‌ಲೈನ್ ರೂರಲ್ ಡೆವಲಪ್‌ಮೆಂಟ್ ಆರ್ಗನೈಜೇಷನ್‌ನ ಸುಭಾನ್ ಸಾಬ್ ನದಾಫ್ ಒತ್ತಾಯಿಸಿದ್ದಾರೆ. ಈ ಸಂಬಂಧ ತಹಶೀಲ್ದಾರರ್ ಮೂಲಕ ಸರ್ಕಾರಕ್ಕೆ ಮನವಿ ಮಾಡಿರುವ ನದಾಫ್, ಇತ್ತೀಚಿನ ದಿನಗಳಲ್ಲಿ ಯುವಕರು ಮತ್ತು ಮಧ್ಯಮ ವರ್ಗದವರಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗಿ ವರದಿಯಾಗುತ್ತಿವೆ. ಸಾರಿಗೆ ಬಸ್ಸುಗಳಲ್ಲಿ ಚಾಲಕ ಮಾತ್ರ ಇದ್ದು, ಅನಾರೋಗ್ಯದಿಂದ ತುರ್ತು ಸಂದರ್ಭ ಏನಾದರೂ ಎದುರಾದಾಗ ಬಸ್ಸನ್ನು ನಿಯಂತ್ರಣಕ್ಕೆ ತರಲು ಕಷ್ಟವಾಗುತ್ತದೆ. ಹಾಗಾಗಿ ಡ್ರೈವರ್ ಮತ್ತು ಕಂಡಕ್ಟರ್ ಇಬ್ಬರೂ ಇರುವಂತೆ ಮಾಡಬೇಕಾಗಿದೆ. ತುರ್ತು ಸಂದರ್ಭದಲ್ಲಿ ಕಂಡಕ್ಟರ್‌ಗಳೂ ಸಹ ಬಸ್ ನಿಯಂತ್ರಿಸಿ ಪ್ರಯಾಣಿಕರನ್ನು ರಕ್ಷಿಸಲು ಸಹಕಾರಿಯಾಗುತ್ತಾರೆ ಎಂದು ಹೇಳಿದ್ದಾರೆ.

# ಹೃದಯಾಘಾತದ ಲಕ್ಷಣಗಳನ್ನು ಗ್ಯಾಸ್ಟ್ರಿಕ್ ಎಂದು ನಿರ್ಲಕ್ಷ್ಯ ಮಾಡಬೇಡಿ




**ಮಲೇಬೆನ್ನೂರಿನಲ್ಲಿನ ಉಚಿತ ಹೃದಯ ತಪಾಸಣಾ ಶಿಬಿರದಲ್ಲಿ ಡಾ. ಗುರುರಾಜ್ ಎಚ್ಚರಿಕೆ**

ಮಲೇಬೆನ್ನೂರು, ಸೆ. 5- ಈ ಹಿಂದೆ ಶ್ರೀಮಂತರ ಕಾಯಿಲೆಯಾಗಿದ್ದ ಬಿ.ಪಿ., ಶುಗರ್ ಇತ್ತೀಚೆಗೆ ಹಳ್ಳಿ ಜನರಲ್ಲೂ ಹೆಚ್ಚಾಗಿ ಕಂಡು ಬರುತ್ತಿವೆ. ಈ ಎರಡೂ ಕಾಯಿಲೆಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಬೀಡಿ, ಸಿಗರೇಟ್, ತಂಬಾಕುಗಳಿಂದ ದೂರವಿದ್ದರೆ ಹೃದಯಾ ಘಾತವನ್ನು ತಡೆಗಟ್ಟಬಹುದೆಂದು ಎಸ್.ಎಸ್. ನಾರಾ ಯಣ ಹಾರ್ಟ್ ಸೆಂಟರ್‌ನ ಡಾ. ಗುರುರಾಜ್ ಹೇಳಿದರು.

ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಾವಣಗೆರೆಯ ಎಸ್.ಎಸ್. ನಾರಾಯಣ ಹಾರ್ಟ್ ಸೆಂಟರ್ ಮತ್ತು ಮಲೇಬೆನ್ನೂರು ಲಯನ್ಸ್ ಕ್ಲಬ್ ಹಾಗೂ ಶ್ರೀ ವೀರಭದ್ರೇಶ್ವರ ಚಾರಿಟಬಲ್ ಟ್ರಸ್ಟ್ ವತಿಯಿಂದ ನಿನ್ನೆ ಹಮ್ಮಿಕೊಂಡಿದ್ದ ಉಚಿತ ಹೃದಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಹೃದಯಾಘಾತದ ಲಕ್ಷಣಗಳನ್ನು ಗ್ಯಾಸ್ಟ್ರಿಕ್ ಎಂದು ನಿರ್ಲಕ್ಷ್ಯ ಮಾಡಬೇಡಿ. ಹಾರ್ಟಿಕ್ ಕೆಲವರಿಗೆ ಮೋಸ ಮಾಡುತ್ತದೆ ಎಂದು ಎಚ್ಚರಿಸಿದ ಡಾ. ಗುರುರಾಜ್ ಅವರು ಹೃದಯಕ್ಕೆ ಸಂಬಂಧಿಸಿದ ಯಾವುದೇ ಲಕ್ಷಣ ಕಂಡು ಬಂದರೂ ವೈದ್ಯರ ಬಳಿ ಹೋಗಿ ಇಸಿಜಿ ಮಾಡಿಸಿಕೊಳ್ಳಿ ಎಂದರು.

ಇತ್ತೀಚೆಗೆ ಚಿಕ್ಕ ವಯಸ್ಸಿನವರಲ್ಲೂ ಹೃದಯಾಘಾತ ಕಂಡು ಬರುತ್ತಿದ್ದು, ಕಾಯಿಲೆಗಳು ಯಾವ ಕಾರಣದಿಂದ ಬರುತ್ತವೆ ಮತ್ತು ಬಂದರೆ ಹೇಗೆ ತಡೆಗಟ್ಟಬೇಕೆಂಬ ಅರಿವು ಬಹಳ ಮುಖ್ಯವಾಗಿದೆ. ಯಾವುದೇ ಕಾಯಿಲೆಗಳ ಬಗ್ಗೆ ನಿರ್ಲಕ್ಷ್ಯ ಮಾಡದೆ ಚಿಕಿತ್ಸೆ ಪಡೆದುಕೊಳ್ಳಿ. ಕಾಯಿಲೆ ದೊಡ್ಡದಾಗಿ ಬೆಳೆದ ನಂತರ ನೀವು ಎಷ್ಟೇ ಹಣ ಸುರಿದರೂ ಉತ್ತಮ ಫಲಿತಾಂಶ ಸಿಗುವುದಿಲ್ಲ. ಹಾಗಾಗಿ ಉತ್ತಮ ಆರೋಗ್ಯಕ್ಕಾಗಿ ನಿಯಮಿತ ವ್ಯಾಯಾಮ, ಹಣ್ಣು-ತರಕಾರಿ ಬಳಸಿ. ಮಾನಸಿಕ ಒತ್ತಡದಿಂದ ದೂರವಿರಿ ಎಂದು ಡಾ. ಗುರುರಾಜ್ ತಿಳಿಸಿದರು.

ಲಯನ್ಸ್ ಮಾಜಿ ಗೌರ್ನರ್ ಡಾ. ಟಿ. ಬಸವರಾಜ್ ಮಾತನಾಡಿ, ಆರೋಗ್ಯದ ಬಗ್ಗೆ ಯಾರೂ ಉದಾಸೀನ ಮಾಡದೇ ಜಾಗೃತರಾಗಿರಬೇಕೆಂದರು.

ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಲಕ್ಷ್ಮಿ ದೇವಿ ಅವರು ಶಿಬಿರವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಲಯನ್ಸ್ ಕ್ಲಬ್ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಲಯನ್ಸ್ ಕ್ಲಬ್ ಕಾರ್ಯದರ್ಶಿ ಸಿರಿಗೆರೆ ಸಿದ್ದಪ್ಪ, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷರಾದ ಓ.ಜಿ. ರುದ್ರಗೌಡ್ರು, ಎನ್. ಜಿ. ಶಿವಾಜಿ ಪಾಟೀಲ್, ಶ್ರೀಮತಿ ರೂಪಾ ಪಾಟೀಲ್, ಡಾ. ಹೆಚ್.ಜೆ. ಚಂದ್ರಕಾಂತ್, ಜಿಗಳಿ ಎನ್. ಶಿವನಗೌಡ್ರು, ಇ.ಎಂ. ಮರುಳಸಿದ್ದೇಶ್, ಉಡೇದರ ಸಿದ್ದೇಶ್, ವೀರಭದ್ರೇಶ್ವರ ದೇವಸ್ಥಾನದ ಟ್ರಸ್ಟಿ ಬಿ.ಎನ್. ವೀರೇಶ್ ಪುರಸಭೆ ಸದಸ್ಯ ಷಾ ಅಬ್ರಾರ್, ಭಾನುವಳ್ಳಿ ಸುರೇಶ್, ಎಳೆಹೊಳೆ ಕುಮಾರ್, ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಮಂಜುಳಾ, ನೇತ್ರಾಧಿಕಾರಿ ಶ್ರೀರಾಮುಲು, ಎಸ್. ಎಸ್. ನಾರಾಯಣ ಹಾರ್ಟ್ ಸೆಂಟರ್‌ನ ಗುಡ್ಡಪ್ಪ ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

# ಶಿಕ್ಷಕ ಎಸ್.ಎಚ್. ಪಾಟೀಲ್‌ಗೆ ಪ್ರಶಸ್ತಿ



**ರಾಣೇಬೆನ್ನೂರು**

ರಾಣೇಬೆನ್ನೂರು, ಸೆ. 5- ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ರಾಜ್ಯಘಟಕದ ವತಿಯಿಂದ ನೀಡಲ್ಪಡುವ ರಾಜ್ಯ ಪ್ರಶಸ್ತಿಯನ್ನು ರಾಣೇಬೆನ್ನೂರಿನ ಕನಕದಾಸ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಎಸ್.ಹೆಚ್. ಪಾಟೀಲ್ ಅವರಿಗೆ ನೀಡಲಾಗಿದೆ.

ಇದೇ ದಿನಾಂಕ 9ರ ಶನಿವಾರ ಬೆಂಗಳೂರಿನ ಶಿಕ್ಷಕರ ಸದನದಲ್ಲಿ ನಡೆಯುವ ರಾಜ್ಯಮಟ್ಟದ ಶಿಕ್ಷಕರ ದಿನಾಚರಣೆ ಮತ್ತು ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಸಮಾವೇಶದಲ್ಲಿ ಪ್ರದಾನ ಮಾಡಲಾಗುವುದು ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ರವಿಕುಮಾರ್ ತಿಳಿಸಿದ್ದಾರೆ.

ಪ್ರಶಸ್ತಿ ಪಡೆದ ಪಾಟೀಲರನ್ನು ರಾಜ್ಯ ಪ್ರತಿನಿಧಿಗಳಾದ ಮಲ್ಲಿಕಾರ್ಜುನ ಬಾವಿಕಟ್ಟಿ, ನಾಗರಾಜ ನಲವಾಗಲ, ಜಿಲ್ಲಾಧ್ಯಕ್ಷ ಎಂ.ಸಿ.ಮುದಿಗೌಡ್ರು, ಜಿಲ್ಲಾ ಕಾರ್ಯದರ್ಶಿ ಮಾರುತಿ ಲಮಾಣಿ, ತಾಲ್ಲೂಕು ಕಾರ್ಯದರ್ಶಿ ಬಸವರಾಜ ನಾಯಕ್, ಉಪಾಧ್ಯಕ್ಷರಾದ ಪೋಲಿಸ್ ಗೌಡ, ಆರ್. ವಿ. ಮಠದ್ ಸಂಘಟನಾ ಕಾರ್ಯದರ್ಶಿ ಎಂ.ಹೆಚ್. ಪಾಟೀಲ್, ಬಸವರಾಜ ಶಾಮನೂರು, ಹಾಲೇಶ್ ಅಭಿನಂದಿಸಿದ್ದಾರೆ.

# ವಿದೇಶ ಪ್ರವಾಸದ ವಿವರದಲ್ಲೂ 'ಭಾರತ'

**(1ನೇ ಪುಟದಿಂದ)** ಇಂಡಿಯಾ ಕೈ ಬಿಟ್ಟು ಭಾರತ ಎಂಬ ಪದದ ಬಳಕೆ ಮಾಡಿರುವುದು ನಾನಾ ರೀತಿಯ ಚರ್ಚೆಗೆ ಕಾರಣವಾಗಿದೆ.

ಕೇಂದ್ರ ಸರ್ಕಾರ ಅಧಿಕೃತವಾಗಿ ಇಂಡಿಯಾ ಎಂಬ ಪದ ಬಿಟ್ಟು ಭಾರತ ಎಂಬ ಪದ ಬಳಸಲಿದೆಯೇ? ಎಂಬ ಪ್ರಶ್ನೆಗಳೂ ಹುಟ್ಟಿಕೊಂಡಿವೆ.

# ಆನೆಗಳ ತಡೆ ಬ್ಯಾರಿಕೇಡ್‌ಗೆ 500 ಕೋಟಿ ರೂ. ಅನುದಾನ

**ಅರಣ್ಯ ಸಚಿವ ಈಶ್ವರ ಖಂಡ್ರೆ ಬೇಡಿಕೆ**

ಬೆಂಗಳೂರು, ಸೆ.5 - ಕಳೆದ 15 ದಿನಗಳ ಅಂತರದಲ್ಲಿ ಮಾನವ-ವನ್ಯಜೀವಿ ಸಂಘರ್ಷದಲ್ಲಿ 11 ಜನರು ಸಾವಿಗೀಡಾಗಿದ್ದು, ಅಮೂಲ್ಯ ಜೀವ ಹಾನಿ ತಪ್ಪಿಸಲು ಅಗತ್ಯ ಮತ್ತು ತುರ್ತು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿದೆ. ಆನೆಗಳು ನಾಡಿಗೆ ಬಾರದಂತೆ ತಡೆಯಲು ಬ್ಯಾರಿಕೇಡ್ ನಿರ್ಮಾಣಕ್ಕಾಗಿ ಮುಖ್ಯಮಂತ್ರಿಗಳಿಗೆ 500 ಕೋಟಿ ರೂ. ಅನುದಾನ ನೀಡುವಂತೆ ಮನವಿ ಮಾಡಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಯ ಅರಣ್ಯ ಘಟಕದ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆಯ ಬಳಿಕ ಮಾನವ ಮತ್ತು ವನ್ಯ ಜೀವಿ ಸಂಘರ್ಷ ಇಂದು, ನಿನ್ನೆಯದೇನಲ್ಲ. ಹಿಂದಿನಿಂದ ನಡೆಯುತ್ತಿದೆ. ಆದರೆ, ಅರಣ್ಯ ಪ್ರದೇಶ ಕಡಿಮೆ ಆಗುತ್ತಿದ್ದು, ಕಾಡು ಪ್ರಾಣಿಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಸಂಘರ್ಷಗಳು ಹೆಚ್ಚಾಗುತ್ತಿವೆ ಎಂದರು.

ಈ ಬಾರಿ ವಾಡಿಕೆಗಿಂತ ಬಹಳ ಕಡಿಮೆ ಮಳೆ ಆಗಿದ್ದು, ಕಾಡಿನಲ್ಲಿ ಕುಡಿಯುವ ನೀರು ಮತ್ತು ಆಹಾರದ ಸಮಸ್ಯೆಯಿಂದಾಗಿ ಕಾಡು ಪ್ರಾಣಿಗಳು ನಾಡಿಗೆ ಬರುತ್ತಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದು, ಈ ಹಿನ್ನೆಲೆಯಲ್ಲಿ ಅರಣ್ಯದೊಳಗೆ ವನ್ಯಜೀವಿಗಳಿಗೆ ಸೂಕ್ತ ಆಹಾರ ದೊರಕುವಂತೆ ಮಾಡುವ ಮಾರ್ಗೋಪಾಯಗಳ ಬಗ್ಗೆ ಚರ್ಚಿಸಲಾಗಿದೆ ಎಂದವರು ಹೇಳಿದರು. ಆನೆ ಕಾರಿಡಾರ್‌ಗಳಲ್ಲಿ ರಸ್ತೆ, ರೈಲು, ವಿದ್ಯುತ್ ಕಂಬ, ನೀರಿನ ಕೊಳವೆ ಅಳವಡಿಕೆಗಾಗಿ ಕೆಲವು ಭಾಗ ಬಳಕೆಯಾಗಿದೆ, ಖಾಸಗಿಯ ವರಿಂದ ಭೂಮಿ ಒತ್ತುವರಿಯಾಗಿದ್ದರೆ ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಿ, ಆನೆ ಕಾರಿಡಾರ್ ಪ್ರದೇಶ ರಕ್ಷಿಸಲಾಗುವುದು.

ಅರಣ್ಯದೊಳಗೆ ಹಾಗೂ ಅರಣ್ಯದಂಚಿನಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಕಂಡುಬಂದರೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು, ಅರಣ್ಯಾಧಿಕಾರಿಗಳ ಲೋಪ ಕಂಡುಬಂದರೆ ಅವರ ವಿರುದ್ಧವೂ ಕ್ರಮ ಜರುಗಿಸಲಾಗುವುದು ಎಂದರು.

ರಾಜ್ಯದಲ್ಲಿ ಆನೆಗಳ ದಾಳಿಯಿಂದಲೇ ಅಧಿಕ ಸಾವು ಸಂಭವಿಸುತ್ತಿದೆ, ಕಳೆದ ಐದೂವರೆ ವರ್ಷಗಳಲ್ಲಿ 148 ಜನರು ಕಾಡಾನೆ ದಾಳಿಯಿಂದ ಮೃತಪಟ್ಟಿದ್ದಾರೆ, 2018-19ರಲ್ಲಿ 13 ಜನರು ಆನೆ ದಾಳಿಯಿಂದ ಮೃತಪಟ್ಟಿದ್ದರೆ, 2019-20ರಲ್ಲಿ 30, 2020-21ರಲ್ಲಿ 26, 2021-22ರಲ್ಲಿ 28, 2022-23ರಲ್ಲಿ 30 ಹಾಗೂ 3.09.2023ರವರೆಗೆ 21 ಅಮೂಲ್ಯ ಜೀವ ಹಾನಿ ಆಗಿದೆ ಎಂದು ವಿವರ ನೀಡಿದರು.

ಆನೆ ಕಾರ್ಯಾಚರಣೆ ವೇಳೆ ಶಾರ್ಪ್ ಶೂಟರ್ ವೆಂಕಟೇಶ್ ಸೇರಿದಂತೆ, ಇಬ್ಬರು ಹೊರಗುತ್ತಿಗೆ ಸಿಬ್ಬಂದಿ ಮೃತಪಟ್ಟಿದ್ದಾರೆ, ಅವರ ಕುಟುಂಬಕ್ಕೆ ತಲಾ 15 ಲಕ್ಷ ರೂ. ಪರಿಹಾರ ನೀಡಲಾಗುತ್ತಿದೆ ಎಂದು ತಿಳಿಸಿದರು.

# ನಗರದಲ್ಲಿ ಇಂದು ನೇತ್ರ ತಪಾಸಣೆ, ಕನ್ನಡಕ ವಿತರಣೆ

ಶ್ರೀ ಅಕ್ಕಮಹಾದೇವಿ ಸಮಾಜ, ನೇತ್ರದಾನ ಪ್ರೇರಣಾ ಸಮಿತಿ ವತಿಯಿಂದ ಉಚಿತ ನೇತ್ರ ತಪಾಸಣೆ ಹಾಗೂ ಉಚಿತ ಕನ್ನಡಕಗಳ ವಿತರಣೆ ಕಾರ್ಯಕ್ರಮವು ಇಂದು ನಡೆಯಲಿದೆ.

40 ವರ್ಷ ಮೇಲ್ಪಟ್ಟವರಿಗೆ ಮಾತ್ರ ಉಚಿತ ಕನ್ನಡಕಗಳನ್ನು ಇದೇ ದಿನಾಂಕ 8 ರಂದು ನಡೆಯುವ ಕಾರ್ಯಕ್ರಮದಲ್ಲಿ ವಿತರಣೆ ಮಾಡಲಾಗುವುದು ಎಂದು ಸಮಾಜದ ಅಧ್ಯಕ್ಷ ಕೆ.ಕೆ. ಸುಶೀಲಮ್ಮ, ಕಾರ್ಯದರ್ಶಿ ಸುವರ್ಣ ದೊಗ್ಗಳ್ಳಿ ತಿಳಿಸಿದ್ದಾರೆ. ಮಾಹಿತಿಗಾಗಿ ವಿಜಯ ಬಸವರಾಜ್ (9980199910), ನೀಲಗುಂದ ಜಯಮ್ಮ (9620762682), ಮಂಜುಳ ಕಾಯಿ (918553139731) ಗೆ ಸಂಪರ್ಕಿಸಬಹುದು.


**ಶ್ರೀ ಸುಪಾರ್ಶ್ವನಾಥ ಜೈನ್ ಮೈನಾರಿಟಿ ಸೌಹಾರ್ದ ಸಹಕಾರಿ ನಿ.,**

# 491/1, 49/2ಎ, ವಸಂತ ರೋಡ್, ದಾವಣಗೆರೆ-577 001. ದೂರವಾಣಿ : 08192-234534

Shri Suparshwanath Jain Minority Souharda Sahakari Niyamitha (R.)

Regd.: DR/DVG/RSR/SL.NO/4841/2017-18 E-mail : ssjmssndvg@gmail.com

**6 ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನೋಟೀಸ್**

2022-23ನೇ ಸಾಲಿನ **6ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 23ನೇ ಸೆಪ್ಟೆಂಬರ್ 2023ರ ಶನಿವಾರ ಮಧ್ಯಾಹ್ನ 3.30 ಕ್ಕೆ ಶ್ರೀ ಸಂಕೇಶ್ವರ ಪಾರ್ಶ್ವ ರಾಜೇಂದ್ರ ಭವನ, ಕಾಯಿಪೇಟೆ, ದಾವಣಗೆರೆ** ಇಲ್ಲಿ ನಡೆಸಲು ಆಡಳಿತ ಮಂಡಳಿಯು ತೀರ್ಮಾನಿಸಿರುವುದರಿಂದ ಈ ಬಗ್ಗೆ ಸರ್ವ ಸದಸ್ಯರಿಗೂ ಸಭೆಯ ನೋಟೀಸನ್ನು ನಮ್ಮಲ್ಲಿರುವ ಸದಸ್ಯರ ವಿಳಾಸಗಳಿಗೆ ಅಂಚೆಯ ಮೂಲಕ ರವಾನಿಸಲಾಗಿದೆ. ಸರ್ವ ಸದಸ್ಯರು ಈ ಸಭೆಗೆ ಆಗಮಿಸಿ, ತಮ್ಮ ಸಲಹೆ, ಸೂಚನೆಗಳನ್ನು ನೀಡುವುದರ ಮೂಲಕ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.


**ಸೂಚನೆ : ಸಭೆಯ ನೋಟೀಸು ತಲುಪದೇ ಇರುವ ಸದಸ್ಯರು ಪ್ರಕಟಣೆಯನ್ನೇ ಸಭೆಯ ನೋಟೀಸ್ ಎಂದು ಪರಿಗಣಿಸಿ, ಸಭೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸಲಾಗಿದೆ. ವಿಳಾಸದಲ್ಲಿ ಬದಲಾವಣೆ ಆಗಿದ್ದ ಪಕ್ಷದಲ್ಲಿ ದಾಖಲೆಯೊಂದಿಗೆ ಸಹಕಾರಿಯ ಕಛೇರಿಯಲ್ಲಿ ವಿಳಾಸವನ್ನು ಸರಿಪಡಿಸಿಕೊಳ್ಳಬೇಕಾಗಿ ವಿನಂತಿ.**

ಸ್ಥಳ : ದಾವಣಗೆರೆ
ದಿನಾಂಕ : 04.09.2023

ಸಹಿ/- ಶ್ರೀ ಸಂಘವಿ ಮಹಾವೀರ್ ಜೈನ್, ಅಧ್ಯಕ್ಷರು
ಸಹಿ/- ಶ್ರೀ ಅಶೋಕ್‌ಕುಮಾರ್ ಜೈನ್, ಉಪಾಧ್ಯಕ್ಷರು
ಸಹಿ/- ಶ್ರೀ ರಾಜೇಂದ್ರ ಪ್ರಸಾದ್ ಆರ್., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ



**ಖ್ಯಾತ ದಂತತಜ್ಞ ಡಾ. ಆಲಿ ಐ.ಎಂ. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.**




ದಾವಣಗೆರೆ ಬಾಪೂಜಿ ವಿದ್ಯಾಸಂಸ್ಥೆಯ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್‌ನ ನೂತನ ಪ್ರಾಂಶುಪಾಲರಾಗಿ ನಿಯುಕ್ತಿಗೊಂಡಿರುವ ನಗರದ ಹೆಸರಾಂತ ದಂತ ತಜ್ಞರೂ, 'ಅತ್ಯುತ್ತಮ ದಂತವೈದ್ಯ' ಪ್ರಶಸ್ತಿ ಪುರಸ್ಕೃತರು, ಹಾಗೂ ರಂಭಾಪುರಿ ಶ್ರೀಗಳಿಂದ 'ಕಾಯಕ ರತ್ನ' ಎಂದು ಬಿರುದಾಂಕಿತರಾದ

**ಡಾ. ಆಲಿ ಐ.ಎಂ.**

ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಶುಭಾಶಯ ಕೋರುವವರು :

- ಡಾ. ಮಂಜುನಾಥ್ ಎಂ.ಆರ್
- ಡಾ. ಸ್ವಾಮಿ ಎಂ.ಸಿ.ಎಲ್
- ಡಾ. ಆಫ್ತಾಬ್ ನವಾಬ್

## ಶಾಸಕರಿಗೂ ನಿಗಮ ಮಂಡಳಿ ಭಾಗ್ಯ

ಬೆಂಗಳೂರು, ಸೆ. 5 - ಪಕ್ಷದ 15 ಶಾಸಕರೂ ಸೇರಿದಂತೆ ಕಾರ್ಯಕರ್ತರಿಗೆ ನಿಗಮ-ಮಂಡಳಿಗಳ ಅಧ್ಯಕ್ಷ ಹುದ್ದೆಗಳಿಗೆ ಅವಕಾಶ ಮಾಡಿಕೊಡುವುದಾಗಿ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ನಿಗಮ-ಮಂಡಳಿಗಳಿಗೆ ಶಾಸಕರು ಆಸಕ್ತಿ ತೋರುತ್ತಿಲ್ಲ, 15 ರಿಂದ 20 ಮಂದಿ ಮಾತ್ರ ಪದವಿ ಕೇಳುತ್ತಿದ್ದಾರೆ, ಅವರಿಗೂ ಅವಕಾಶ ಮಾಡಿಕೊಟ್ಟು ಉಳಿದವನ್ನು ಕಾರ್ಯಕರ್ತರಿಗೆ ನೀಡಲಾಗುವುದು ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಮಾತ್ರ ಮಂತ್ರಿಯಾಗಿ, ಶಾಸಕರುಗಳಿಗೆ ಅಧಿಕಾರ ಸಿಗದಿದ್ದರೆ ತಪ್ಪಲ್ಲವೇ, ಎಲ್ಲರಿಗೂ ಅವಕಾಶ ಸಿಕ್ಕೆ ಸಿಗುತ್ತದೆ ಎಂದರು.

ನಿಗಮ-ಮಂಡಳಿಗಳಿಗೆ ನೇಮಕಗೊಂಡವರ ಅವಧಿ ಎರಡೂವರೆ ವರ್ಷ ಅವಕಾಶ ನೀಡುತ್ತೇವೆ ಎಂದೂ ಅವರು ಹೇಳಿದರು. ಈ ತಿಂಗಳ 7ಕ್ಕೆ ಭಾರತ್ ಜೋಡೋ ಯಾತ್ರೆಗೆ 1 ವರ್ಷ ತುಂಬುತ್ತದೆ. ಇದರ ನೆನಪಿಗಾಗಿ ಪಾದಯಾತ್ರೆಯನ್ನು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಬೇಕು ಎನ್ನುವ ಯೋಚನೆ ಇತ್ತು, ಬೆಂಗಳೂರಿನಲ್ಲಿ ಟ್ರಾಫಿಕ್ ಸಮಸ್ಯೆ ಆಗುತ್ತದೆ ಎನ್ನುವ ಕಾರಣಕ್ಕೆ ರಾಮನಗರದಲ್ಲಿ ಮಾಡುತ್ತಿದ್ದೇವೆ ಎಂದವರು ಹೇಳಿದರು.

ಮುಖ್ಯಮಂತ್ರಿಗಳು ಅಂದು ನಮ್ಮ ಜೊತೆ ಹೆಜ್ಜೆ ಹಾಕಲಿದ್ದಾರೆ, ಅದೇ ದಿನ ಸಚಿವ ಸಂಪುಟ ಸಭೆ ಇರುವ ಕಾರಣ ಇತರೆ ಮಂತ್ರಿಗಳಿಗೆ ಸೆ.8 ರಂದು ಮಾಡಬಹುದು ಎಂದು ಸೂಚನೆ ನೀಡಿದ್ದೇವೆ. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಒಂದು ಗಂಟೆಗಳ ಕಾಲ ಸಂಜೆ 5 ರಿಂದ 6 ಗಂಟೆಯ ತನಕ ಈ ಕಾರ್ಯಕ್ರಮ ನಡೆಯಲಿದೆ ಎಂದರು.

# ಕೃಷ್ಣ ಕೊಟ್ಟ ಲೋಕಶಿಕ್ಷಣ - ಒಂದು ಚಿಂತನೆ



ಶ್ರೀ ಕೃಷ್ಣ ಭೂಮಿಗೆ ಬಂದದ್ದು ಧರ್ಮ ಸಂಸ್ಥಾಪನೆಗಾಗಿ, ಲೋಕ ಶಿಕ್ಷಣಕ್ಕಾಗಿ. ಅಸುರರನ್ನು ಕೊಂದು ಭಾರವನ್ನು ಇಳಿಸಿ ಧರ್ಮಾತ್ಮರಾದ ಪಾಂಡವರನ್ನು ಸಿಂಹಾಸನದ ಮೇಲೆ ಕುಳ್ಳಿರಿಸುವ ಜೊತೆಗೆ, ಆತನು ತನ್ನ ಜೀವನದಲ್ಲಿ ಅನೇಕ ಕಷ್ಟಕರ ಪರಿಸ್ಥಿತಿಗಳನ್ನು ಎದುರಿಸಿ, ಮಾನವರಿಗೆ ಏನೇ ಕಷ್ಟ ಬಂದರೂ ಅದನ್ನು ಎದುರಿಸಿ ಗೆಲ್ಲಬೇಕು. ಸಾಮ, ದಾನ, ಭೇದ, ದಂಡ ಎಂಬ ನಾಲ್ಕನ್ನು ಉಪಯೋಗಿಸಬೇಕು ಎಂದು ಬೋಧನೆಯನ್ನು ಮಾಡುತ್ತಾನೆ.

ತನ್ನ ವೈರಿಯಾದ ಕಂಸನ ಕಾರಾಗೃಹ ದಲ್ಲಿ ಜನಿಸಿದಾಗ, ತನ್ನನ್ನು ಸ್ಥಳಾಂತರಿ ಸುವಂತೆ ತಪದಿಂದ ತನ್ನನ್ನು ಮಗನಾಗಿ ಪಡೆದ ವಸುದೇವನಿಗೆ ಸೂಚಿಸುತ್ತಾನೆ. ಆಗಲೇ ಕಂಸನನ್ನು ಕೊಂದುಬಿಡಬಹು ದಿತ್ತು. ಆದರೆ, ನಂದಗೋಕುಲಕ್ಕೆ ಹೋದದ್ದರಿಂದ ಅನೇಕ ಕಂಸನ ಬಂಟರನ್ನು ಕೊಲ್ಲುವ ಅವಕಾಶ ಸಿಕ್ಕಿತು.

ಒಬ್ಬೊಬ್ಬ ರಾಕ್ಷಸರನ್ನು ಒಂದೊಂದು ರೀತಿಯಲ್ಲಿ ಕೊಂದು ತನ್ನ ಅಚಿಂತ್ಯ ಅದ್ಭುತ ಶಕ್ತಿಗಳನ್ನು ತೋರುವುದರ ಜೊತೆಗೆ, ಸಮಯಕ್ಕೆ ಸರಿಯಾಗಿ ಬಂದಿರುವ ಕಷ್ಟಕ್ಕೆ ತಕ್ಕ ಪರಿಹಾರವನ್ನು ಮಾಡಿಕೊಳ್ಳಬೇಕು ಎಂಬುದನ್ನು ಸೂಚಿಸುತ್ತಾನೆ. ಉದಾಹರಣೆಗೆ ಸುಂಟರಗಾಳಿಯಾಗಿ ಬಂದು ತೃಣಾವರ್ತ ಮೇಲಕ್ಕೆ ಎತ್ತಿಕೊಂಡು ಹೋದಾಗ ತನ್ನ ಭಾರವನ್ನು ಹೆಚ್ಚಿಸಿಕೊಂಡು ಅತಿ ಭಾರವಾಗಿ ಅವನನ್ನು ಬೀಳಿಸುತ್ತಾನೆ.

ಊರಿನ ನೀರು ಸರ್ಪದ ವಿಷದಿಂದ ಕಲುಷಿತವಾದಾಗ ಸರ್ಪವನ್ನು ಮರ್ಧನ ಮಾಡಿ ಓಡಿಸುತ್ತಾನೆ. ನೀರನ್ನು ಸ್ವಚ್ಛಗೊಳಿಸುತ್ತಾನೆ. ನೀರನ್ನು ಸ್ವಚ್ಛವಾಗಿರಿಸಿ ಕಲುಷಿತ ಮಾಡಬೇಡಿ ಎಂಬ ಪಾಠವನ್ನು ತಿಳಿಸುತ್ತಾನೆ.

ಜನರಿಗೆ ಗೋವರ್ಧನ ಪರ್ವತವನ್ನು ಪೂಜೆ ಮಾಡಲು ಹೇಳುತ್ತಾನೆ. ಪ್ರಕೃತಿ ನಮ್ಮನ್ನು ಕಾಪಾಡುತ್ತದೆ. ನಮಗೆ ಬೇಕಾಗಿರುವ ಗಾಳಿ, ನೀರು, ಬೆಳಕು ಎಲ್ಲವೂ ಪ್ರಕೃತಿಯಿಂದಲೇ ಸಿಗುತ್ತಿರುವುದು. ಇನ್ನು ಗೋಪಾಲಕರಿಗಂತೂ, ತಮ್ಮ ಗೋವುಗಳಿಗೆ ಹುಲ್ಲನ್ನು ಕೊಡುವ ಪರ್ವತವೇ ಅತ್ಯಂತ ಶ್ರೇಷ್ಠ. ಹೀಗೆ ಶ್ರೀಕೃಷ್ಣನು ಪ್ರಕೃತಿಯ ಆರಾಧನೆಯನ್ನು ಮಾಡಿ, ಅದನ್ನು ಸಂರಕ್ಷಿಸಿ. ಇದೇ ನೀವು ಮಾಡುವ ದೇವರ ಪೂಜೆ, ಎಂಬ ದೊಡ್ಡ ಸಂದೇಶ ನೀಡುತ್ತಾನೆ.

ಇನ್ನು ಗೋವುಗಳು ಅವುಗಳಿಂದ ಸಿಗುವ ಹಾಲು ಅಮೃತ ಸಮಾನ. ಎಷ್ಟೋ ತಾಯಂದಿರಿಗೆ ಹಾಲು ಕಡಿಮೆ ಇರುವಾಗ ಅವರ ಮಕ್ಕಳು ಬೆಳೆಯಲು ಹಸುವಿನ ಹಾಲು ಕಾರಣವಾಗುತ್ತದೆ. ಅದರಿಂದ ಬರುವ ಸಗಣಿ ಅತ್ಯುತ್ತಮ ಗೊಬ್ಬರ. ಹುಲುಸಾಗಿ ಬೆಳೆಯುವ ಹುಲ್ಲನ್ನು ತಿಂದು ಅತಿ ಪರಿಶುದ್ಧವಾದ ಹಾಲನ್ನು ಕೊಡುವ ಗೋವಿನೊಳಗೆ ಸಮಸ್ತ ದೇವತೆಗಳ ಸನ್ನಿಧಾನವಿದೆ ಎಂಬ ನಂಬಿಕೆ ಇದೆ. ಶ್ರೀ ಕೃಷ್ಣನಿಗೆ ಪರೋಪಕಾರಿಯಾದ ಅತ್ಯಂತ ಸಾಧುವಾದ ಈ ಮೂಕ ಪ್ರಾಣಿ ಅತ್ಯಂತ ಪ್ರಿಯ. ಅದರಿಂದ ಬರುವ ಹಾಲು, ಹಾಲಿನಿಂದ ಮಾಡುವ ಮೊಸರು, ಬೆಣ್ಣೆ, ತುಪ್ಪ ಎಲ್ಲವೂ ಆರೋಗ್ಯಕ್ಕೆ ಹಿತಕರ, ಭಗವಂತನಿಗೆ ಪ್ರಿಯಕರ. ಇದರಿಂದ ಭಗವಂತ ನೀವು ಪರೋಪಕಾರಿಗಳಾಗಿ, ನಿಮ್ಮಿಂದ ಅನೇಕ ಜನರಿಗೆ ಸಹಾಯ ವಾಗಲಿ. ಆಗ ನೀವು ನನಗೆ ಪ್ರಿಯವಾ ಗುತ್ತೀರಿ ಎಂಬ ಬೋಧನೆ ನೀಡುತ್ತಿದ್ದಾನೆ.

ಶ್ರೀ ಕೃಷ್ಣ ಬೆಣ್ಣೆ ಕದಿಯುತ್ತಿದ್ದ. ಆದರೆ, ಎಂದೂ ತಾನೊಬ್ಬನೇ ಅದನ್ನು ತಿನ್ನುತ್ತಿರಲಿಲ್ಲ. ತಾನು ತಂದ ಬೆಣ್ಣೆಯನ್ನು ಎಲ್ಲರಿಗೂ ಹಂಚುತ್ತಿದ್ದ. ಅಷ್ಟೇ ಅಲ್ಲ ಪ್ರಾಣಿಗಳಿಗೂ ತಿನ್ನಿಸುತ್ತಿದ್ದ. ಇಲ್ಲಿ ಬೆಣ್ಣೆ ಸಂಪತ್ತಿನ ಸಂಕೇತ. ಅದನ್ನು ಕೂಡಿಡಬೇಡಿ ಹಂಚಿ, ಹಂಚಿದಷ್ಟು ನಿಮ್ಮ ಆನಂದ ಹೆಚ್ಚುತ್ತದೆ ಎಂದು ಅವನು ಸಾರಿದ್ದಾನೆ.

ಜೋಡಿ ಮರಗಳ ಮಧ್ಯೆ ಭಾರವಾದ ಒರಳು ಎಳೆದುಕೊಂಡು ನಡೆದ ಕೃಷ್ಣ ಮರಗಳನ್ನು ಬೀಳಿಸಿದ. ಮರಗಳಲ್ಲಿದ್ದ ಕುಬೇರನ ಮಕ್ಕಳ ಶಾಪ ವಿಮೋಚನೆ ಮಾಡಿದ ಎಂಬ ಕಥೆ ಬರುತ್ತದೆ. ಈ ಮರಗಳು ನಮ್ಮಲ್ಲಿರುವ ಮಮಕಾರ, ಅಹಂಕಾರಗಳ ಸಂಕೇತ. ಇದನ್ನು ಬಿಡಿ. ಆಗ ನೀವು ಮುಕ್ತರಾಗುತ್ತೀರಾ ಎಂದು ಕೃಷ್ಣ ಹೇಳುತ್ತಿದ್ದಾನೆ.

ಹೆಣ್ಣನ್ನು ಪೂಜ್ಯ ಭಾವನೆಯಿಂದ ನೋಡದೆ, ಅವಳನ್ನು ಅವಮಾನಿಸಲು ಪ್ರಯತ್ನಿಸಿದಾಗ, ವಸ್ತ್ರಗಳನ್ನು ಕೊಟ್ಟು ಅವಳ ಮಾನವನ್ನು ಕಾಪಾಡುತ್ತಾನೆ. ಸಾವಿರಾರು ರಾಜಕುಮಾರಿಯರನ್ನು ಬಂಧನದಲ್ಲಿಟ್ಟಿದ್ದ ನರಕಾಸುರನನ್ನು ಸಂಹಾರ ಮಾಡುತ್ತಾನೆ. ದ್ರೌಪದಿಯನ್ನು ಅವಮಾನಿಸಿದ ದುರ್ಯೋಧನಾದಿಗಳನ್ನು ನಾಶ ಮಾಡುತ್ತಾನೆ. ಹೆಣ್ಣನ್ನು ಶೋಷಣೆ ಮಾಡುವವರನ್ನು ಸರ್ವನಾಶ ಮಾಡುತ್ತೇನೆ ಎಂದು ತಿಳಿಸುತ್ತಾನೆ

ಪರಮಾತ್ಮನಾದರೂ ಶ್ರೀಕೃಷ್ಣನನ್ನೂ ಅಪವಾದ ಬಿಡಲಿಲ್ಲ. ಶಮಂತಕ ಮಣಿಯನ್ನು ಅವನು ಕದ್ದ ಎಂಬ ಅಪವಾದ ಬಂದಿತು. ಆಗ ಬೇಸರ ಮಾಡಿಕೊಳ್ಳದೆ ನಿಜವಾಗಿ ಏನಾಗಿದೆ ಎಂದು ಹುಡುಕಿಕೊಂಡು ಹೋಗಿ, ಜಾಂಬುವಂತನ ಜೊತೆ ಯುದ್ಧ ಮಾಡಿ ಮಣಿಯನ್ನು ತೆಗೆದುಕೊಂಡು ಬಂದ. ನಮಗೂ ಅಪವಾದಗಳು ಬಂದಾಗ ಧೈರ್ಯಗೆಡದೆ ಅಪವಾದಕ್ಕೆ ಕಾರಣವನ್ನು ಹುಡುಕಿ ಪರಿಹರಿಸಿಕೊಳ್ಳಬೇಕು ಎಂಬ ಸಂದೇಶವನ್ನು ಶ್ರೀ ಕೃಷ್ಣ ನೀಡುತ್ತಿದ್ದಾನೆ.

ತಾನೇ ಸ್ವತಃ ಭಗವಂತನಾಗಿದ್ದರೂ ತನ್ನ ಮಾಯಾಶಕ್ತಿಯಿಂದ ಅತ್ಯಂತ ಸುಖ ಕರವಾದ ಜೀವನವನ್ನು ನಡೆಸಬಹು ದಾಗಿತ್ತಾದರೂ, ಮಾನವನು ಅನುಭವಿಸುವ ಎಲ್ಲಾ ಕಷ್ಟಗಳನ್ನು ಅನುಭವಿಸಿ, ಕಷ್ಟ ಬಂದಾಗ ಅದನ್ನು ಹೇಗೆ ಮೆಟ್ಟಿ ನಿಲ್ಲಬೇಕು ಎಂಬುದಕ್ಕೆ ಮಾರ್ಗದರ್ಶಕನಾಗಿದ್ದಾನೆ.

ಇದಲ್ಲದೇ ಅರ್ಜುನನಿಗೆ ಭಗವದ್ಗೀತೆಯಲ್ಲಿ ಅಧ್ಯಾತ್ಮಿಕ ತತ್ವಗಳನ್ನೆಲ್ಲ ಬೋಧಿಸಿದ್ದಾನೆ. ಈ ದೇಹ ಅಶಾಶ್ವತ. ಆದರೆ, ಒಳಗಿರುವಂತಹ ಆತ್ಮ ಶಾಶ್ವತ. ನಾವು ಆತ್ಮೋದ್ಧಾರಕ್ಕಾಗಿ ನಮ್ಮ ಜೀವನದಲ್ಲಿ ಸಾಧನೆಯನ್ನು ಮಾಡಿಕೊಳ್ಳಬೇಕು. ನಿಷ್ಕಾಮ ಕರ್ಮ ಧ್ಯಾನ, ದಾನ, ಭಕ್ತಿ, ಜ್ಞಾನ ಈ ಎಲ್ಲಾ ಮಾರ್ಗಗಳಿಂದ ಭಗವಂತನಿಗೆ ಹತ್ತಿರವಾಗಲು ಪ್ರಯತ್ನ ಮಾಡಬೇಕು. ಹೇಗೆ ನಾವು ಬಟ್ಟೆ ಬದಲಿಸುತ್ತೇವೋ. ಹಾಗೆ ಆತ್ಮವು ದೇಹವನ್ನು ಬದಲಿಸುತ್ತದೆ.

ಹುಟ್ಟಿದವನಿಗೆ ಸಾವು ನಿಶ್ಚಿತ. ಸಾವಿನ ಬಗ್ಗೆ ಚಿಂತಿಸಬಾರದು. ನಿನಗೆ ಕೊಟ್ಟಿರುವ ಕರ್ತವ್ಯವನ್ನು ನೀನು ಶ್ರದ್ಧೆಯಿಂದ ಮಾಡು ಎಂದು ಬೋಧಿಸುತ್ತಾನೆ. ಸಂಸಾರದ ಕಷ್ಟಗಳಲ್ಲಿ ನೊಂದು ಬೆಂದು ಹೆದರಿದ ಜೀವಿಗಳಿಗೆ ಭಗವದ್ಗೀತೆ ಒಂದು ಸಂಜೀವಿನಿ.

ಶ್ರೀಕೃಷ್ಣ ಪರಮಾತ್ಮನೇ ಭಗವದ್ಗೀತೆ ಯಲ್ಲಿ ತಾನು ಏನನ್ನೂ ಮಾಡಬೇಕಾಗಿರ ದಿದ್ದರೂ ಜನರು ತನ್ನನ್ನು ನೋಡಿ ತನ್ನಂತೆ ಬಾಳುತ್ತಾರೆ ಎಂಬ ಉದ್ದೇಶದಿಂದ ಎಲ್ಲಾ ಕಾರ್ಯಗಳನ್ನು ಶಾಸ್ತ್ರಕ್ಕೆ ಸರಿಯಾಗಿ ಮಾಡುತ್ತೇನೆ ಎಂದು ಹೇಳುತ್ತಾನೆ.

ಹೀಗೆ ಶ್ರೀಕೃಷ್ಣನು ಪ್ರತಿ ಕ್ಷಣವೂ ಲೋಕ ಶಿಕ್ಷಣ ನೀಡಿದ್ದಾನೆ.ಅದನ್ನು ಅರಿತು, ಅವನು ಹೇಳಿರುವ ತತ್ವ ನೆನಪಿಟ್ಟು ಅವನಂತೆ ಬಾಳುವ .

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

## ಗೋಕುಲಾಷ್ಟಮಿ ...

*ದೇವಕಿಯ ಗರ್ಭದಲಿ ಅವತರಿಸಿದ*
*ದೇವಾದಿದೇವಾ ಶ್ರೀ ಮುಕುಂದ*
*ಕಾವ ಜಗದೋದ್ಧಾರ ಭುವಿಗೆ ಬಂದ*
*ಮಾವ ಕಂಸನ ಕೊಂದು ಹೆತ್ತವರ ಸೆರೆ ಬಿಡಿಸಿದ*

*ಸೆರೆ ಮನೆಯೇ ಬೆಳದಿಂಗಳಾಯ್ತು*
*ಸೆರೆ ಬಾಗಿಲು ತೆರೆಯಿತು*
*ಮೇರೇ ಮೀರಿದ ಸಂತಸ ತುಂಬಿತು*
*ಭೋರೆಂದು ವರುಣ ಧರೆಗಿಳಿಯಿತು*

*ವಸುದೇವನ ಪಯಣ ಸಾಗಿತ್ತು*
*ವಾಸುಕಿ ಕಂದಗೆ ರಕ್ಷೆಯಾಗಿತ್ತು*
*ಅಸುರರೆಲ್ಲ ಪ್ರಜ್ಞಾ ಹೀನರಾದರು*
*ಸುರರೆಲ್ಲ ಹೂಮಳೆ ಗರೆದರು*

*ನಂದ ಗೋಪನ ಮಂದಿರಕೆ ಬಂದ ಕೃಷ್ಣಾ*
*ಯಶೋಧೆಯ ಮಡಿಲ ತುಂಬಿದ*
*ಲೀಲೆಯ ತೋರಿ ನಲಿ ದಾಡಿದ*
*ಲೀಲಾ ವತಾರಿ ಮುದ್ದು ಬಾಲಕೃಷ್ಣ*

*ಬೆಣ್ಣೆ ಮೊಸರನು ಸವಿದ ಪೋರ*
*ಹೆಣ್ಣುಗಳ ಛೇಡಿಸಿದ ಮುರಳೀಧರ*
*ಬಣ್ಣದ ಕೊಳಲೂದಿ ಮೋಡಿ ಮಾಡಿದ*
*ಮಣ್ಣು ತಿಂದು ಬಾಯಲಿ ಜಗವ ತೋರಿದ*

*ಬೆರಳಲಿ ಪರ್ವತವ ಎತ್ತಿದ ಗೋಪಾಲ*
*ಒರಳಾನೇ ಎಳೆದು ಅನುಗ್ರಹಿಸಿದ ಬಾಲ*
*ಕೊರಳಲಿ ಧರಿಸಿದ ವೈ ಜಯಂತಿ ಮಾಲಾ*
*ಮುರಳಿಯ ಜನ್ಮಾಷ್ಟಮಿ ಇಂದು ನೋಡಲಾ*

*ಚಕ್ಕುಲಿ ಉಂಡೆ ಅವಲಕ್ಕಿ ಸಿಹಿ ಸಿಹಿ*
*ಸಕ್ಕರೆ ತುಪ್ಪದ ತಿಂಡಿ ಸವಿ ಸವಿ*
*ಅಕ್ಕರೆಯಲಿ ನೈವೇದ್ಯ ಮಾಡಿ*
*ನಕ್ಕು ನಲಿಯೋಣ ಕೃಷ್ಣನ ಪೂಜೆಯ ಮಾಡಿ*

**- ಕೋಮಲ ವಿ. ಕುಮಾರ್**

## ಶಿಕ್ಷಣಕ್ಕೆ ಮೂಲಭೂತ ಸೌಲಭ್ಯ

**(1ನೇ ಪುಟದಿಂದ)** ಪ್ರಾಥಮಿಕ ಶಾಲೆಯು ಸರ್ಕಾರದ ಅನುದಾನ ಅವಲಂಬಿಸದೇ ಗ್ರಾಮಸ್ಥರ ದೇಣಿಗೆಯಿಂದ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಇದೇ ರೀತಿ ಉಳಿದ ಶಾಲೆಗಳೂ ಖಾಸಗಿ ಶಾಲೆಗಳ ಹಿಂದಿಕ್ಕುವ ರೀತಿ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಮಾತನಾಡಿ, ಮಕ್ಕಳಲ್ಲಿ ಭಾವನೆ ಹಾಗೂ ಸಂವೇದನೆ ತುಂಬಿ ಉತ್ತಮ ವ್ಯಕ್ತಿ ಮಾಡುವಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯ. ಪ್ರಾಥಮಿಕದಿಂದ ಪದವಿ ಹಂತದವರೆಗೂ ಶಿಕ್ಷಕರು ವಿದ್ಯಾರ್ಥಿಗಳನ್ನು ರೂಪಿಸುತ್ತಾರೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಡಿಡಿಪಿಐ ಜಿ. ಕೊಟ್ರೇಶ್, ಶಿಕ್ಷಕರು ಪ್ರೀತಿ - ವಿಶ್ವಾಸದಿಂದ ಮಕ್ಕಳ ಬಗ್ಗೆ ಗಮನ ವಹಿಸಿ ಉತ್ತಮ ಭವಿಷ್ಯ ರೂಪಿಸಬೇಕು. ಶಿಕ್ಷಣ ಹಾಗೂ ಸಂಸ್ಕಾರವನ್ನು ಕಲಿಸಿ ಮಕ್ಕಳನ್ನು ದೇಶದ ಘನತೆ ಹೆಚ್ಚಿಸುವ ದಾರಿಗೆ ತರಬೇಕು ಎಂದು ಕರೆ ನೀಡಿದರು.

ಶೈಕ್ಷಣಿಕ ಸಲಹೆಗಾರ ಜಗನ್ನಾಥ್ ನಾಡಿಗೇರ ಅವರು ಉಪನ್ಯಾಸ ನೀಡಿದರು.

ವೇದಿಕೆಯ ಮೇಲೆ ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ ಬಿ. ಇಟ್ನಾಳ್, ಪಾಲಿಕೆ ಸದಸ್ಯರಾದ ಚಮನ್ ಸಾಬ್, ಸವಿತಾ ಹುಲ್ಮನಿ ಗಣೇಶ್, ಗೀತಾ ದಿಳ್ಯಪ್ಪ, ಡಿ.ಡಿ.ಪಿ.ಐ. (ಅಭಿವೃದ್ಧಿ) ಎಸ್. ಗೀತಾ, ದಾವಣಗೆರೆ ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಎ. ಪಸೀಹ್ ಉದ್ದೀನ್ ಶಾಕೀರ್, ದಾವಣಗೆರೆ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಲತಾ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ವೀರೇಶ್ ಎಸ್. ಒಡೇನಪುರ, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರ ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.



## ಚಿಟ್ಟಕ್ಕಿ ಶಾಲೆಯಲ್ಲಿ ಗಮನ ಸೆಳೆದ 'ಪರಿಸರ ದಿನ'

ಮಲೇಬೆನ್ನೂರು, ಸೆ.5- ಕುಂಬಳೂರು ಗ್ರಾಮದ ಹೊರ ವಲಯದಲ್ಲಿರುವ ಚಿಟ್ಟಕ್ಕಿ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಹಸಿರು ದಿನವನ್ನು ಬಹಳ ವಿಶೇಷವಾಗಿ ಮತ್ತು ಆಕರ್ಷಣೀಯವಾಗಿ ಆಚರಿಸಲಾಯಿತು.

ಮಕ್ಕಳಿಗೆ ತಿಳಿಸುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿ, ಈ ದಿನ ಮಕ್ಕಳ ಬಟ್ಟೆ - ಊಟ ಎಲ್ಲವೂ ಹಸಿರಿನಿಂದ ಕಂಗೊಳಿಸುವಂತೆ ಮಾಡಲಾಗಿತ್ತು.

ಎಸ್‌ಡಿಎಲ್ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಮಹಾಂತೇಶ್ ಸ್ವಾಮಿ, ಆಡಳಿತಾಧಿಕಾರಿ ಎಸ್.ಕೆ. ಕುಮಾರ್, ಪ್ರಾಂಶುಪಾಲರಾದ ಚೇತನ್‌ಕುಮಾರ್ ಹಾಗೂ ಶಿಕ್ಷಕಿಯರು ಮತ್ತು ಸಿಬ್ಬಂದಿ ವರ್ಗದವರು ಮಕ್ಕಳೊಂದಿಗೆ ಬೆರೆತು ಹಸಿರು ದಿನವನ್ನು ಆಚರಿಸಿ, ಗಮನ ಸೆಳೆದರು.

## ಎಸ್ಸೆಸ್ಸೆಲ್ಸಿ, ಪಿಯುಸಿ ವಿದ್ಯಾರ್ಥಿಗಳಿಗೆ 3 ಬಾರಿ ಪರೀಕ್ಷೆ ಅವಕಾಶ

**(1ನೇ ಪುಟದಿಂದ)** ಶಿಕ್ಷಣ ಏಕೆ ಪಡೆಯಬೇಕು? ಎಂದರು.

ಸಂವಿಧಾನ ಎಲ್ಲರಿಗೂ ಶಿಕ್ಷಣದ ಅವಕಾಶವನ್ನು ಒದಗಿಸಿತು. ಸ್ವಾತಂತ್ರ್ಯ ಬಂದು 76 ವರ್ಷವಾದರೂ ಶೇ. 100 ಸಾಕ್ಷರತೆ ಸಾಧ್ಯವಾಗಿಲ್ಲ. ಶಿಕ್ಷಣದಿಂದ ವಂಚಿತರಾದವರು ಅಸಮಾನತೆಗೆ ಬಲಿಯಾಗುತ್ತಾರೆ. ಸ್ವಾತಂತ್ರ್ಯ ಹೋರಾಟಗಾರರ ಕನಸು ನನಸಾಗಬೇಕಾದರೆ ಎಲ್ಲರಿಗೂ ವೈಜ್ಞಾನಿಕ, ವೈಚಾರಿಕ ಶಿಕ್ಷಣ ದೊರೆತು ದೇಶ ಪ್ರಗತಿ ಪಥದಲ್ಲಿ ಮುನ್ನಡೆಯಬೇಕು ಎಂದರು.

## ಬಿಐಇಟಿ ಕಾಲೇಜಿಗೆ ಟರ್ಕಿ ದೇಶದ ತಂತ್ರಜ್ಞರ ಭೇಟಿ

ದಾವಣಗೆರೆ, ಸೆ.5- ಇತ್ತೀಚಿಗೆ ಬಿಐಇಟಿ ಕಾಲೇಜಿಗೆ ಸೈ ಟೆಕ್ನೋ ಕಂಪನಿ ಮುಖ್ಯಸ್ಥ ಇರ್ಫಾನ್ ಸೈದರ್ ಮತ್ತು ಸಹೋದ್ಯೋಗಿಗಳಾದ ಸವಿಲ್ ಆಕಾರ್ ಮತ್ತು ಯೂನಸ್ ಕಫೀಲ್ ನೇತೃತ್ವದ ತಂಡವು ಭೇಟಿ ನೀಡಿ ಸಿಎನ್‌ಸಿ ಯಂತ್ರವು ತಯಾರಿಸಿದ ನೋಡ್‌ಗಳನ್ನು ಪರೀಕ್ಷಿಸಿದರು.

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಡಿ.ಎಂ.ಜಿ. ಮೋರಿ ಕಂಪನಿಯಿಂದ 5 ಕೋಟಿ ರೂಪಾಯಿ ವೆಚ್ಚದಲ್ಲಿ ಸುಧಾರಿತ 5 ಆಕ್ಸಿಸ್ ಸಿಎನ್‌ಸಿ ಯಂತ್ರವನ್ನು ಖರೀದಿಸಿದ ಯಂತ್ರವನ್ನು ಅವರ ಕೌಶಲ್ಯ, ಅಭಿವೃದ್ಧಿ ಕೇಂದ್ರದಲ್ಲಿ 'ನೋಡ್' ಗಳನ್ನು ತಯಾರಿಸಿ ಆಕಾಶ ಚಾವಣಿ ರಚನೆಗಳನ್ನು ಮಾಡಲು ಬಳಸಲಾಗುತ್ತದೆ. ನೋಡ್ ಎಂದರೆ ಸ್ಟ್ರಕ್ಚರಲ್ ತೊಲೆ ಅಥವಾ ಕಂಬಗಳು ಬಂದು ಸೇರುವ ಕಬ್ಬಿಣದ ಭಾಗ, ಈ ನೋಡ್‌ಗಳನ್ನು ತುರ್ಕಿ ದೇಶದ ಸೈ ಟೆಕ್ನೋ ಕಂಪನಿಯವರು ವಿನ್ಯಾಸಗೊಳಿಸಿದ್ದಾರೆ.

ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಡಾ. ಹೆಚ್. ಬಿ. ಅರವಿಂದ, ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಮಾನವೇಂದ್ರ ಮತ್ತು ಕೌಶಲ್ಯಾಭಿವೃದ್ಧಿ ಕೇಂದ್ರದ ಸಂಯೋಜಕ ಡಾ. ಎಸ್. ಶರಣ್ ಉಪಸ್ಥಿತರಿದ್ದರು.

## ಸಾಲಕಟ್ಟೆ ಸರ್ಕಾರಿ ಶಾಲೆ ವಿಭಾಗ ಮಟ್ಟಕ್ಕೆ ಆಯ್ಕೆ



ಮಲೇಬೆನ್ನೂರು, ಸೆ.5- ಸಾಲಕಟ್ಟೆ ಪ್ರಾಥಮಿಕ ಶಾಲೆ ಬಾಲಕಿಯರ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯದಲ್ಲಿ ಪ್ರಥಮ ಸ್ಥಾನ ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಶಾಲೆಗೆ ಕೀರ್ತಿ ತಂದ ಬಾಲಕಿಯರನ್ನು ಎಸ್.ಡಿ.ಎಂ.ಸಿ ಪದಾಧಿಕಾರಿಗಳು ಹಾಗೂ ಶಿಕ್ಷಕರು ಅಭಿನಂದಿಸಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**APARTMENT FOR SALE**
(ONLY VEG)
2 BHK furnished
ಹೊಸ ಮನೆ ಸೇಲ್‌ಗೆ
M C C "B" BLOCK
ಡೆಂಟಲ್ ಮೆಡಿಕಲ್ ಹತ್ತಿರ ಇದೆ.
ಕಿರಣ್ ಭೂಸನೂರ್
98440 63409

**ಮನೆಯಲ್ಲಿ ನೀರಿನ ಲೀಕೇಜ್**
ಯಾವುದೇ ರೀತಿಯ ಮನೆಯ ಒಳಗಡೆ ಮತ್ತು ಹೊರಗಡೆಯಿಂದ ಮನೆಯ ಒಳಗಡೆ ನೀರು ಸೋರುತ್ತಿದ್ದರೆ (ಲೀಕೇಜ್) ಶಾಶ್ವತವಾಗಿ ನಿಲ್ಲಿಸಲಾಗುವುದು ಮತ್ತು 100% ಕೆಲಸದ ಗ್ಯಾರಂಟಿ ಇರುತ್ತದೆ.
96065 57066, 95913 10082

**ಕಾರುಗಳು ಮಾರಾಟಕ್ಕಿವೆ**
Hyundai I20 Asta 2018
MAHINDRA TUV 300 2016
VW VENTO 2014
ದೈವಿಕ್ ಐನಳ್ಳಿ
9945643223

**ಹೋಟೆಲ್ ಬಾಡಿಗೆಗೆ ಅಥವಾ ಲೀಸ್‌ಗೆ ಕೊಡುವುದಿದೆ**
ಎವಿಕೆ ಕಾಲೇಜ್ ರೋಡ್, ಸಿಟಿ ಸೆಂಟ್ರಲ್ ಹಾಸ್ಪಿಟಲ್‌ನ ಪಕ್ಕ, ದಾವಣಗೆರೆ.
9538553399, 9902516407

**ಸೈಟುಗಳು ಮಾರಾಟಕ್ಕಿವೆ**
ಕೆ.ಎಚ್.ಬಿ ಲೇಔಟ್ ದಾವಣಗೆರೆ 30x40 ಉತ್ತರ, 30x50 ಪೂರ್ವ-ದಕ್ಷಿಣ ಕಾರ್ನರ್, 30x40 ಉತ್ತರ-ಪಶ್ಚಿಮ ಕಾರ್ನರ್.
ಸಂಪರ್ಕಿಸಿ : ವರುಣ್ ಚಕ್ರವರ್ತಿ
9019073374

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ ದಂಪತಿ ಬೇಕಾಗಿದ್ದಾರೆ. ಸಂಬಳ 20,000 ರೂಂ ಉಚಿತ. ಸಂಪರ್ಕಿಸಿ :
97400 98047

**EC / ಇಸಿ,**
E-swathu,
Khatha Change
Building Licence
& Property Documents,
Loans-All banks
96118-66449

**ಮನೆ ಬಾಡಿಗೆಗೆ ಇದೆ**
2ನೇ ಮಹಡಿ, 1ಬೆಡ್ ರೂಂ ಮನೆ ಬೋರ್ ನೀರು ಇದೆ.
696/19 ಶ್ರೀನವಾಸ ನಗರ, 10ನೇ ಕ್ರಾಸ್, ಹದಡಿ ರಸ್ತೆ.
98800 68009

**ಬೇಕಾಗಿದ್ದಾರೆ**
PUC /DEGREE
ಆದ ಮಹಿಳೆಯರು ರ್‍ಯಾಂಕ್ ನಿಂದ ಸ್ಟಾಕ್ ತೆಗೆಯಲು ಮಹಿಳೆಯರು ಹಾಗೂ ಡೆಲಿವರಿ ಬಾಯ್ಸ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಮಾಡುವ ಸಮಯ ಸಂಜೆ:6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಬೇಕಾಗಿದ್ದಾರೆ**
1) ಡಿಲೆವರಿ ಬಾಯ್ಸ್
2) B.Com Account with Computer (Married Ladies Preference) Experience 2 years.
ಎ.ಕೆ.ಟ್ರೇಡರ್ಸ್
ಆಶೀರ್ವಾದ್, ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ- 577004.

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಮತ್ತು ಆಯಾ ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
ಮೊ : 98450-35710

**ಮನೆ ಬಾಡಿಗೆಗೆ ಇದೆ**
3BHK ಪೂರ್ವ ಬಾಗಿಲು, 4ನೇ ಕ್ರಾಸ್, LIC ಕಾಲೋನಿ, ನೂತನ್ ಕಾಲೇಜ್ ಹಿಂಭಾಗ, ಶ್ರೀ ಗಿರಿನಿವಾಸ. ಸಂಪರ್ಕಿಸಿ :
99863 71175, 99869 98400

**HOUSE FOR SALE**
22x60 Size 3 BHK independent house 3rd Cross MCC "A" Block, Davangere. For details
80883 44383

**SITE FOR SALE**
L. Rajashekara owner site No. 16, Jayanagar Badavane, near Siridi Saibaba Temple, Dvg.
Rs. 6500/- per sq feet
Not Negotiable
94489 66264

**ಬೇಕಾಗಿದ್ದಾರೆ**
ನಿವೃತ್ತಿ ಹೊಂದಿರುವ ಪೊಲೀಸ್ ಅಧಿಕಾರಿ ಗೋಲ್ಡ್ ಕಂಪನಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ:
72596 60786

**ಸೈಟು ಮಾರಾಟಕ್ಕಿವೆ**
ಎಸ್.ಎಸ್. ಲೇಔಟ್ 'ಎ' ಬ್ಲಾಕ್‌ನಲ್ಲಿ ಲೋಟಸ್ ಅಪಾರ್ಟ್‌ಮೆಂಟ್ ಹತ್ತಿರ ಸೈಟು ಮಾರಾಟಕ್ಕಿವೆ. 40x60 ದಕ್ಷಿಣ, 40x60 ದಕ್ಷಿಣ ಅಕ್ಕ-ಪಕ್ಕ.
ಸಂಪರ್ಕಿಸಿ : ವರುಣ್ ಚಕ್ರವರ್ತಿ
9019073374

**ಬೇಕಾಗಿದ್ದಾರೆ**
TATA Power Solar
ಆಫೀಸಿನಲ್ಲಿ ಕೆಲಸ ಮಾಡಲು ಪಿಯುಸಿ ಮೇಲ್ಪಟ್ಟ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಪಿ.ಜಿ. ಬಸವರಾಜಪ್ಪ
99001 42052

**ಬೇಕಾಗಿದ್ದಾರೆ**
ನೂತನವಾಗಿ ಆರಂಭವಾಗುತ್ತಿರುವ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ವೆಯ್ಟರ್ ಅಂಡ್ ಕ್ಲೀನರ್ ಬೇಕಾಗಿದ್ದಾರೆ.
ಕೆಲಸದ ಸಮಯ : ಬೆಳಿಗ್ಗೆ 10.30ರಿಂದ ರಾತ್ರಿ 10.30ರವರೆಗೆ
22 ರಿಂದ 29 ವಯಸ್ಸಿನವರೆಗಿನವರು ಸಂಪರ್ಕಿಸಿ :
99863 16672

**ಬೇಕಾಗಿದ್ದಾರೆ**
ಆನಗೋಡು ಸಮೀಪ NH4ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಆನಗೋಡು ಸುತ್ತಮುತ್ತ ಇರುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ ಮತ್ತು 20 K ಟ್ಯಾಂಕರ್ ಲಾರಿಯಲ್ಲಿ ಕಂಡಕ್ಟರ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
9008228222, 6360611836

**ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್‌ನಲ್ಲಿ ಕೆಲಸ ಮಾಡಲು ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ದ್ವಿಚಕ್ರ ವಾಹನವಿರಬೇಕು.
ಭೇಟಿಯ ಸಮಯ : ಬೆ. 10 ರಿಂದ ಸಂಜೆ 6 ರವರೆಗೆ
70196 73906

**WANTED**
Lewa Makeup Studio & Academy Davanagere.
1) Lady Receptionist
Interview Date : 09.09.2023
Contact :
81971 79414, 78924 68118

**2 BHK HOUSE FOR RENT/LEASE**
Near Podar International in J.H. Patel Badavane, Davangere.
95359 99218, 88617 11072

**ಬೇಕಾಗಿದ್ದಾರೆ**
ದಾವಣಗೆರೆ ತಾಲ್ಲೂಕಿನಲ್ಲಿ ಬರುವ ಅನುದಾನಿತ ಪ್ರೌಢ ಶಾಲೆಗೆ, ತಾತ್ಕಾಲಿಕವಾಗಿ ಹಿಂದಿ ಭಾಷಾ ವಿಷಯ ಬೋಧಿಸಲು ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ.
8722373444, 9901658878
ಮುಖ್ಯೋಪಾಧ್ಯಾಯರು

**CHANGE OF NAME**
I BISMA BANU D/O BASHIER AHAMED, Aged about 35 Years, residing at #247, 1st Floor, A Block, Devaraj Urs Layout, Davanagere - 577006, Karanataka, India., do hereby solemnly swear and affidavit on oath as hereunder. BISMA BANU (New Name), Previously ZOYA BANU (Old Name) I Have changed my name as BISMA BANU Vide affidavit date 04.09.2023.
Date : 04.09.2023 BISMA BANU
Place : Davanagere.

**CHANGE OF NAME**
Shirin Banu w/o Ejaz Khan resident @ 1st main, 1st cross, Mahaboob Nagar, Davangere. In my passport No. M4687759 my name is wrongly mentioned as SHIREN BANU instead of SHIRIN BANU. I have changed my name before the Public Notary, Davangere. On. 5.9.2023, In future I do all my transactions by name As SHIRIN BANU.
Sd/-SHIRIN BANU

**ಸೈಟ್ ಮಾರಾಟಕ್ಕಿದೆ**
ಶಿವ-ಪಾರ್ವತಿ ಬಡಾವಣೆ ಶಾಮನೂರು 30x40 ಪೂರ್ವ ದಿಕ್ಕಿನ ಸೈಟ್ ಮಾರಾಟಕ್ಕಿದೆ.
81236 83761

**ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಗೆ ಕೆಲಸಕ್ಕೆ ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
77602 68105

**ಸನ್ನಿಧಿ ಟ್ರೇಡಿಂಗ್ ಕೋ**
ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ.
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್, ಟೆಲಿಕಾಲರ್ಸ್, ಡ್ರೈವರ್ಸ್, ಡೆಲಿವರಿ ಬಾಯ್ಸ್
89045 80039, 89045 80034, 89045 80037

**ಸೈಟುಗಳು ಮಾರಾಟಕ್ಕಿವೆ**
1) ಬನಶಂಕರಿ ಬಡಾವಣೆ 30x50 ಪೂರ್ವ, 30x40 ಪಶ್ಚಿಮ,
2) ಡಾಲರ್ಸ್ ಕಾಲೋನಿ 30x50, 40x60, 30x40 (ಉತ್ತರ),
3) ಸಿದ್ದವೀರಪ್ಪ ಬಡಾವಣೆ, 30x45 ಉತ್ತರ 30x45, ದಕ್ಷಿಣ,
4) ಆಂಜನೇಯ ಬಡಾವಣೆ 30x50 ಉತ್ತರ 50x60 ಪೂರ್ವ ದಕ್ಷಿಣ ಕಾರ್ನರ್.
Agent : 95385 65909

**ಆತಿಥ್ಯ ರೆಸ್ಟೋರೆಂಟ್**
ಬಾಳೆ ಎಲೆಯ, ಬೆಳಗ್ಗೆ ತಿಂಡಿ, ಹೋಳಿಗೆ ಊಟ, ಚಪಾತಿ ಊಟ ದೋಸೆ ಹಿಟ್ಟು ದೊರೆಯುತ್ತದೆ
( Organic food )
08192-200404

**ಕಾಶ್ಮೀರ ಪ್ರವಾಸ**
11th Oct
6 ದಿನಗಳ ಎಲ್ಲಾ ಪ್ರವಾಸದ ವೆಚ್ಚವನ್ನು ಒಳಗೊಂಡಿದೆ.
ಡಿ.ವಿ.ಜಿ. ವರ್ಲ್ಡ್ ಟೂರ್ಸ್
ಪಿ.ಜೆ. ಬಡಾವಣೆ, ಡಿವಿಜಿ.
99006 66122

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**MBA / BE REQUIRED**
Must be in TECH SAAVY, Skilled in Communication Ready to Work in office and from Home also, Interested send resume to
8217211456

**WANTED**
Banking Sector field officer (Male Only)
Qualification :
Any Degree.
90715 55081
Interview Time - 11AM

**WANTED**
Banking Sector Tele Caller (Female Only)
Qualification :
Any Degree.
90715 55081
Interview Time - 11AM

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಮೇಕ್ ಓವರ್ ಕ್ಲಾಸ್**
ಒಂದು ತಿಂಗಳ ತರಬೇತಿ.. ಮೇಕಪ್, ಸ್ಯಾರೀ ಡ್ರೇಪಿಂಗ್ ಮತ್ತು ಹೇರ್ ಸ್ಟೈಲ್.ಮೇಕಪ್ ಕಲಿಕೆಗೆ ಪ್ರಾಡಕ್ಟ್ಸ್ ಗಳನ್ನು ಕೊಡಲಾಗುತ್ತದೆ. ಎರಡು portfolio ಫೋಟೋ ಶೂಟ್‌ಗಳು ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.
ಸಂಪರ್ಕಿಸಿ: Glamorous Studio Girija make up artist
94817 76305

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**CHANGE OF NAME**
EJAZ KHAN S/o RASOOL KHAN Resident @ 1st main, 1st cross, Mahaboob Nagar, Davangere. In my passport No. J9336102 my name is wrongle mentioned as Ajas Khana instead of Ejaz Khan. I have changed my name before the Public Notary, Davangere. on 5.9.2023. In Future . I do all my Transactions by name as Ejaz Khan.
Sd/- EJAZ KHAN

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು
Rheumatologist
(ರುಮಟಾಯ್ಡ್ ಆರ್ಥರೈಟಿಸ್)
ಬೆಂಗಳೂರು ಇವರು
ಇಂದು ದಿ.6.9.2023ರ ಬುಧವಾರ ನಾಳೆ ದಿ.7.9.2023ರ ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಅಡಿಕೆ ಸಸಿಗಳಿಗಾಗಿ**
11000 ಅಡಿಕೆ ಸಸಿಗಳು ದೊರೆಯುತ್ತವೆ.
ಸಂಪರ್ಕಿಸಿ :
99866 17127

**ಓಂ ಸಾಯಿ ಬಲಮುರಿ ಗಣಪತಿ ಜ್ಯೋತಿಷ್ಯಾಲಯ**
ಪಂಡಿತ್ ಬಿ.ಎಸ್.ರಾವ್
ಇವರು ನುಡಿದಂತೆ ನಡೆಯುವರು. ಸಮಸ್ಯೆಗಳಾದ ವ್ಯಾಪಾರದಲ್ಲಿ ಲಾಭ-ನಷ್ಟ, ವಿದ್ಯೆ, ಉದ್ಯೋಗ, ಲೈಂಗಿಕ, ಸ್ತ್ರೀ ಪುರುಷ ವಶೀಕರಣ, ಶತ್ರುನಾಶ, ಮನೆಯಲ್ಲಿ ಅಶಾಂತಿ, ಗಂಡ-ಹೆಂಡತಿ ಕಲಹ. ನಿಮ್ಮ ಯಾವುದೇ ಸಮಸ್ಯೆಗೆ ದೂರವಾಣಿ ಮುಖಾಂತರ 2 ದಿನಗಳಲ್ಲಿ ಪರಿಹಾರ.ಇಂದೇ ಕರೆ ಮಾಡಿ. ನಿಮ್ಮ ನಂಬಿಕೆಗೆ ಇಲ್ಲಿ ಮೋಸವಿಲ್ಲ.
ಮೊ : 99807 70791

**ಶ್ರೀ ಸಾಯಿ ಏಜೆನ್ಸಿಯಲ್ಲಿ**
ಕೆಲಸ ಮಾಡಲು ಡ್ರೈವರ್ & ಚಿಟ್ ಫಂಡ್ ನಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಮತ್ತು ಕಲೆಕ್ಷನ್ ಬಾಯ್ ಕೆಲಸ ಖಾಲಿ ಇದೆ. ಸಂಪರ್ಕಿಸಿ :
97437 21300

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ರತ್ನ ಮಾರ್ಕೆಟಿಂಗ್**
ನಾವು ಎಲ್ಲಾ ತರಹದ ಗ್ಯಾಸ್ ಗೀಸರ್ ಹಾಗೂ ಗ್ಯಾಸ್ ಸ್ಟವ್ ಗಳನ್ನು ನಿಮ್ಮ ಮನೆಗೇ ಬಂದು ರಿಪೇರಿ ಮಾಡಿಕೊಡುತ್ತೇವೆ. ಹಾಗೂ ಹಳೇಯ ಗ್ಯಾಸ್ ಸಿಲಿಂಡರ್, ಗೀಸರ್ ಮತ್ತು ಸ್ಟವ್‌ಗಳನ್ನು ಉತ್ತಮ ದರಕ್ಕೆ ಖರೀದಿಸುತ್ತೇವೆ.
ವಿದ್ಯಾನಗರ, ದಾವಣಗೆರೆ.
99019 40727

## ಹರಿಹರ ಬರ ಪೀಡಿತ ತಾಲ್ಲೂಕು : ಘೋಷಿಸಲು ಆಗ್ರಹ



ಮಲೇಬೆನ್ನೂರು, ಸೆ. 5 - ಹರಿಹರ ತಾಲ್ಲೂಕನ್ನು ಬರ ಪೀಡಿತ ತಾಲ್ಲೂಕು ಎಂದು ಘೋಷಿಸುವಂತೆ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಅವರು ಮಂಗಳವಾರ ಜಿ.ಟಿ. ಕಟ್ಟೆ ಹಾಗೂ ಸುತ್ತಲಿನ ಹಳ್ಳಿಗಳಿಗೆ ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ರೈತರು ಬಿತ್ತನೆ ಮಾಡಿದ ಮೆಕ್ಕೆಜೋಳ ಮತ್ತಿತರೆ ಬೆಳೆ ಮಳೆ ಇಲ್ಲದೆ ಬತ್ತಿ ಹೋಗಿರುವುದನ್ನು ವೀಕ್ಷಣೆ ಮಾಡಿದರು. ತಾಲ್ಲೂಕಿನಲ್ಲಿ ಮಳೆ ಇಲ್ಲದೆ ಒಣಗಿರುವ ಬೆಳೆಯನ್ನು ಸರ್ವೆ ಮಾಡಿಸುವಂತೆ ಜಿಲ್ಲಾ ಸಚಿವರಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದೇನೆ.

ರೈತರಿಗೆ ಸರ್ಕಾರದಿಂದ ಬೆಳೆ ಹಾನಿ ಪರಿಹಾರ ಕೊಡಿಸಲು ಸರ್ಕಾರದ ಮಟ್ಟದಲ್ಲಿ ಪ್ರಯತ್ನ ಮಾಡುವುದಾಗಿ ನಂದಿಗಾವಿ ಶ್ರೀನಿವಾಸ್ ತಿಳಿಸಿದರು. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ನಾರನಗೌಡ, ತೋಟಗಾರಿಕೆ ಇಲಾಖೆಯ ಸಂತೋಷ, ಕೃಷಿ ಅಧಿಕಾರಿ ಇನಾಯತ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ ಬಿ ಅಬೀದ್ ಅಲಿ ಹಾಗೂ ಜಿ.ಟಿ. ಕಟ್ಟೆಯ ಎಸ್.ಜಿ. ಮಲ್ಲೇಶ್ ಸೇರಿದಂತೆ ಅನೇಕ ರೈತರು ಈ ವೇಳೆ ಹಾಜರಿದ್ದರು.

## ಇಂದು ರೈತರಿಗೆ ಆನ್‌ಲೈನ್ ತರಬೇತಿ

ರಾಜ್ಯ ಕೃಷಿ ಇಲಾಖೆ, ಜಿಲ್ಲಾ ಕೃಷಿ ತರಬೇತಿ ಕೇಂದ್ರ (ಕಾಡಜ್ಜಿ) ಇವರ ವತಿಯಿಂದ ಇಂದು ಮಧ್ಯಾಹ್ನ 12.30 ರಿಂದ 1.30 ರವರೆಗೆ ರೈತರಿಗೆ ಆನ್‌ಲೈನ್ ತರಬೇತಿ (ಗೂಗಲ್ ಮೀಟ್) ನಡೆಯಲಿದೆ.

ಈ ತರಬೇತಿಯಲ್ಲಿ 'ಸದ್ಯದ ಹವಾಮಾನಕ್ಕೆ ಅನುಗುಣವಾಗಿ ಬೆಳೆಗಳ ನಿರ್ವಹಣಾ ಕ್ರಮಗಳು' ವಿಷಯದ ಬಗ್ಗೆ ರಾಯಚೂರು ಕೃಷಿ ವಿವಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ. ಎಂ.ಎ. ಬಸವಣ್ಣೆಪ್ಪ, ನಿವೃತ್ತ ಜಂಟಿ ಕೃಷಿ ನಿರ್ದೇಶಕ ಡಾ. ಆರ್.ಜಿ. ಗೊಲ್ಲರ್, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ವಿಷಯ ಮಂಡಿಸಲಿದ್ದಾರೆ.

ರೈತರು ಗೂಗಲ್ ಮೀಟ್ ಲಿಂಕ್ (meeting: http//meet.google.com/gca-padb-hmg, ಸಂಪರ್ಕ ಸಂಖ್ಯೆ: 8277931242) ಬಳಸಿ ಆನ್‌ಲೈನ್ ತರಬೇತಿಯಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಳ್ಳುವಂತೆ ಕೋರಲಾಗಿದೆ.

## ರಾಣೇಬೆನ್ನೂರಿಗೆ ಇಂದು ಲೋಕಾಯುಕ್ತ ಉಪ ಅಧೀಕ್ಷಕ

ಲೋಕಾಯುಕ್ತ ಉಪ ಅಧೀಕ್ಷಕರು ಇಂದು ಬೆಳಿಗ್ಗೆ 11 ಗಂಟೆಗೆ ಆಗಮಿಸಿ ಕಛೇರಿಯ ಸಭಾಭವನದಲ್ಲಿ ಸಾರ್ವಜನಿಕರಿಂದ ಕುಂದುಕೊರತೆಗಳ ಬಗ್ಗೆ ಚರ್ಚಿಸಲಿದ್ದಾರೆಂದು ತಹಶೀಲ್ದಾರ್ ಎಚ್.ಎನ್. ಶಿರಹಟ್ಟಿ ತಿಳಿಸಿದ್ದಾರೆ.

## ವಿಕಲಚೇತನ ಫಲಾನುಭವಿಗಳ ಅರ್ಜಿ ಅವಧಿ ವಿಸ್ತರಣೆ

ದಾವಣಗೆರೆ, ಸೆ. 5- ಪ್ರಸಕ್ತ ಸಾಲಿನ ವಿಕಲಚೇತನ ಫಲಾನುಭವಿ ಆಧಾರಿತ ಯೋಜನೆಗಳಾದ ಆಧಾರ ಯೋಜನೆ, ಮೆರಿಟ್ ವಿದ್ಯಾರ್ಥಿ ವೇತನ, ಅಂಧ ಮಹಿಳೆಗೆ ಜನಿಸುವ ಮಗುವಿನ ಆರೈಕೆಗೆ ಶಿಶುಪಾಲನಾ ಭತ್ಯೆ, ನಿರುದ್ಯೋಗ ಭತ್ಯೆ, ಮರಣ ಪರಿಹಾರ ನಿಧಿ, ಸಾಧನೆ ಯೋಜನೆ, ಪ್ರತಿಭಾ ಯೋಜನೆ, ವೈದ್ಯಕೀಯ ಪರಿಹಾರ ನಿಧಿಯ 8 ಯೋಜನೆಗಳ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸುವ ಅವಧಿಯನ್ನು ಸೆಪ್ಟೆಂಬರ್ 30 ರವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ 08192 263936, 08192 263939 ಸಂಪರ್ಕಿಸಲು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ಸ್ಪರ್ಶ ಫೌಂಡೇಷನ್ ವತಿಯಿಂದ ಗುರು ನಮನ

ದಾವಣಗೆರೆ, ಸೆ. 5 - ಸಮಾಜದ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಶಿಕ್ಷಕರ ದಣಿವರಿಯದ ಪ್ರಯತ್ನಗಳಿಗೆ ಧನ್ಯವಾದ ಹೇಳಲು ಗುರು-ನಮನ ಕಾರ್ಯಕ್ರಮವನ್ನು ನಡೆಸುತ್ತಿದ್ದೇವೆ.

ನಿವೃತ್ತ ಶಿಕ್ಷಕರು ನೋವು ಮುಕ್ತವಾಗಿ ಬದುಕಲು ಮತ್ತು ಘನತೆ ಮತ್ತು ಸ್ವಾತಂತ್ರ್ಯದ ಜೀವನವನ್ನು ಸಾಧಿಸಲು ಸಹಾಯ ಮಾಡುವುದು ನಮ್ಮ ಗುರಿಯಾಗಿದೆ ಎಂದು ಸ್ಪರ್ಶ ಆಸ್ಪತ್ರೆಯ ಅಧ್ಯಕ್ಷ ಮತ್ತು ಮುಖ್ಯ ಮೂಳೆ ಶಸ್ತ್ರ ಚಿಕಿತ್ಸಕ ಡಾ. ಶರಣ್ ಪಾಟೀಲ್ ತಿಳಿಸಿದರು.

ಅವರು ನಗರದ ಸ್ಪರ್ಶ ಫೌಂಡೇಷನ್ ವತಿಯಿಂದ ಏರ್ಪಡಿಸಿದ್ದ ಗುರು ನಮನ ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರಿಗೆ ಉಚಿತ ಕೀಲು ಬದಲಿ ಶಸ್ತ್ರ ಚಿಕಿತ್ಸೆ ನಡೆಸಿ ಮಾತನಾಡುತ್ತಿದ್ದರು.

ಸ್ಪರ್ಶ ಫೌಂಡೇಷನ್‌ನ ಸಾಮಾಜಿಕ ಉಪಕ್ರಮವಾದ ಗುರುನಮನದ ಮೂಲಕ ನಿವೃತ್ತ ಶಿಕ್ಷಕರಿಗೆ ಕೀಲು ಬದಲಿ ಶಸ್ತ್ರ ಚಿಕಿತ್ಸೆಯನ್ನು ಉಚಿತವಾಗಿ ನಡೆಸಲಾಗುತ್ತಿದೆ. ಹಲವು ವರ್ಷಗಳಿಂದ ನಗರದ 100ಕ್ಕೂ ಹೆಚ್ಚು ಶಿಕ್ಷಕರು ಈ ಉಪಕ್ರಮದಿಂದ ಪ್ರಯೋಜನ ಪಡೆದಿದ್ದಾರೆ ಎಂದು ಶರಣ್ ಪಾಟೀಲ್ ತಿಳಿಸಿದರು.

ಚಿಕಿತ್ಸೆ ಪಡೆದ ನಿವೃತ್ತ ಶಿಕ್ಷಕರೋರ್ವರು ಮಾತನಾಡಿ, ಸ್ಪರ್ಶ ಫೌಂಡೇಷನ್‌ನ ಔದಾರ್ಯವು ನನ್ನ ದೈಹಿಕ ನೋವನ್ನು ನಿವಾರಿಸುವುದಲ್ಲದೇ, ನನ್ನ ಉತ್ಸಾಹವನ್ನು ನವೀಕರಿಸಿದೆ ಎಂದು ತಿಳಿಸಿದರು.

# ಹಳೆಯ ವಿದ್ಯಾರ್ಥಿಗಳು ತಾವು ಓದಿದ ಕಾಲೇಜು ಅಭಿವೃದ್ಧಿಗೆ ಕೊಡುಗೆ ನೀಡಬೇಕು



ದಾವಣಗೆರೆ, ಸೆ. 5- ಸರ್ಕಾರಿ ಕಾಲೇಜಿನಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳು, ತಾವು ಓದಿದ ಕಾಲೇಜಿನ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡುವುದನ್ನು ಮರೆಯಬಾರದು ಎಂದು ನಿವೃತ್ತ ಜಂಟಿ ನಿರ್ದೇಶಕ ಪ್ರೊ. ಗಂಗಾಧರಯ್ಯ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ಹಳೆಯ ವಿದ್ಯಾರ್ಥಿಗಳ ವೇದಿಕೆಯಿಂದ ಹಮ್ಮಿಕೊಂಡಿದ್ದ 'ಗುರು ವಂದನಾ' ಕಾರ್ಯಕ್ರಮದಲ್ಲಿ ಗೌರವ ಸಮರ್ಪಣೆ ಸ್ವೀಕರಿಸಿ ಮಾತನಾಡಿದರು.

ತಾವು ಓದಿದ ಸರ್ಕಾರಿ ಶಾಲಾ-ಕಾಲೇಜುಗಳನ್ನು ಎಂದಿಗೂ ಮರೆಯಬಾರದು. ಈ ನಿಟ್ಟಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಮಾಡಿದ ಸಾಧನೆ ಶ್ಲಾಘನೀಯ ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಡೆದು ಬಂದ ಹಾದಿ ರೋಚಕವಾದುದು. ಇಡೀ ರಾಜ್ಯದಲ್ಲಿಯೇ ಅತ್ಯಂತ ಹೆಚ್ಚು ವಿದ್ಯಾರ್ಥಿಗಳು ಓದುತ್ತಿರುವ ಸರ್ಕಾರಿ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ತಾವು ಓದಿದ ಕಾಲೇಜಿನ ಸ್ಥಿತಿಗತಿಯ ಬಗ್ಗೆ ಗಮನಹರಿಸುವ ಅಗತ್ಯವಿದೆ. ಆಗ ಕಾಲೇಜನ್ನು ಅಭಿವೃದ್ಧಿಗೊಳಿಸಲು ಸಾಧ್ಯ ಎಂದರು.

ನಿವೃತ್ತ ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಗುರುಗಳ ಸೇವೆಯನ್ನು ನೆನಪಿಸಿಕೊಂಡು ಕೃತಜ್ಞತೆ ಸಲ್ಲಿಸುವ ಕಾರ್ಯ ಪವಿತ್ರವಾದುದು. ಇದು ಕೇವಲ ಗುರುಗಳಿಗೆ ಕೃತಜ್ಞತೆ ಸಲ್ಲಿಸಿದ ಹಾಗೆ ಮಾತ್ರವಲ್ಲ. ಬದಲಿಗೆ ಶಿಕ್ಷಣ ವೃತ್ತಿಯನ್ನು ಇನ್ನೂ ಗಂಭೀರವಾಗಿ ಕೈಗೊಳ್ಳಿ ಎಂಬ ಎಚ್ಚರಿಸಿದ ಹಾಗೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ. ದಾದಾಪೀರ್ ನವಿಲೇಹಾಳ್ ಮಾತನಾಡಿ, ಹಳೆಯ ವಿದ್ಯಾರ್ಥಿಗಳು ಕೇವಲ ತಾವು ಓದಿದ ಕಾಲೇಜಿಗೆ ಬಂದು ಹೋಗುವುದು ಅಲ್ಲ. ಅದರ ಸ್ಥಿತಿಗತಿ ಅರಿತು ಪ್ರಗತಿಗೆ ಶ್ರಮಿಸಬೇಕೆಂದರು.

ಹಳೆಯ ವಿದ್ಯಾರ್ಥಿಗಳು ತಮ್ಮ ಕೈಲಾದ ಕೊಡುಗೆ ನೀಡುವ ಮೂಲಕ ಕಾಲೇಜಿನ ಅಭಿವೃದ್ಧಿಗೆ ಸಹಕರಿಸುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಪ್ರೊ. ಬಿ.ಬಿ. ಪಾಟೀಲ್, ಡಾ. ಈಶ್ವರಪ್ಪ, ಪ್ರೊ. ಗಂಗಾಧರಯ್ಯ, ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ, ಪ್ರೊ. ಸಿ.ಕೆ. ಮಹೇಶ್ವರಪ್ಪ, ಡಾ. ಜಿ.ಎನ್. ಮಲ್ಲಿಕಾರ್ಜುನಪ್ಪ, ಪ್ರೊ. ಶಂಕರ ಆರ್. ಶೀಲಿ, ಡಾ. ಮರುಳಸಿದ್ದಪ್ಪ, ಪ್ರೊ. ಕೆ. ಬುಳ್ಳಪ್ಪ, ಪ್ರೊ. ಶಿವಮೂರ್ತಿ, ಪ್ರೊ. ಜಯನಾಯ್ಕ, ಡಾ. ಎಸ್.ಆರ್. ಅಂಜಿನಪ್ಪ, ಡಾ. ದಾದಾಪೀರ್ ನವಿಲೇಹಾಳ್, ಪ್ರೊ. ಬಸವರಾಜ್ ಸಿ., ತಹಶೀಲ್ದಾರ್, ಕಾಲೇಜಿನ ಪತ್ರಾಂಕಿತ ವ್ಯವಸ್ಥಾಪಕರಾದ ಟಿ. ಗೀತಾದೇವಿ ಅವರಿಗೆ ಗುರು ವಂದನೆ ಸಲ್ಲಿಸಲಾಯಿತು.

ವೇದಿಕೆ ಸಂಚಾಲಕ ಕೆ.ಬಿ. ಶ್ರೀಶೈಲಕುಮಾರ್, ಹಳೆಯ ವಿದ್ಯಾರ್ಥಿಗಳಾದ ಲೆಕ್ಕಪರಿಶೋಧಕ ನಾಗರಾಜಮಠ ರಾಚಯ್ಯ, ಅಬಕಾರಿ ಇಲಾಖೆ ಅಧೀಕ್ಷಕ ಎಂ.ಪಿ. ರಂಗಯ್ಯ ಉಪಸ್ಥಿತರಿದ್ದರು.

ಪ್ರಾಧ್ಯಾಪಕರಾದ ಆರ್. ಯಶೋಧ ಪ್ರಾರ್ಥಿಸಿದರು. ದೀಪ ಸ್ವಾಗತಿಸಿದರು. ವೀರನಗೌಡ ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ.ಬಿ. ಶ್ರೀಶೈಲಕುಮಾರ್ ವಂದಿಸಿದರು. ಉಪನ್ಯಾಸಕರಾದ ನಳಿನಿ ನಿರೂಪಿಸಿದರು.

## ನಗರದಲ್ಲಿ ಸಮೂಹ ಗೀತೆ ಕರೋಕೆ ಗಾಯನ

ದಾವಣಗೆರೆ,ಆ.31- ನಗರದ 'ಜಿಲ್ಲೆ ಸಮಾಚಾರ' ದಿನಪತ್ರಿಕೆ ಬಳಗದಿಂದ ಸೆ.17 ರಂದು ಹಿರಿಯರಿಗೆ-ಕಿರಿಯರಿಗೆ ಸಾರ್ವಜನಿಕವಾಗಿ ಉಚಿತ ಕರೋಕೆ ಕನ್ನಡ ಗಾಯನ ಸ್ಪರ್ಧೆ ಮತ್ತು ಸಮೂಹ ಗೀತೆ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಈ ಸ್ಪರ್ಧೆಯ ಮುಖ್ಯಸ್ಥ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಸ್ಪರ್ಧೆಯಲ್ಲಿ ಭಾಗವಹಿಸುವವರು ಇದೇ ದಿನಾಂಕ ಸೆ. 10ರ ಒಳಗಾಗಿ ಮೊ. 7892429349, 9738712125 ಈ ವ್ಯಾಟ್ಸಾಪ್ ಸಂಖ್ಯೆಗೆ ಹೆಸರು ನೋಂದಾಯಿಸಬಹುದು ಎಂದು ಸಂಸ್ಥೆಯ ಸಂಸ್ಥಾಪಕ ವಿ.ಹನುಮಂತಪ್ಪ ತಿಳಿಸಿದ್ದಾರೆ.

## ಇಂಡಿಯಾವನ್ನು 'ಭಾರತ' ಎಂದು ಬದಲಿಸುವ ಮೋದಿ ನಡೆ ಮುರ್ಖತನದ್ದು

**ಡಿಬಿ ಆಕ್ರೋಶ**

ದಾವಣಗೆರೆ, ಸೆ. 5- ಇಂಡಿಯಾ ಎಂದಿರುವ ಹೆಸರನ್ನು ಭಾರತ ಎಂದು ಬದಲಿಸಲು ಹೊರಟಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯ ನಡೆ ಮೂರ್ಖತನದ್ದು ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಆಕ್ರೋಶ ವ್ಯಕ್ತಪಡಿಸಿದ್ದಾರೆ

ಪ್ರಧಾನಿ ನರೇಂದ್ರ ಮೋದಿ ಅವರ ದುರಾಡಳಿತವನ್ನು ಕೊನೆಗಾಣಿಸಲು ವಿರೋಧ ಪಕ್ಷಗಳು ಮೈತ್ರಿಕೂಟವನ್ನು ರಚಿಸಿಕೊಂಡು, ಇಂಡಿಯಾ ಎಂಬ ಹೆಸರಿಟ್ಟ ಕಾರಣಕ್ಕಾಗಿ, ಕೇಂದ್ರ ಸರ್ಕಾರ ದೇಶದ ಹೆಸರನ್ನು ಭಾರತ ಎಂದು ಬದಲಾಯಿಸಲು ಮುಂದಾಗಿದೆ.

ಇಂಡಿಯಾ ಮೈತ್ರಿ ಕೂಟದ ಬಗ್ಗೆ ಪ್ರಧಾನಿ ಮೋದಿ ಹಾಗೂ ಬಿಜೆಪಿಗೆ ಇಷ್ಟೊಂದು ಭಯಪಟ್ಟಿರುವುದೇ ದೇಶದ ಹೆಸರು ಮರುನಾಮಕರಣಕ್ಕೆ, ಇಂಡಿಯಾ ಮೈತ್ರಿಕೂಟದ ಮೇಲಿನ ಭಯವಲ್ಲದೆ ಮತ್ತೇನು ಕಾರಣ ? ಎಂದು ಬಸವರಾಜ್ ಪ್ರಶ್ನಿಸಿದ್ದಾರೆ.

ಭಾರತ ಎಂದು ಬದಲಾಯಿಸಿದ ತಕ್ಷಣ ಈ ದೇಶ ಬದಲಾದೀತೆ. ಬದಲಾಯಿಸಬೇಕಾದುದು ಹೆಸರನ್ನಲ್ಲ ಬದಲಿಗೆ ದೇಶದ ಪ್ರಧಾನಿ ಮೋದಿಯ ಆಡಳಿತವನ್ನು ಅಧಿಕಾರದ ಗದ್ದುಗೆಯಿಂದ ಬದಲಾಯಿಸಬೇಕೆಂದು ವಾಗ್ದಾಳಿ ನಡೆಸಿದರು.

ಜನರ ಜೀವನಮಟ್ಟ ಬದಲಾಯಿಸುವ ಜೊತೆಗೆ ದ್ವೇಷದ ಮೂಲಕ ಸಮಾಜದಲ್ಲಿ ಶಾಂತಿ ಕದಡುತ್ತಿರುವ ಬಿಜೆಪಿ ಭಕ್ತರ ಮನಸ್ಸನ್ನು ಬದಲಾಯಿಸಿ, ಈ ದೇಶವನ್ನು ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿ ಬದಲಾಯಿಸಿ ಎಂದು ಬಸವರಾಜ್ ಒತ್ತಾಯಿಸಿದ್ದಾರೆ.

ಇಂಡಿಯಾ ಮತ್ತು ಭಾರತ ಎಂಬ ಎರಡೂ ಹೆಸರುಗಳು ಭಾರತೀಯರ ಎದೆಯೊಳಗೆ ಹಚ್ಚೊತ್ತಿವೆ. ಇಂಡಿಯಾ ಎಂದರೆ ಬೇರೆಯಲ್ಲ ಭಾರತ ಎಂದರೆ ಬೇರೆಯಲ್ಲ ಎಂಬ ಸಾಮಾನ್ಯ ಜ್ಞಾನ ವಿಲ್ಲದ ಮೋದಿ ನಮ್ಮ ದೇಶಕ್ಕೆ ದೊರೆತಿರುವುದು ಹಾಸ್ಯಾಸ್ಪದ ಎಂದು ಟೀಕಿಸಿದರು.

ಈ ದೇಶಕ್ಕೆ ಇಂಡಿಯಾ ಬದಲು ಭಾರತ ಎಂದು ನಾಮಕರಣ ಮಾಡಿದರೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ವಿರೋಧ ಪಕ್ಷಗಳ ಇಂಡಿಯಾ ಹೆಸರನ್ನು ಕೇಳಿ, ಹೆದರಿ ಅಪ್ರಸ್ತುತಗೊಳಿಸಲು ಹೊರಟಿರುವುದು ಬಿಜೆಪಿಯ ಮೂರ್ಖತನ ಎಂದು ಕಿಡಿಕಾರಿದ್ದಾರೆ.

ಕಾಂಗ್ರೆಸ್ ಪಕ್ಷ ಹಲವು ದಶಕಗಳಿಂದ ನಮ್ಮ ದೇಶವನ್ನು ಮೇರಾ ಭಾರತ್ ಮಹಾನ್ ಎಂಬ ಘೋಷ ವಾಕ್ಯವನ್ನು ಬಳಸುತ್ತಾ ಬಂದಿರುವುದು ಮೋದಿಗೆ ತಿಳಿದಿಲ್ಲವೇ ? ಎಂದು ಪ್ರಶ್ನಿಸಿದ್ದಾರೆ.

## 9ರಂದು ಶ್ರೀಕೃಷ್ಣ, ರಾಧೆಯ ವೇಷಭೂಷಣ ಸ್ಪರ್ಧೆ

ದಾವಣಗೆರೆ, ಸೆ. 5 - ಲಯನ್ಸ್ ಕ್ಲಬ್, ಜ್ಞಾನ ಸೌರಭ ಕಲ್ಚರಲ್ ಅಂಡ್ ಎಜ್ಯುಕೇಷನಲ್ ಟ್ರಸ್ಟ್ ಮತ್ತು ಎಸ್‌ಜೆಎಮ್ ಪಬ್ಲಿಕ್ ಸ್ಕೂಲ್ ಇವರ ಸಂಯುಕ್ತಾಶ್ರಯದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ನಗರ ಮಟ್ಟದ ಚಿಣ್ಣರ ಶ್ರೀಕೃಷ್ಣ ಮತ್ತು ರಾಧೆಯ ವೇಷಭೂಷಣ ಸ್ಪರ್ಧೆಯನ್ನು ಇದೇ ದಿನಾಂಕ 9 ರಂದು ಬೆಳಿಗ್ಗೆ 10.30 ರಿಂದ ಲಯನ್ಸ್ ಕ್ಲಬ್ ಶಾಲೆಯಲ್ಲಿ ಆಯೋಜಿಸಲಾಗಿದೆ. ನಗರದ ಎಲ್ಲಾ ಶಾಲೆಯ ಮುಖ್ಯೋಪಾಧ್ಯಾಯರು ತಮ್ಮ ಶಾಲೆಯಲ್ಲಿ ಅಭ್ಯಸಿಸುತ್ತಿರುವ ಎಲ್‌ಕೆಜಿ ಯಿಂದ 1ನೇ ತರಗತಿಯ ಮಕ್ಕಳನ್ನು ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಬೇಕು ಎಂದು ಟ್ರಸ್ಟ್ ಅಧ್ಯಕ್ಷ ಡಿ. ಮಹೇಶ್ವರಪ್ಪ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 8217607934, 9880686866.

## ಸಚಿವ ಉದಯನಿಧಿ ಸ್ಟ್ಯಾಲಿನ್ ಹೇಳಿಕೆ ಖಂಡನೀಯ : ಕ್ರಮಕ್ಕೆ ಆಗ್ರಹ

ದಾವಣಗೆರೆ, ಸೆ.5- ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡುವ, ರಾಷ್ಟ್ರದ್ರೋಹದ, ಕೋಮು ಪ್ರಚೋದನೆ ಹೇಳಿಕೆ ನೀಡಿರುವ ತಮಿಳುನಾಡಿನ ಸಚಿವ ಉದಯನಿಧಿ ಸ್ಟ್ಯಾಲಿನ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಜಿ ಮೇಯರ್ ಬಿ.ಜಿ. ಅಜಯ್‌ಕುಮಾರ್ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಿಳುನಾಡಿನ ಮುಖ್ಯಮಂತ್ರಿ ಪುತ್ರ, ಯುವ ಕಲ್ಯಾಣ ಮತ್ತು ಕ್ರೀಡಾಭಿವೃದ್ಧಿ ಸಚಿವ ಉದಯನಿಧಿ ಅವರು ಕೇವಲ ಓಟ್ ಬ್ಯಾಂಕ್ ರಾಜಕೀಯ ಹಾಗೂ ಓಲೈಕೆಗಾಗಿ ಸನಾತನ ಹಿಂದೂ ಧರ್ಮವನ್ನು ಡೆಂಗ್ಯೂ, ಕೊರೋನಾ, ಮಲೇರಿಯಾಗಳಿಗೆ ಸಮಾನವಾದುದು ಎಂದು ಹೇಳಿರುವುದು ಅತ್ಯಂತ ಖಂಡನೀಯ ಎಂದರು.

ಜವಾಬ್ದಾರಿಯುತ ಸ್ಥಾನದಲ್ಲಿರುವವರು ಈ ರೀತಿ ಸಮಾಜದಲ್ಲಿ ವಿಷ ಬೀಜ ಬಿತ್ತುವ ಕೆಲಸ ಮಾಡುವುದು ಸರಿಯಲ್ಲ. ಈ ಹಿಂದೆ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಲಷ್ಕರ್ ಎ ತೋಯ್ಬ ಉಗ್ರವಾದಿ ಸಂಘಟನೆಗಿಂತ ಹಿಂದುತ್ವ ಸಂಘಟನೆಗಳು ಅಪಾಯಕಾರಿ ಎಂದು ಹೇಳಿಕೆ ನೀಡಿದ್ದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದಲ್ಲದೇ ಹಲವಾರು ರಾಜಕೀಯ ಮುಖಂಡರು ಹಿಂದುತ್ವದ ನಿರ್ಮೂಲನೆ ಹೇಳಿಕೆ ನೀಡಿದ್ದಾರೆ. ದೇಶದ ಬಹುತೇಕ ಜನರ ಮನಸನ್ನು ಘಾಸಿಗೊಳಿಸಿರುವ, ಧರ್ಮಗಳ ನಡುವೆ ಕಿತ್ತಾಟ ಹಚ್ಚುವ ಕೆಲಸ ಮಾಡುತ್ತಿರುವ ಇಂತಹವರ ವಿರುದ್ಧ ರಾಷ್ಟ್ರಪತಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದರು. ಇಂತಹ ಹೇಳಿಕೆಗಳ ಹಿಂದೆ ವಿದೇಶಿ ಮತಾಂತರಿಗಳ ಕೈವಾಡವಿದೆ. ಸನಾತನ ಧರ್ಮದ ವಿರುದ್ಧ ಭಾಷಣ ಮಾಡಿರುವ ಉದಯನಿಧಿ ಸ್ಟ್ಯಾಲಿನ್ ಅವರ ವಿರುದ್ಧ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜು ನೀಲಗುಂದ, ಕೊಟ್ರೇಶ ಗೌಡ್ರು, ರಾಕೇಶ್, ಗುರುಪ್ರಸಾದ್, ರವಿಕಿರಣ್, ಚನ್ನಬಸವನಗೌಡ್ರು, ಪ್ರದೀಪ್ ಉಪಸ್ಥಿತರಿದ್ದರು.

## ನಾಗನೂರಿನ ಭೂಮಾತಾ ರೈತ ಉತ್ಪಾದಕರ ಕಂಪನಿಯ ವಾರ್ಷಿಕ ಸಭೆ



ದಾವಣಗೆರೆ, ಸೆ. 5- ತಾಲ್ಲೂಕಿನ ನಾಗನೂರು ಭೂಮಾತಾ ರೈತ ಉತ್ಪಾದಕರ ಕಂಪನಿಯ 2022-23 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಕಂಪನಿ ಕಚೇರಿಯ ಆವರಣದಲ್ಲಿ ನಡೆಯಿತು.

ಕಂಪನಿ ಅಧ್ಯಕ್ಷ ವಿ. ಅರುಣ್ ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಉಪಾಧ್ಯಕ್ಷ ಎನ್.ಜಿ. ಕರಿಬಸಪ್ಪ, ನಿರ್ದೇಶಕರಾದ ಎಸ್.ಎಂ. ಮಂಜುನಾಥ್, ಎನ್.ಎಂ. ಬಸವರಾಜ್, ಎ. ಅಶೋಕ್, ಎನ್.ಹೆಚ್. ಗಣೇಶ್, ಎನ್.ಡಿ. ಮಧು, ಎನ್.ಕೆ. ನಾಗರಾಜಪ್ಪ, ಕೆ.ವಿ. ಸುರೇಶ್, ಡಿ.ಆರ್. ಧನ್ಯಕುಮಾರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎನ್.ಕೆ. ಶ್ರೀನಿವಾಸ್, ಸಹಾಯಕ ಕಾರ್ಯ ನಿರ್ವಹಣಾಧಿಕಾರಿ ಡಿ.ಆರ್. ದಯಾನಂದ, ಸ್ಥಳೀಯ ಸಂಪನ್ಮೂಲ ವ್ಯಕ್ತಿ ಪಿ. ಮಹೇಶ್ವರಪ್ಪ ಭಾಗವಹಿಸಿದ್ದರು.

ಕೃಷಿ ಇಲಾಖೆ ಸಹಾಯಕ ಕೃಷಿ ನಿರ್ದೇಶಕ ಡಿ.ಎಂ. ಶ್ರೀಧರಮೂರ್ತಿ ಕೃಷಿ ಮತ್ತು ನ್ಯಾನೋ ಯೂರಿಯಾ ಬಳಕೆ ಬಗ್ಗೆ ರೈತರಿಗೆ ಮಾಹಿತಿ ನೀಡಿದರು.

## ಶಿವಲಿಂಗವನ್ನು ಕಾರಂಜಿ ರೂಪದಲ್ಲಿ ಅಲಂಕಾರಿಕ ವಸ್ತುವಾಗಿ ಬಳಕೆ : ಆಕ್ಷೇಪ

ದಾವಣಗೆರೆ, ಸೆ. 5- ಹಿಂದೂಗಳ ಆರಾಧ್ಯ ದೈವ ಶಿವಲಿಂಗವನ್ನು ಕಾರಂಜಿ ರೂಪದಲ್ಲಿ ಅಲಂಕಾರಿಕ ವಸ್ತುವನ್ನಾಗಿ ದೆಹಲಿಯ ಬೀದಿಗಳಲ್ಲಿ ಬಳಕೆ ಮಾಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೋಟ್ಯಾಂತರ ಭಾರತೀಯರಿಗೆ ಅವಮಾನ ಮಾಡಿದೆ ಎಂದು ಆಮ್ ಆದ್ಮಿ ಪಾರ್ಟಿಯ ರಾಜ್ಯ ಜಂಟಿ ಕಾರ್ಯದರ್ಶಿ ಕೆ.ಎಲ್. ರಾಘವೇಂದ್ರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ದೆಹಲಿಯ ದೌಲಾ ಕೌನನಲ್ಲಿ ಜಿ.20 ಶೃಂಗಸಭೆಯ ಹಿನ್ನೆಲೆಯಲ್ಲಿ ಶಿವಲಿಂಗದ ಆಕಾರದ ಕಾರಂಜಿಗಳನ್ನು ಅಳವಡಿಸಿದ್ದಾರೆ. ಶಿವಲಿಂಗವನ್ನು ಪೂಜಿಸುವ ವೀರಶೈವ ಲಿಂಗಾಯತ ಸಮುದಾಯಕ್ಕೆ ಶಿವಲಿಂಗವನ್ನು ಗೌರವಿಸುವ ಸಮಸ್ತ ಹಿಂದೂಗಳಿಗೆ ತೋರಿದ ಅಗೌರವ ಇದಾಗಿದೆ ಎಂದು ಹೇಳಿದರು.

ಹಿಂದೂಗಳ ಪವಿತ್ರ ಸಂಕೇತವಾದ ಶಿವಲಿಂಗವನ್ನು ಅವಮಾನಿಸಿರುವುದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ತಕ್ಷಣ ಕೇಂದ್ರ ಸರ್ಕಾರ ತನ್ನ ತಪ್ಪನ್ನು ತಿದ್ದಿಕೊಂಡು ಶಿವಲಿಂಗ ಆಕಾರದ ಅಲಂಕಾರಿಕ ಕಾರಂಜಿಗಳನ್ನು ತೆರವುಗೊಳಿಸಬೇಕು. ಶಿವಲಿಂಗಗಳನ್ನು ಸೂಕ್ತ ಗೌರವದ ಜೊತೆಗೆ ಸೂಕ್ತ ಸ್ಥಳಗಳಲ್ಲಿ ಪ್ರತಿಷ್ಠಾಪನೆ ಮಾಡಬೇಕು ಎಂದು ತಾಕೀತು ಮಾಡಿದರು.

ವಾಸ್ತವದಲ್ಲಿ ಹಿಂದೂ ದೇವರನ್ನು ಬಿಜೆಪಿ ಕೇವಲ ಮತ ಸೆಳೆಯುವುದಕ್ಕಾಗಿ ಬಳಕೆ ಮಾಡುತ್ತದೆ ಎಂದು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಆಮ್ ಆದ್ಮಿ ಪಾರ್ಟಿ ಜಿಲ್ಲಾಧ್ಯಕ್ಷ ಶಿವಕುಮಾರ್, ಸಿ. ಅರುಣ್ ಕುಮಾರ್, ಆದಿಲ್ ಖಾನ್, ಪ್ರೊ. ಧರ್ಮಾನಾಯ್ಕ, ರವೀಂದ್ರ ಇದ್ದರು.

## ಶಿಕ್ಷಕ ಅಜಯ್ ನಾರಾಯಣ ಅವರಿಗೆ ಲಯನ್ಸ್ ಸನ್ಮಾನ



ದಾವಣಗೆರೆ,ಸೆ.5- ನಗರದ ಲಯನ್ಸ್ ಕ್ಲಬ್ ವತಿಯಿಂದ ಲಯನ್ಸ್ ಭವನದಲ್ಲಿ ಇಂದು ಏರ್ಪಾಡಾಗಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಶಿಕ್ಷಕರೂ, ಪ್ರತಿಭಾನ್ವಿತ ಗಾಯಕರೂ, ಸಂಪನ್ಮೂಲ ವ್ಯಕ್ತಿಗಳೂ ಆದ ಸಿ. ಅಜಯ್ ನಾರಾಯಣ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಲಯನ್ಸ್ ಕ್ಲಬ್ ಅಧ್ಯಕ್ಷ ಉಮೇಶ್ ನೀಲಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಡಾ. ಬಿ.ಎಸ್. ನಾಗಪ್ರಕಾಶ್, ಲಯನ್ಸ್ ಮಾಜಿ ಅಧ್ಯಕ್ಷರುಗಳಾದ ಆರ್.ಜಿ. ಶ್ರೀನಿವಾಸಮೂರ್ತಿ, ಟಿ.ಎಂ. ಪಂಚಾಕ್ಷರಯ್ಯ, ಬೆಳ್ಳೂಡಿ ಶಿವಕುಮಾರ್, ಕಾರ್ಯದರ್ಶಿ ಭೀಮಾನಂದ ಶೆಟ್ಟಿ, ಖಜಾಂಚಿ ಟಿ.ಮಹಾಲಿಂಗೇಶ್ ಮತ್ತಿತರರು ಉಪಸ್ಥಿತರಿದ್ದರು.


## ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯನಗರ ಜಿಲ್ಲೆಯ, ಹರಪನಹಳ್ಳಿ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರವರ ಕಛೇರಿಯ ಅಧಿಕೃತ ಸರ್ಕಾರಿ ಕೆಲಸ ಕಾರ್ಯಗಳಿಗಾಗಿ ಒಂದು ವರ್ಷದ ಅವಧಿಗೆ ಅಂದರೆ 2023-24ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕ ಸಹಿತ ವಾಹನಗಳನ್ನು ಒದಗಿಸಲು ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮಾನ್ಯ ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ಬೆಂಗಳೂರುರವರ ನಿರ್ದೇಶನದಂತೆ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಶ್ರೀ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ ಪ್ರವಾಸೋದ್ಯಮ ಇಲಾಖೆಯಿಂದ ಸಹಾಯ ಧನದ ಮೂಲಕ ವಾಹನ ಪಡೆದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು.

| | | |
|---|---|---|
| 01) | ಟೆಂಡರ್ ಅರ್ಜಿಗಳನ್ನು ವಿತರಣೆ ಮಾಡುವ ದಿನಾಂಕ : | ದಿನಾಂಕ : 05.09.2023 |
| 02) | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | ದಿನಾಂಕ : 20.09.2023 ಮಧ್ಯಾಹ್ನ 3.30 ಗಂಟೆಗೆ |
| 03) | ತಾಂತ್ರಿಕ ಬಿಡ್ ತೆರೆಯುವ ದಿನಾಂಕ | ದಿನಾಂಕ : 20.09.2023 ಸಂಜೆ 4.30 ಗಂಟೆಗೆ |
| 04) | ಆರ್ಥಿಕ ಬಿಡ್ ತೆರೆಯುವ ದಿನಾಂಕ | ದಿನಾಂಕ : 20.09.2023 ಸಂಜೆ 5.00 ಗಂಟೆಗೆ |
| 05) | ಅರ್ಜಿ ಶುಲ್ಕ (ರೂ.) | ಉಚಿತ |
| 06) | ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ರೂ.) | ರೂ. 480000.00 |
| 07) | ಪಾವತಿಸಬೇಕಾದ ಇ.ಎಂ.ಡಿ. ಮೊತ್ತ (ರೂ.) | ರೂ. 10000.00 |
| 08) | ಅರ್ಜಿ ದೊರೆಯುವ ಸ್ಥಳ | ಸಹಾಯಕ ನಿರ್ದೇಶಕರು (ಗ್ರೇಡ್-01), ಸಮಾಜ ಕಲ್ಯಾಣ ಇಲಾಖೆ, ಹಳೇ ತಾಲ್ಲೂಕು ಕಛೇರಿ ಆವರಣ, ಹರಪನಹಳ್ಳಿ ಟೌನ್, ತಾಲ್ಲೂಕು. |

ಸಹಿ/- ಸಹಾಯಕ ನಿರ್ದೇಶಕರು (ಗ್ರೇಡ್-1)
ಸಮಾಜ ಕಲ್ಯಾಣ ಇಲಾಖೆ ಹರಪನಹಳ್ಳಿ.


## ನಗರದಲ್ಲಿ ಇಂದು ದತ್ತಿ ಕಾರ್ಯಕ್ರಮ, ವಿಶೇಷ ಉಪನ್ಯಾಸ

ಶರಣ ಸಾಹಿತ್ಯ ಪರಿಷತ್ ದಾವಣಗೆರೆ ಘಟಕ ಹಾಗೂ ತಾಲ್ಲೂಕು ಕದಳಿ ಮಹಿಳಾ ವೇದಿಕೆ ಇವರುಗಳ ಸಹಯೋಗದಲ್ಲಿ ದತ್ತಿ ಕಾರ್ಯಕ್ರಮ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮವು ಇಂದು ಮಧ್ಯಾಹ್ನ 3 ಗಂಟೆಗೆ ಎ.ವಿ.ಕೆ. ಮಹಿಳಾ ಕಾಲೇಜು ಆವರಣದಲ್ಲಿರುವ ಶ್ರೀಮತಿ ಪಾರ್ವತಮ್ಮ ಡಾ. ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮದಲ್ಲಿ ಲಿಂ. ಇಂದುಮತಿ ಎಂ. ಪಾಟೀಲ ದತ್ತಿಯನ್ನು ದತ್ತಿ ದಾನಿಗಳಾದ ಶಂಕರ್ ಜಿ. ಅಕ್ಕಿಹಾಳ್ ನಡೆಸಿಕೊಡುವರು.

ಕಾರ್ಯಕ್ರಮವನ್ನು ಎ.ವಿ.ಕೆ. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ರಮೇಶ್ ದೂಪದಹಳ್ಳಿ ಉದ್ಘಾಟಿಸುವರು. ಎಂ. ಪರಮೇಶ್ವರಪ್ಪ ಸಿರಿಗೆರೆ ಅಧ್ಯಕ್ಷತೆ ವಹಿಸುವರು. ಅನುಭಾವದಲ್ಲಿ ಎಂ.ಬಿ. ನಾಗರಾಜ್, ಕಾಕನೂರು ಅವರು 'ಶರಣ ಸಂಸ್ಕೃತಿ' ವಿಷಯ ಕುರಿತು ನಡೆಯುವುದು. ಗೀತಾ ಬಸವರಾಜ್ ಬಹುಮಾನ ವಿತರಿಸುವರು.

ಕಾರ್ಯಕ್ರಮದಲ್ಲಿ ಕೆ.ಬಿ. ಪರಮೇಶ್ವರಪ್ಪ, ಎಂ.ಎಸ್. ನಾಗರಾಜಪ್ಪ, ಶರಣೆ ಗಾಯತ್ರಿ ವಸ್ತ್ರದ ಉಪಸ್ಥಿತರಿರುವರು.

## ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಭಾರೀ ರಿಯಾಯಿತಿ: ಇಂದು ಕೊನೆ ದಿನ



ದಾವಣಗೆರೆ, ಸೆ. 5- ಏಳು ಬ್ರಾಂಡೆಡ್ ಶೋ ರೂಮ್‌ಗಳು ಮುಚ್ಚಿದ್ದು, ಆ ರೆಡಿಮೇಡ್ ಉಡುಪುಗಳನ್ನು ನಗರದ ರೇಣುಕ ಮಂದಿರದಲ್ಲಿ ಸ್ಟಾಕ್ ಕ್ಲಿಯರೆನ್ಸ್‌ಗಾಗಿ ನೇರವಾಗಿ ಮಿಲ್‌ಗಳ ದರದಲ್ಲಿ ಗ್ರಾಹಕರಿಗೆ ಒದಗಿಸಬೇಕೆಂಬ ಸದುದ್ದೇಶದಿಂದ ಭಾರೀ ರಿಯಾಯಿತಿಯ ಮಾರಾಟ ಮೇಳವನ್ನು ಆಯೋಜಿಸಲಾಗಿದೆ. ಈ ಮಾರಾಟ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ ಬಂದಿತ್ತು. ಮಾರಾಟ ಮೇಳವನ್ನು ನಾಳೆ ದಿನಾಂಕ 6 ರಂದು ಕೊನೆಯ ದಿನವಾಗಿದೆ.

ಬ್ರಾಂಡೆಡ್ ಕಂಪನಿಗಳ ಉಡುಪುಗಳು ಮಕ್ಕಳು, ಯುವಕರು, ಪುರುಷರು, ವಯೋವೃದ್ದರು, ಹೀಗೆ ಎಲ್ಲ ವರ್ಗದವರಿಗೂ ಲಭ್ಯವಿದ್ದು, ಭಾರೀ ರಿಯಾಯಿತಿ ನೀಡಲಾಗಿದೆ.


**LADIES PG BUILDING FOR RENT**

ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.

**Mobi. : 95351 14063, 96203 71544, 97428 35642**



## ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ, ರೂಂ. ನಂ. 25, ಜಿಲ್ಲಾಡಳಿತ ಕಛೇರಿ, ಪಿ.ಬಿ. ರಸ್ತೆ, ದಾವಣಗೆರೆಯಲ್ಲಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರು ಇವರ ಪರವಾಗಿ ನೀಡಿದ ಸಾರ್ವಜನಿಕ ನೋಟಿಸ್ ಏನೆಂದರೆ.

ಕರ್ನಾಟಕ ಗೃಹ ಮಂಡಳಿಯಿಂದ ಶ್ರೀಮತಿ ನಿರ್ಮಲಾ ಕೋಂ ಗುರುಬಸವರಾಜ ಇವರಿಗೆ ದಾವಣಗೆರೆ ಸಿಟಿ, ಕುಂದುವಾಡ ತುಂಗಭದ್ರಾ ಬಡಾವಣೆ, ಕೆ.ಹೆಚ್.ಬಿ. ಕಾಲೋನಿಯಲ್ಲಿ ನಿವೇಶನ ಸಂಖ್ಯೆ ಎಂಐಜಿ 2142 ವಿಶೇಷ ಚೇತನದ ಕೋಟಾದಲ್ಲಿ ಮಂಜೂರಾಗಿದ್ದು, ದಿನಾಂಕ : 13.03.2006ರಲ್ಲಿ ಮರಣ ಹೊಂದಿರುತ್ತಾರೆ. ಮತ್ತು ಅವರ ಪತಿ ಶ್ರೀ ಗುರುಬಸವರಾಜ ಇವರೂ ಸಹ ದಿನಾಂಕ : 19.08.2021 ರಂದು ಮರಣ ಹೊಂದಿದ್ದು, ಸದರಿಯವರ ವಾರಸುದಾರರಾದ ಶ್ರೀ ಡಾ. ದಿನೇಶ್ ಭದ್ರಶೆಟ್ಟಿ ಬಿನ್ ಶ್ರೀ ಗುರುಬಸವರಾಜ ಮತ್ತು ಶ್ರೀ ವೀರಣ್ಣ ಬಿನ್ ಗುರು ಬಸವರಾಜ ಈ ಉಭಯೇತರರಲ್ಲಿ ಶ್ರೀ ವೀರಣ್ಣ ಇವರು ಒಪ್ಪಿಗೆ ಪ್ರಮಾಣ ಪತ್ರದ ಮೂಲಕ ಷೆಡ್ಯೂಲ್ ನಿವೇಶನವನ್ನು ಡಾ. ದಿನೇಶ್ ಭದ್ರಶೆಟ್ಟಿ ಬಿನ್ ಗುರುಬಸವರಾಜ ಇವರ ಹೆಸರಿಗೆ ವರ್ಗಾವಣೆ ಮಾಡಿ ನಿವೇಶನವನ್ನು ನೋಂದಣಿ ಮಾಡಿಕೊಡಲು ಅವರಿಂದ ಯಾವುದೇ ತಕರಾರು ಇರುವುದಿಲ್ಲ. ಆದಾಗ್ಯೂ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಯಾರಾದರೂ ಹಕ್ಕು ಹಿತಾಸಕ್ತಿ ಯುಳ್ಳವರು ತಕರಾರನ್ನು ಈ ನೋಟಿಸ್ ತಲುಪಿದ ಏಳು ದಿನಗಳ ಒಳಗಾಗಿ ಈ ಮೇಲ್ಕಂಡ ಕರ್ನಾಟಕ ಗೃಹ ಮಂಡಳಿ ಆಫೀಸಿಗೆ ಸಲ್ಲಿಸತಕ್ಕದ್ದು.

ಷೆಡ್ಯೂಲ್ : ದಾವಣಗೆರೆ ಕುಂದುವಾಡ ಕೆ.ಹೆಚ್.ಬಿ. ಕಾಲೋನಿ, ನಿವೇಶನ ಸಂಖ್ಯೆ : ಎಂಐಜಿ 2142 ಇದರ ಅಳತೆ 9x15 ಮೀಟರ್

ಸ್ಥಳ : ದಾವಣಗೆರೆ. ಸಹಿ/- (ಎಸ್.ಆರ್. ಚಂದ್ರಶೇಖರ್) ಕರ್ನಾಟಕ ಗೃಹ ಮಂಡಳಿ
ದಿನಾಂಕ ; 30.08.2023 ಪರ ವಕೀಲರು, ದಾವಣಗೆರೆ. ಮೊ. : 99454 99376



## ಉಕ್ಕಡಗಾತ್ರಿಯಲ್ಲಿ ಶ್ರಾವಣ ಮಾಸದ ಬೆಳ್ಳಿ ರಥೋತ್ಸವ

ಮಲೇಬೆನ್ನೂರು, ಸೆ. 5- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಪುಣ್ಯಾರಾಧನೆ ಹಾಗೂ ಶ್ರಾವಣ ಮಾಸದ ಅಂಗವಾಗಿ ಅಜ್ಜಯ್ಯನ ಬೆಳ್ಳಿ ರಥೋತ್ಸವವು ನಿನ್ನೆ ಸಂಭ್ರಮದಿಂದ ಜರುಗಿತು.ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ರಥಕ್ಕೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಲೋಕ ಕಲ್ಯಾಣಾರ್ಥವಾಗಿ ನಡೆಸಿದ ಗಣ ಹೋಮ, ರುದ್ರಹೋಮಗಳಿಗೆ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಪೂರ್ಣಾಹುತಿ ಅರ್ಪಿಸಿದರು.

ರಾತ್ರಿ ಅಜ್ಜಯ್ಯನ ಪಾಲಿಕೋತ್ಸವವು ಭಾರೀ ಹೂವಿನ ಅಲಂಕಾರದೊಂದಿಗೆ ವಿಜೃಂಭಣೆಯಿಂದ ನಡೆಯಿತು. ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಸ್. ಸುರೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಪ್ಲಾಸ್ಟರ್ ಗಣೇಶ ವಿಗ್ರಹಗಳನ್ನು ನೀರಿನ ಮೂಲಗಳಲ್ಲಿ ವಿಸರ್ಜನೆಗೆ ನಿಷೇಧ

ದಾವಣಗೆರೆ, ಸೆ. 5 - ಗಣೇಶ ಚತುರ್ಥಿ ಅಂಗವಾಗಿ ಗಣೇಶ ವಿಗ್ರಹಗಳನ್ನು ಪ್ರತಿಷ್ಠಾಪಿಸಿ ನೀರಿನ ಮೂಲಗಳಲ್ಲಿ ವಿಸರ್ಜನೆ ಮಾಡಲಾಗುತ್ತದೆ. ಆದರೆ ವಿಸರ್ಜನೆಯಿಂದಾಗುವ ಜಲ ಮಾಲಿನ್ಯ ನಿಯಂತ್ರಿಸುವ ನಿಟ್ಟಿನಲ್ಲಿ ಕೆರೆ, ನದಿ, ಕಾಲುವೆ, ಬಾವಿ ಹಾಗೂ ಇತರೆ ಜಲ ಮೂಲಗಳಲ್ಲಿ ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ಮಾಡಿರುವ ಹಾಗೂ ಬಣ್ಣ ಲೇಪಿತ ವಾದಂತಹ ವಿಗ್ರಹಗಳನ್ನು ವಿಸರ್ಜಿಸುವುದನ್ನು ನಿಷೇಧಿಸಲಾಗಿದೆ.

ಜಿಲ್ಲೆಯಲ್ಲಿ ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ಮಾಡಿರುವ ಹಾಗೂ ಬಣ್ಣ ಲೇಪಿತವಾದಂತಹ ಗಣಪತಿ ವಿಗ್ರಹಗಳ ಮಾರಾಟ ಮಾಡುವುದು ಕಂಡುಬಂದಲ್ಲಿ ಕಾನೂನು ಕ್ರಮ ಕೈಗೊಳ್ಳಲು ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಅವರು ಸೂಚನೆ ನೀಡಿದ್ದಾರೆ.

# ಮಳೆಯ ಕೊರತೆಯಲ್ಲ, ತಂತ್ರಜ್ಞಾನದ ಕೊರತೆ

## ಮರಳು ಗಾಡಿನ ಇಸ್ರೇಲ್ ಸಮೃದ್ಧವಾಗಿರುವಾಗ, ಭಾರತದಲ್ಲೇಕೆ ಬರ..?

ರಾಜ್ಯದಲ್ಲಿ ಸೆಪ್ಟೆಂಬರ್ 4ರವರೆಗೆ ವಾಡಿಕೆಯ 691.7 ಮಿ.ಮೀ. ಮಳೆಯ ಬದಲು 555.4 ಮಿ.ಮೀ. ಮಳೆಯಾಗಿದೆ. ಹೀಗಾಗಿ ರಾಜ್ಯದಲ್ಲಿ ಶೇ.20ರಷ್ಟು ಮಳೆಯ ಕೊರತೆಯಾಗಿದೆ. ಇದು ರಾಜ್ಯದಲ್ಲಿ ಬರ ಪರಿಸ್ಥಿತಿ ಘೋಷಣೆಗೆ ಕಾರಣವಾಗಿದೆ.

ಸಹಜವೇ. ಆದರೆ, ಒಂದು ವೇಳೆ ಇಸ್ರೇಲ್‌ನಲ್ಲಿ ಇಷ್ಟೇ ಪ್ರಮಾಣದ ಮಳೆ ಬಿದ್ದಿದ್ದರೆ ಅದು ಬರ ಎನಿಸಿಕೊಳ್ಳುತ್ತಿತ್ತೇ? ಏಕೆಂದರೆ ಇಸ್ರೇಲ್‌ನ ಸರಾಸರಿ ಮಳೆ ಪ್ರಮಾಣ ವರ್ಷಕ್ಕೆ 435 ಮಿ.ಮೀ. ಆಗಿದೆ. ಈ ಮಳೆಯಲ್ಲೇ ಇಸ್ರೇಲ್ ಸಾಮಾನ್ಯ ಪರಿಸ್ಥಿತಿ ನಿಭಾಯಿಸುವುದಷ್ಟೇ ಅಲ್ಲದೇ, ಜಲ ಸಮೃದ್ಧಿಯನ್ನೂ ಕಾಣುತ್ತಿದೆ! ಹೀಗಾಗಿ, ಆಧುನಿಕ ಕಾಲದಲ್ಲಿ ಬರ ಹಾಗೂ ಸಮೃದ್ಧಿ ನಿರ್ಧರಿಸುವುದು ಮಳೆಯಲ್ಲ. ನೀರು ಬಳಸಿಕೊಳ್ಳುವ ತಂತ್ರಜ್ಞಾನ.

ಇಸ್ರೇಲ್ ಮರಳುಗಾಡು. ಅದರ ಸುತ್ತಲಿನ ದೇಶಗಳೂ ಈಗಲೂ ನೀರಿನ ಕೊರತೆಯಿಂದ ಬಳಲುತ್ತಿವೆ. ಆದರೆ, ಕಳೆದ ನಾಲ್ಕೈದು ದಶಕಗಳಿಂದ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿ ಕೊಂಡ ಕಾರಣಕ್ಕೆ ಇಸ್ರೇಲ್ ಜಲ ಸಮೃದ್ಧವಾಗಿದೆ.

ಇಸ್ರೇಲ್ ಏನೋ ಮುಂದುವರೆದ ದೇಶವಾಗಿದೆ. ಹೀಗಾಗಿ ಆಧುನಿಕ ತಂತ್ರಜ್ಞಾನ ಬಳಸಿಕೊಳ್ಳಲು ಸಾಧ್ಯವಾಗಿದೆ. ಭಾರತವನ್ನು ಅದರ ಜೊತೆ ಹೋಲಿಕೆ ಮಾಡಲಾಗದು ಎಂದು ಕೆಲವರು ಹೇಳ ಬಹುದು. ಆದರೆ, ಚಂದ್ರನ ಮೇಲೆ ಕಾಲಿಟ್ಟು, ಸೂರ್ಯನ ಕಡೆ ಜಿಗಿಯುವ ತಂತ್ರಜ್ಞಾನ ಹೊಂದಿದ ಮೇಲೆ ಈ ಮಾತು ಒಪ್ಪಲಾಗದು.

ಅದರಲ್ಲೂ ಭಾರತ ಈಗ ವಿಶ್ವದ ಮುಂದುವರೆದ ದೇಶಗಳ ಸಾಲಿನಲ್ಲಿ ಗುರುತಿಸಿಕೊಳ್ಳುವ ಬಯಕೆ ಹೊಂದಿದೆ.



ಹೀಗಿರುವಾಗ ಜಲ ಸಂಪನ್ಮೂಲ ಬಳಕೆಗೆ ತಂತ್ರಜ್ಞಾನ ಇಲ್ಲ ಎಂದು ನುಣುಚಿ ಕೊಳ್ಳಲಾಗದು.

ಇಸ್ರೇಲ್ ರೂಪುಗೊಂಡಿದ್ದು ಹಾಗೂ ಭಾರತ ಸ್ವಾತಂತ್ರ್ಯ ಪಡೆದಿದ್ದು ಬಹುತೇಕ ಒಂದೇ ಸಮಯದಲ್ಲಿ. ಆರಂಭದಿಂದಲೂ ಇಸ್ರೇಲ್ ಬರ ಪೀಡಿತವಾಗಿತ್ತು. ಹೀಗಾಗಿ ನೀರಿನ ದಕ್ಷ ಬಳಕೆಗೆ ಆದ್ಯತೆ ನೀಡುವುದು ಅನಿವಾರ್ಯವಾಗಿತ್ತು. 1959ರ ವೇಳೆಯೇ ಇಸ್ರೇಲ್ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳುವತ್ತ ಹೆಜ್ಜೆ ಹಾಕಿತ್ತು. ಈಗ ಇಸ್ರೇಲ್‌ನಲ್ಲಿ ಶೇ.75ರಷ್ಟು ಕೃಷಿ ಹನಿ ನೀರಾವರಿಯನ್ನು ಅವಲಂಬಿಸಿದೆ.

1980ರ ವೇಳೆಗೆ ಇಸ್ರೇಲ್‌ನ ಶುದ್ಧ ನೀರಿನ ಶೇ.72ರಷ್ಟು ಕೃಷಿಗೆ ಬಳಕೆಯಾಗುತ್ತಿತ್ತು. ನಂತರ 2015ರ ವೇಳೆಗೆ ಕೃಷಿಗೆ ಬಳಸಲಾಗುವ ನೀರಿನಲ್ಲಿ ಶುದ್ಧ ನೀರಿನ ಬಳಕೆ ಶೇ.14 ಮಾತ್ರವಾಗಿತ್ತು. ಕೃಷಿಗೆ ಅಗತ್ಯವಾದ ಬಹುತೇಕ ನೀರು ಈಗ ಕೊಳಚೆಯ ಮರು ಬಳಕೆಯಿಂದ ಬರುತ್ತಿದೆ.

ಆದರೆ, ಭಾರತದಲ್ಲಿ ತಂತ್ರಜ್ಞಾನ ಅಳವಡಿಕೆ ಒತ್ತಟ್ಟಿಗಿರಲಿ ಇರುವ ನೀರನ್ನು ಬಳಸಿಕೊಳ್ಳುವ ಬಗ್ಗೆ ಸೂತ್ರವೇ ಇಲ್ಲ ಎಂಬುದು ಅಚ್ಚರಿ. ಕಾವೇರಿ ನೀರು ಹಂಚಿಕೆಗೆ ಸಂಕಷ್ಟ ಸೂತ್ರವೇ ಇಲ್ಲ! ಮಳೆ ಬಂದಾಗ ಕ್ರಿಕೆಟ್ ಆಟದ ಫಲಿತಾಂಶಕ್ಕಾಗಿ ಡಕ್‌ವರ್ತ್ - ಲೂಯಿಸ್ ಸೂತ್ರ ಇದೆ. ನೀರು ಹಂಚಿಕೆಗೆ ಮಾತ್ರ ಸೂತ್ರವಿಲ್ಲ.

ಹತ್ತಿರದ ಭದ್ರಾ ಅಣೆಕಟ್ಟೆಯಲ್ಲಿ ಯಾವ ತಿಂಗಳಿಗೆ ಎಷ್ಟು ನೀರಿದ್ದಾಗ ಯಾವ ರೀತಿ ಬಳಸಬೇಕು ಎಂಬುದಕ್ಕೂ ಸೂತ್ರವಿಲ್ಲ. ಪ್ರತಿ ಬಾರಿ ಸಭೆ ನಡೆಸಿ ಏನೋ ಒಂದು ತೀರ್ಮಾನ ತೆಗೆದು ಕೊಳ್ಳಲಾಗುತ್ತದೆ. ಇಷ್ಟು ಸಾಲದು ಎಂಬಂತೆ ತೆಗೆದುಕೊಂಡ ತೀರ್ಮಾನ ಮತ್ತೆ ಮರು ಪರಿಶೀಲಿಸಿ ರೈತರನ್ನು ಪೇಚಿಗೆ ಸಿಲುಕಿಸುವುದೂ ಇದೆ.

ಮುಂದಿನ ದಿನಗಳಲ್ಲಿ ದೇಶದ ಜನಸಂಖ್ಯೆ ಇನ್ನಷ್ಟು ಹೆಚ್ಚಾಗ ಲಿದೆ. ಅದರಂತೆ ನೀರಿನ ಬೇಡಿಕೆಯೂ ಏರಲಿದೆ. ಹವಾಮಾನ ಪರಿಸ್ಥಿತಿಯೂ ಬದಲಾಗಲಿದೆ. ಹೀಗಿರುವಾಗ ನೀರಿನ ಸದ್ಬಳಕೆಗೆ ಸಮರ್ಪಕ ತಂತ್ರಜ್ಞಾನ ಹೊಂದುವುದು ಅನಿವಾರ್ಯ. ಚಂದ್ರನ ಮೇಲೆ ಕಾಲಿರಿಸಿದ ನಂತರವೂ ಭರತ ಭೂಮಿಯಲ್ಲಿ ನೀರಿಲ್ಲ ಎಂದು ಹೇಳುವುದರಲ್ಲಿ ಯಾವುದೇ ಅರ್ಥವಿಲ್ಲ. ಈ ನಿರ್ಲಕ್ಷ್ಯಕ್ಕೆ ಯಾವುದೇ ನೆಪವೂ ಸಮರ್ಥನೀಯವಲ್ಲ.

- ಎಸ್.ಎ. ಶ್ರೀನಿವಾಸ್

## ಸ್ಟ್ಯಾಲಿನ್ ಭಾಷಣದ ವಿರುದ್ಧ ಕ್ರಮ ಸಿ.ಜೆ.ಐ.ಗೆ ಗಣ್ಯ ನಾಗರಿಕರ ಪತ್ರ

ನವದೆಹಲಿ, ಸೆ. 5 – ಸನಾತನ ಧರ್ಮ ನಿರ್ಮೂಲನೆ ಮಾಡಬೇಕು ಎಂಬ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಹೇಳಿಕೆ ಪರಿಗಣಿಸಿ ಕ್ರಮ ತೆಗೆದುಕೊಳ್ಳುವಂತೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿ.ಜೆ.ಐ.) ಡಿ.ವೈ. ಚಂದ್ರಚೂಡ್ ಅವರಿಗೆ 260ಕ್ಕೂ ಹೆಚ್ಚು ಗಣ್ಯ ನಾಗರಿಕರು ಪತ್ರ ಬರೆದಿದ್ದಾರೆ.

ದೆಹಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಸ್.ಎನ್. ಢಿಂಗ್ರ ಸೇರಿದಂತೆ 262 ಗಣ್ಯರು ಈ ಪತ್ರ ಬರೆದಿದ್ದಾರೆ. ಸ್ಟ್ಯಾಲಿನ್ ದ್ವೇಷ ಭಾಷಣ ಮಾಡುವುದಷ್ಟೇ ಅಲ್ಲದೇ, ತಮ್ಮ ಹೇಳಿಕೆಗಾಗಿ ಕ್ಷಮೆ ಕೇಳಲು ನಿರಾಕರಿಸಿದ್ದಾರೆ ಎಂದು ಪತ್ರದಲ್ಲಿ ಹೇಳಲಾಗಿದೆ.

ಭಾರತದ ದೊಡ್ಡ ಸಂಖ್ಯೆಯ ಜನರ ವಿರುದ್ಧ ದ್ವೇಷ ಭಾಷಣ ಮಾಡಲಾಗಿದೆ. ಇದು ಸಂವಿಧಾನದ ಸಾರದ ಮೇಲೆ ಹಾಗೂ ಭಾರತದ ಸೆಕ್ಯುಲರ್ ಕಲ್ಪನೆ ಮೇಲೆ ನಡೆಸಿದ ದಾಳಿ. ದೇಶದ ಸೆಕ್ಯುಲರ್ ಸ್ವಭಾವ ರಕ್ಷಿಸಲು ಕ್ರಮ ಬೇಕಿದೆ ಎಂದು ಪತ್ರದಲ್ಲಿ ಹೇಳಲಾಗಿದೆ.

ತಮಿಳುನಾಡು ಸರ್ಕಾರ ದ್ವೇಷ ಭಾಷಣದ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿಲ್ಲ. ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದೂ ಪತ್ರದಲ್ಲಿ ಒತ್ತಾಯಿಸಲಾಗಿದೆ.

## ಮಿಸ್‌ಟೀನ್ ಮಲ್ನಾಡು ಫ್ಯಾಷನ್ ಶೋನಲ್ಲಿ ನೇಹಾಗೆ ಪ್ರಥಮ ಸ್ಥಾನ



ದಾವಣಗೆರೆ, ಸೆ. 5 - ಆಪ್ಸ್ ಮಾಡೆಲ್ ಮ್ಯಾನೇಜ್‌ಮೆಂಟ್ ವತಿಯಿಂದ ಚಿಕ್ಕಮಗಳೂರಿನಲ್ಲಿ ನಡೆದ ಮಿಸ್ಟರ್, ಮಿಸಸ್, ಮಿಸ್ ಟೀನ್ ಮಲ್ನಾಡು-2023 ರ ಫ್ಯಾಷನ್ ಶೋನಲ್ಲಿ ನಗರದ ನೇಹಾ ಚನ್ನಗಿರಿ ಅವರು ಪ್ರಥಮ ಸ್ಥಾನ ಗಳಿಸುವ ಮೂಲಕ ನಗರಕ್ಕೆ ಕೀರ್ತಿ ತಂದಿದ್ದಾರೆ.

ರಂಜಿತ್ ಮಲ್ ಗಾಂಧಿ ಕಾರ್ಮಸ್ ಕಾಲೇಜಿನಲ್ಲಿ ಬಿಬಿಎ ಓದುತ್ತಿರುವ ಇವರು, ಚನ್ನಗಿರಿ ಮನೆತನದವರಾದ ರಶ್ಮಿ ಮತ್ತು ಭರತ್ ಎಸ್. ಚನ್ನಗಿರಿ ಅವರ ಪುತ್ರಿ. ದೇವಲೀಲಾ ಮತ್ತು ಚನ್ನಗಿರಿ ಸತ್ಯನಾರಾಯಣ ಹಾಗೂ ವಿಜಯಲಕ್ಷ್ಮಿ ಮತ್ತು ಗೋವಿಂದರಾಜ್ ಗುಪ್ತಾ ಅವರ ಮೊಮ್ಮಗಳು

## ನಗರದಲ್ಲಿ ಇಂದಿನಿಂದ 3 ದಿನ ಕುಡಿಯುವ ನೀರು ಪೂರೈಕೆ ವ್ಯತ್ಯಯ

ದಾವಣಗೆರೆ, ಸೆ. 5 - ಮಹಾನಗರ ಪಾಲಿಕೆಯ ರಾಜನಹಳ್ಳಿ ಸಗಟು ನೀರು ಸರಬರಾಜು ಕೊಳವೆಯ ರಾಷ್ಟ್ರೀಯ ಹೆದ್ದಾರಿ ಹನಗವಾಡಿ ಹತ್ತಿರ ಒಡೆದಿದ್ದು, ದುರಸ್ತಿ ಕಾರ್ಯ ನಿರ್ವಹಿಸಬೇಕಿರುವುದರಿಂದ ದಾವಣಗೆರೆ ನಗರ ವ್ಯಾಪ್ತಿಯಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ನಾಳೆ ದಿನಾಂಕ 6ರಿಂದ ಮೂರು ದಿನ ವ್ಯತ್ಯಯವಾಗಲಿದೆ ಎಂದು ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ತಿಳಿಸಿದ್ದಾರೆ.

## ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷಾ ಮಾದರಿ ಬದಲಾವಣೆಗೆ ಎಐಡಿಎಸ್‌ಓ ಸ್ವಾಗತ

ದಾವಣಗೆರೆ, ಸೆ. 5- ರಾಜ್ಯ ಸರ್ಕಾರವು ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷಾ ಮಾದರಿಯನ್ನು ಬದಲಾವಣೆ ಮಾಡಿರುವುದನ್ನು ಎಐಡಿಎಸ್‌ಓ ಸಂಘಟನೆ ಸ್ವಾಗತಿಸಿದೆ.

ಸಂಘಟನೆಯ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಪ್ರತಿಕ್ರಿಯಿಸಿ, 10 ಮತ್ತು 12 ನೇ ತರಗತಿಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆ ಮತ್ತು ಅದರಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪೂರಕ ಪರೀಕ್ಷೆ ಎಂಬ ಮಾದರಿಯನ್ನು ಕೈಬಿಟ್ಟು ನಂ. 1, 2. 3 ಮಾದರಿಯಲ್ಲಿ ಪರೀಕ್ಷೆ ನಡೆಸುವ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಂಡಿದ್ದು, ಸರ್ಕಾರದ ಈ ನಿರ್ಧಾರವನ್ನು ಎಐಡಿಎಸ್‌ಓ ಸ್ವಾಗತಿಸುವುದಾಗಿ ತಿಳಿಸಿದ್ದಾರೆ.

ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳ ಮೇಲೆ ಉಂಟಾಗುವ ಒತ್ತಡವನ್ನು ಮತ್ತು ಅನುತ್ತೀರ್ಣರಾದ ವಿದ್ಯಾರ್ಥಿಗಳಲ್ಲಿ ಉಂಟಾಗುವ ಮಾನಸಿಕ ತಳವಳವನ್ನು ನಿವಾರಿಸಲು ಇದು ಸಹಕಾರಿಯಾಗಬಹುದು ಎಂದು ಹೇಳಿದ್ದಾರೆ.

ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು, ಶಿಕ್ಷಕರು, ಪಾಲಕರನ್ನು ಒಳಗೊಂಡ ಪ್ರಜಾತಾಂತ್ರಿಕ ಪ್ರಕ್ರಿಯೆ ಮುಖಾಂತರ ಈ ನಿರ್ಧಾರವನ್ನು ಅನುಷ್ಠಾನಕ್ಕೆ ತರಬೇಕು ಎಂದು ಒತ್ತಾಯಿಸಿದ್ದಾರೆ.

# ಜಗಳೂರು ಕ್ಷೇತ್ರದಲ್ಲಿ ಮಳೆ ಕೊರತೆ, 'ಬರಪೀಡಿತ' ಪಟ್ಟಿಗೆ ಸೇರಿಸಲು ಎಸ್.ವಿ. ರಾಮಚಂದ್ರ ಆಗ್ರಹ



ಜಗಳೂರು, ಸೆ. 5 - ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವ್ಯಾಪಕ ಮಳೆ ಕೊರತೆ ಉಂಟಾಗಿ ಬೆಳೆಗಳು ಸಂಪೂರ್ಣವಾಗಿ ಒಣಗುತ್ತಿದ್ದು, ಸರ್ಕಾರ ಕ್ಷೇತ್ರವನ್ನು ಬರಪೀಡಿತ ಪಟ್ಟಿಗೆ ಸೇರಿಸಬೇಕು ಎಂದು ಮಾಜಿ ಶಾಸಕ ಎಸ್. ವಿ. ರಾಮಚಂದ್ರ ಆಗ್ರಪಡಿಸಿದರು.

ಪಟ್ಟಣದ ತಮ್ಮ ಗೃಹ ಕಚೇರಿಯಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಬರಪೀಡಿತ ತಾಲ್ಲೂಕುಗಳೆಂದು ಶಿಫಾರಸ್ಸು ಮಾಡಿದ ಮೊದಲನೇ ಪಟ್ಟಿಯ 116 ತಾಲ್ಲೂಕುಗಳು ಮತ್ತು 2ನೇ ಪಟ್ಟಿಯಲ್ಲಿ ಶಿಫಾರಸ್ಸು ಮಾಡಿದ 83 ತಾಲ್ಲೂಕುಗಳಲ್ಲಿ ಜಗಳೂರು ತಾಲ್ಲೂಕು ಸೇರ್ಪಡೆಯಾಗಿಲ್ಲ. ಆದರೆ ಅರೆ ನೀರಾವರಿ ಸೌಲಭ್ಯ ಇರುವ ಮಾಯಕೊಂಡ, ನ್ಯಾಮತಿ ಮತ್ತು ಚನ್ನಗಿರಿ ತಾಲ್ಲೂಕುಗಳು ಸೇರ್ಪಡೆಯಾಗಿವೆ.

ನಿಜವಾಗಿಯೂ ಜಿಲ್ಲೆಯಲ್ಲಿ ಹೆಚ್ಚಿನ ಬರ ಪರಿಸ್ಥಿತಿ ಇರುವುದು ಜಗಳೂರು ಕ್ಷೇತ್ರದಲ್ಲಿ, ಬೆಳೆಗಳು ಒಣಗಿ ರೈತರು ಕಂಗಾಲಾಗಿದ್ದಾರೆ. ಕೆಲವೇ ತಿಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದು. ಸರ್ಕಾರದ ಈ ತಾರತಮ್ಯ ಧೋರಣೆ, ರೈತರಿಗೆ ಗಾಯದ ಮೇಲೆ ಬರೆಯದೆ ದಂತಾಗಿದೆ ಎಂದು ರಾಮಚಂದ್ರ ತಿಳಿಸಿದರು.

ಶಾಸಕರು ತಕ್ಷಣವೇ ತುರ್ತು ಗಮನಹರಿಸಿ ಸರ್ಕಾರದ ಗಮನ ಸೆಳೆದು ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅವರು ಒತ್ತಾಯಿಸಿದರು.

ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಕಳೆದ ನಾಲ್ಕು ತಿಂಗಳಿಂದ ಸ್ಥಗಿತವಾಗಿದೆ. ಜಲ ಜೀವನ್ ಮಿಷನ್ ಯೋಜನೆಯ 482 ಕೋಟಿ ರೂಪಾಯಿಗಳ ಕಾಮಗಾರಿಯನ್ನು ಗುತ್ತಿಗೆದಾರರು ಮಾಡಲು ನಿರಾಕರಿಸಿದ್ದಾರೆ. ನಗರೋತ್ಥಾನ ಯೋಜನೆ ಮತ್ತು ಲೋಕೋಪಯೋಗಿ ಇಲಾಖೆಯಿಂದ ಆರಂಭಿಸಿದ ಹಲವು ಕೋಟಿಯ ರಸ್ತೆ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆ ಮುಗಿದಿದ್ದರೂ ಕಾಮಗಾರಿ ಆರಂಭಿಸಲಾಗಿಲ್ಲ. ಅರಸೀಕೆರೆ ಹೋಬಳಿಯ ಎಚ್. ಕೆ.ಡಿ.ಬಿ. ಯೋಜನೆಯ ಕಾಮಗಾರಿಗಳು ಸಹ ಸ್ಥಗಿತಗೊಂಡಿವೆ. ಈ ಬಗ್ಗೆ ನೂತನ ಶಾಸಕರು ಗಮನಹರಿಸಿ, ಗುತ್ತಿಗೆದಾರರು ಮತ್ತು ಅಧಿಕಾರಿಗಳ ಸಭೆ ಕರೆದು, ಎಲ್ಲ ಕಾಮಗಾರಿಗಳನ್ನು ಪ್ರಾರಂಭಿಸಿ ಜನರಿಗೆ ಅನುಕೂಲ ಕಲ್ಪಿಸಿ ಕೊಡಬೇಕೆಂದು ಮಾಜಿ ಶಾಸಕರು ಮನವಿ ಮಾಡಿಕೊಂಡರು.

ಕ್ಷೇತ್ರದ ಮಾಜಿ ಶಾಸಕರೂ ಒಬ್ಬರು ಬಿಜೆಪಿಗೆ ಸೇರ್ಪಡೆಯಾಗುತ್ತಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ರಾಮಚಂದ್ರ ಅವರು, ಹೆಚ್ಚು ಮತ ಪಡೆದಿರುವ ನಾನೇ ಇದ್ದೀನಿ ಬೇರೆಯವರ ಅವಶ್ಯಕತೆ ಇಲ್ಲ. ಬರುವ ಲೋಕಸಭಾ ಚುನಾವಣೆಯಲ್ಲಿ ಹಾಲಿ ಸಂಸದ ಜೆ.ಎಂ. ಸಿದ್ದೇಶ್ವರ ಅವರೇ ಪಕ್ಷದ ಅಭ್ಯರ್ಥಿಯಾಗಲಿದ್ದಾರೆ ಎಂದು ಅವರು ಪ್ರಶ್ನೆ ಒಂದಕ್ಕೆ ಉತ್ತರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಎಚ್. ಸಿ. ಮಹೇಶ್, ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷ ಎಸ್. ಸಿದ್ದಪ್ಪ ಸದಸ್ಯರಾದ ಪಾಪ ಲಿಂಗಪ್ಪ, ದೇವರಾಜ್, ಮುಖಂಡರಾದ ಆರಾಧ್ಯ, ಸತೀಶ್ ನಾಯಕ್, ರಮೇಶ್ ಮುಂತಾದವರು ಉಪಸ್ಥಿತರಿದ್ದರು.

## ಭಾರತ ಮಾತಾ ಕೀ ಜೈ ಎಂದು ಘೋಷಣೆ ಕೂಗಿದ ಕಾರ್ಯಕರ್ತರು

**ಕಾಂಗ್ರೆಸ್‌ಗೆ ಜೈಕಾರ ಹಾಕಿ ಎಂದ ಪಕ್ಷದ ನಾಯಕಿ**

ಜೈಪುರ, ಸೆ. 5 – ಭಾರತ್ ಮಾತಾ ಕೀ ಜೈ ಘೋಷಣೆಯ ಬದಲು ಕಾಂಗ್ರೆಸ್ ಪಕ್ಷಕ್ಕೆ ಜೈಕಾರ ಹಾಕಿ ಎಂದು ರಾಜಸ್ಥಾನದ ಕಾಂಗ್ರೆಸ್ ನಾಯಕಿ ಆರಾಧನ ಮಿಶ್ರ ಹೇಳಿರುವುದು ವೈರಲ್ ಆಗಿದೆ.

ಆದರ್ಶ ನಗರ ಬ್ಲಾಕ್‌ನ ಕಾಂಗ್ರೆಸ್ ಕಾರ್ಯಕರ್ತರ ಸಭೆ ನಡೆಯುತ್ತಿತ್ತು. ಆಗ, ಎರಡು ಬಣಗಳ ನಡುವೆ ಚಕಮಕಿ ನಡೆಯುತ್ತಿತ್ತು. ಒಂದು ಬಣ ಅಭ್ಯರ್ಥಿಯೊಬ್ಬರ ಪರ ಘೋಷಣೆ ಕೂಗುತ್ತಿತ್ತು. ಗದ್ದಲದ ಕಾರಣದಿಂದ ಅಸಮಾಧಾನಗೊಂಡ ಮಿಶ್ರ, ಅಭ್ಯರ್ಥಿಯ ಪರ ಘೋಷಣೆ ಕೂಗಬಾರದು ಎಂದು ಹೇಳಿದರು. ತಕ್ಷಣ ಕಾರ್ಯಕರ್ತರು ಭಾರತ್ ಮಾತಾ ಕಿ ಜೈ ಘೋಷಣೆ ಆರಂಭಿಸಿದರು.

ಮತ್ತೆ ಮಧ್ಯ ಪ್ರವೇಶಿಸಿದ ಮಿಶ್ರ, ಘೋಷಣೆ ಕೂಗಲು ಅಷ್ಟೊಂದು ಆಸೆ ಇದ್ದರೆ ಕಾಂಗ್ರೆಸ್ ಪರವಾಗಿ ಘೋಷಣೆ ಕೂಗಿ ಎಂದು ಹೇಳಿದರು.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಮಿಶ್ರ, ನಾನು ಭಾರತ್ ಮಾತಾ ಕಿ ಜೈ ಘೋಷಣೆಗೆ ವಿರೋಧಿಸಿರಲಿಲ್ಲ. ಯಾವುದೇ ಅಭ್ಯರ್ಥಿ ಪರ ಘೋಷಣೆ ಬೇಡ ಎಂದು ತಿಳಿಸಿದ್ದೆ ಎಂದಿದ್ದಾರೆ.